ಡಾ. ಬಸವರಾಜ ಪೋಲಿಸ್ ಪಾಟೀಲರ ಜೀವನ ಮತ್ತು ಕೃತಿಗಳು

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಜಾನಕಿ ಸೂರ್ಯಕಾಂತ

ಸಂಶೋಧನ ಮಾರ್ಗದರ್ಶಕರು

ಡಾ. ಗಂಗಾಂಬಿಕಾ ಪಾಟೀಲ

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

ಸೆಪ್ಟೆಂಬರ್-೨೦೦೯

ಡಾ. ಬಸವರಾಜ ಪೋಲಿಸ್ ಪಾಟೀಲರ ಜೀವನ ಮತ್ತು ಕೃತಿಗಳು

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಜಾನಕಿ ಸೂರ್ಯಕಾಂತ

ಸಂಶೋಧನ ಮಾರ್ಗದರ್ಶಕರು

ಡಾ. ಗಂಗಾಂಬಿಕಾ ಪಾಟೀಲ

ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.
ಸೆಪ್ಟೆಂಬರ್-೨೦೦೯

ಪ್ರಮಾಣ ಪತ್ರ

"ಡಾ. ಬಸವರಾಜ ಪೋಲಿಸ್ ಪಾಟೀಲರ ಜೀವನ ಮತ್ತು ಕೃತಿಗಳು" ಎಂಬ ನಿಬಂಧವನ್ನು ಡಾ. ಗಂಗಾಂಬಿಕಾ ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಬೀದರ.
ದಿನಾಂಕ: ೨೬-೦೮-೨೦೦೮

ಜಾನಕಿ ಸೂರ್ಯಕಾಂತ
ಎಂ.ಫಿಲ್. ವಿದ್ಯಾರ್ಥಿನಿ
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ
ಸಂಶೋಧನ ಕೇಂದ್ರ, ಬೀದರ.

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ ಸೂರ್ಯಕಾಂತ ಅವರು ಸಾದರಪಡಿಸಿದ "ಡಾ. ಬಸವರಾಜ ಪೊಲೀಸ್ ಪಾಟೀಲರ ಜೀವನ ಮತ್ತು ಕೃತಿಗಳು" ಎಂಬ ಸಂಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರದಲ್ಲಿ ಈ ಸಂಶೋಧನೆಯನ್ನು ಕೈಕೊಂಡಿದ್ದಾರೆ.

ಪ್ರಸ್ತುತ ಸಂಶೋಧನ ಸಂಪ್ರಬಂಧದ ವಿಷಯ ಕುರಿತು ಯಾವುದೇ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆದಿರುವುದಿಲ್ಲ. ಅಲ್ಲದೇ ಈ ಮೊದಲು ಸಂಪ್ರಬಂಧದ ಯಾವುದೇ ಭಾಗ ಇಡಿಯಾಗಿ ಅಥವಾ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲ. ಈ ಸಂಪ್ರಬಂಧ ಎಂ.ಫಿಲ್. ಪದವಿಗೆ ಅರ್ಹವಾಗಿದೆಯೆಂದು ಶಿಫಾರಸ್ಸು ಈ ಪ್ರಮಾಣ ಪತ್ರ ನೀಡುತ್ತೇನೆ.

ಸ್ಥಳ: ಬೀದರ

ದಿನಾಂಕ: ೧೬-೦೫-೨೦೦೮

ಡಾ. ಗಂಗಾಂಬಿಕಾ ಪಾಟೀಲ
ಸಂಶೋಧನ ಮಾರ್ಗದರ್ಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ

ಪರಿವಿಡಿ

ಅಧ್ಯಾಯಗಳು:



ಡಾ. ಬಸವರಾಜ ಪೋಲಿಸ ಪಾಟೀಲ

ಅಧ್ಯಾಯ–೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ.

ಪೀಠಿಕೆ:

ಜನಪದವು ಅತ್ಯಂತ ಪ್ರಾಚೀನವೂ, ಸಂಕೀರ್ಣವೂ ಮತ್ತು ವ್ಯಾಪಕವೂ ಆದ ಕ್ಷೇತ್ರವಾಗಿದೆ. ಅದು ಸಮಸ್ತ ಮಾನವನ ಜೀವನ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವುದು, ಹೀಗಾಗಿ ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಜಾನಪದವಿಲ್ಲದ ದೇಶ, ಜನಾಂಗವೇ ಇಲ್ಲ ಎಂದು ಹೇಳಬಹುದು. ಆದ್ದರಿಂದ ಜಾನಪದ ವಿಶ್ವ ವ್ಯಾಪ್ತಿಯನ್ನು ಹೊಂದಿದ ಕ್ಷೇತ್ರವಾಗಿದೆಯಂತಲೇ ಹೇಳಬೇಕು.

ವಿಶ್ವ ವ್ಯಾಪ್ತಿಯಾದ ಜಾನಪದ ಉಗಮ ಕುರಿತು ಹೇಳುವುದು ಅಸಾಧ್ಯವಾದರೂ, ಅದರ ಪ್ರಾಚೀನತೆ ಬಗೆಗೆ ಅಷ್ಟಿಷ್ಟು ಹೇಳಬಹುದಾಗಿದೆ. . ಮಾನವನ ನಾಗರಿಕತೆಯ ಉಗಮದೊಂದಿಗೆ. ಜಾನಪದವು ಉಗಮಗೊಂಡಿತೆಂದು ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಜನಪದ, ಜಾನಪದ ಅರ್ಥ, ಲಕ್ಷಣ ವಿವರಗಳನ್ನು ಕುರಿತು ಜಾಗತಿಕ ವಿದ್ವಾಂಸರಿಂದ ವ್ಯಾಪಕ ಚರ್ಚೆಗೊಂಡು ಇಂದು ಜಾನಪದವು ಅಧ್ಯಯನ ಶಿಸ್ತು ಆಗಿ ಬೆಳೆಯುತ್ತಿದೆ. ಒಂದು ಕಾಲಕ್ಕೆ ಜಾನಪದಕ್ಕೆ ಮೂಗು ಮುರಿಯುತ್ತಿದ್ದ ಜನರೇ ಇಂದು ಆ ಕ್ಷೇತ್ರದತ್ತ ಹೆಚ್ಚಿನ ಒಲವು ತೋರುತ್ತಿದ್ದಾರೆ. ಎಂದಿಗಿಂತಲೂ ಇಂದು ಜಾನಪದದ ವಿವಿಧ ಆಯಾಮಗಳ ಕುರಿತು ಅಧ್ಯಯನ ಮಾಡುವ ವಿದ್ವಾಂಸರ ದಂಡು ಇತ್ತ ಹರಿದು ಬರುತ್ತಿದ್ದು, ಅದರ ಅಧ್ಯಯನದ ಮಹತ್ವ ಹೆಚ್ಚಿಸಿದೆ. ಜಾನಪದವನ್ನು ಪೂರ್ಣ ಪ್ರಮಾಣದಲ್ಲಿ ಅಧ್ಯಯನ ಕ್ಷೇತ್ರವಾಗಿಸಿಕೊಂಡು ವಿಶಿಷ್ಟ ಸಾಧನೆಗೈದ ವಿದ್ವಾಂಸರಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರು ಪ್ರಮುಖರಾಗಿದ್ದಾರೆ.

ಅಧ್ಯಯನದ ಉದ್ದೇಶ:

ಜಾನಪದ ,ಕ್ಷೇತ್ರ ಅತ್ಯಂತ ಪ್ರಾಚೀನವಾಗಿದ್ದರೂ ಅದರ, ಅಧ್ಯಯನದ ಚರಿತ್ರೆ ಮಾತ್ರ ಸುಮಾರು ೨೦೦ ವರ್ಷಗಳಷ್ಟು

ಪ್ರಾಚೀನವಾಗಿದೆ. ಆರಂಭದಲ್ಲಿ ಬ್ರಿಟೀಷರ ವಸಾಹತುವಾಗಿದ್ದ ಭಾರತದಲ್ಲಿ ಅಂತೆಯೇ ಕರ್ನಾಟಕದಲ್ಲಿ ಪಾಶ್ಚಾತ್ಯ ವಿದ್ವಾಂಸರುಗಳಿಂದ ಜಾನಪದ ಕ್ಷೇತ್ರದ ಅಧ್ಯಯನವು ಜಾನಪದ ಪ್ರಕಾರಗಳಾದ ಗೀತೆ, ಕಥನ ಗೀತೆ, ಲಾವಣಿ, ಜನಪದ ಗಾದೆ, ಒಗಟುಗಳ ಸಂಗ್ರಹ ಸಂಪಾದನೆ ಪ್ರಕಟಣೆಗಳ ಮೂಲಕ ಪ್ರಾರಂಭವಾಯಿತು. ಜೆ.ಎಫ್. ಫ್ಲೀಟ್, ಬಿ.ಎಲ್. ರೈಸ್, ರೆವರೆಂಡ್ ಕಿಟಲ್ ಮುಂತಾದವರು ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ಜಾನಪದ ಪ್ರಕಾರಗಳ ಸಂಗ್ರಹವನ್ನು ಮಾಡಿದರು. ಕನ್ನಡ ಜಾನಪದ ಸಮೃದ್ಧತೆಯನ್ನು ಎತ್ತಿ ತೋರಿಸಿದ ನಂತರವೇ ನಮ್ಮ ವಿದ್ವಾಂಸರ ಗಮನ ಈ ಕ್ಷೇತ್ರದತ್ತ ಹರಿಯಿತು. ದಕ್ಷಿಣ ಕರ್ನಾಟಕದಲ್ಲಿ ಅರ್ಚಕ ರಂಗ ಸ್ವಾಮಿ ಬಿ.ಎಂ.ಶ್ರೀ, ಮಾಸ್ತಿ, ಗೋರೂರು ರಾಮಾಸ್ವಾಮಿ ಅಯ್ಯಂಗಾರ, ದೇವುಡು, ಡಿ.ವ್ಹಿ.ಜಿ. ಮುಂತಾದವರು ಮುಂಬೈ ಕರ್ನಾಟಕ ಪ್ರಾಂತದಲ್ಲಿ ದ.ರಾ. ಬೇಂದ್ರೆ ಬೆಟಗೇರಿ ಕೃಷ್ಣಶರ್ಮ, ಸಿಂಪಿಲಿಂಗಣ್ಣ ಮೊದಲಾದವರು .ಕರಾವಳಿ ಪ್ರದೇಶದಲ್ಲಿ ಶಿವರಾಮ ಕಾರಂತ ಮುಂತಾದ ಪರಿಣಿತರು ಜಾನಪದ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗೆಗೆ ಅಧ್ಯಯನ ಮತ್ತು ಚಿಂತನೆಗಳನ್ನು ನಡೆಸಿದರು. ಬೇರೆಡೆಗಳಲ್ಲಿ ಜಾನಪದ ಕ್ಷೇತ್ರಗಳಲ್ಲಿ ಸಂಗ್ರಹ ಪ್ರಕಟಣೆ ಭರ್ಜರಿಯಾಗಿ ನಡೆಯುತ್ತಿದ್ದರೆ, ನಿಜಾಂ ಸರಕಾರದ ಆಧೀನದಲ್ಲಿದ್ದ ಹೈದ್ರಾಬಾದ ಕರ್ನಾಟಕ ಪ್ರದೇಶವು ತಮ್ಮ ಸ್ವಾತಂತ್ರ್ಯ ಮತ್ತು ಕನ್ನಡದ ಅಸ್ತಿತ್ವದ ಸಲುವಾಗಿ ಬಲವಾದ ಹೋರಾಟದಲ್ಲಿ ತೊಡಗಿಸಿಕೊಳ್ಳಬೇಕಾಗಿತ್ತು. ಇಲ್ಲಿನವರಿಗೆ ಹೋರಾಟ ಮತ್ತು ಅಸ್ತಿತ್ವವೇ ಪ್ರಧಾನವಾಗಿದ್ದುದ್ದರಿಂದ ಈ ಕ್ಷೇತ್ರದತ್ತ ಲಕ್ಷ ಹರಿಸುವುದು ದೂರದ ಮಾತಾಗಿತ್ತು. ಇದು ನಮ್ಮ ಚರಿತ್ರೆಗೆ ಹಿಡಿದ ವಿಪರ್ಯಾಸವೇ ಎನ್ನಬೇಕು.

ಉಳಿದೆಡೆಗಳಿಗಿಂತ ಹೈದ್ರಾಬಾದ ಕರ್ನಾಟಕದಲ್ಲಿ ಜಾನಪದ ಕುರಿತು ಅಧ್ಯಯನ, ಚಿಂತನ, ಸಂಶೋಧನೆ ತುಂಬ ತಡವಾಗಿ ಆರಂಭಗೊಂಡಿತು. ಇಪ್ಪತ್ತನೆಯ ಶತಮಾನದ ಸುಮಾರು ೭೦ ರ ದಶಕದಿಂದಲೇ ಇಲ್ಲಿ ಜನಪದ ಸಾಹಿತ್ಯಾಧ್ಯಯನ ಪ್ರಾರಂಭವಾಯಿತು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯುವು ೭೦ ರ ದಶಕದಲ್ಲಿ ಗುಲಬರ್ಗಾದಲ್ಲಿ ಸ್ನಾತಕೋತ್ತರ

ಕೇಂದ್ರ ತೆರೆಯಿತು. ಕೇಂದ್ರಕ್ಕೆ ಡಾ. ಬಿ.ಬಿ. ಹೆಂಡಿ, ಡಾ. ಎಂ.ಜಿ. ಬಿರಾದಾರ, ಡಾ. ಎಂ.ಎಸ್. ಲಠ್ಠೆ, ಡಾ. ಸಂಗಮೇಶ ಸವದತ್ತಿ ಮಠ, ಡಾ. ಶಶಿಕಲಾ ಮೊಳ್ದಿ ಮುಂತಾದವರು ಪ್ರಾಧ್ಯಾಪಕರಾಗಿ ಬಂದರು. ಅದರಲ್ಲೂ ಪ್ರಮುಖರಾಗಿ ಡಾ. ಬಿ.ಬಿ. ಹೆಂಡಿ, ಡಾ ಎಂ.ಎಸ್. ಲಠ್ಠೆ ಮೊದಲಾದವರು ಜಾನಪದ ಸಾಹಿತ್ಯದ ಬಗೆಗೆ ಹೊಂದಿದ್ದ ಆಸಕ್ತಿ ಫಲವಾಗಿ ಸಂಗ್ರಹ, ಸಂಪಾದನೆ, ಪ್ರಕಟಣೆ ಕೆಲಸ ಕಾರ್ಯಗಳು ಪ್ರಾರಂಭವಾದವು. ಅಲ್ಲದೇ ಎಂ.ಎ. ಕನ್ನಡದ ಜೊತೆಗೆ ಜಾನಪದವನ್ನು ಒಂದು ಪತ್ರಿಕೆಯನ್ನಾಗಿ ಓದುವ ಅವಕಾಶ ವಿದ್ಯಾರ್ಥಿಗಳಿಗೆ ದೊರಕಿತು. ಅಧ್ಯಾಯನ ಕೇಂದ್ರದ ಪ್ರಾಧ್ಯಾಪಕರ ಪ್ರೋತ್ಸಾಹ ಚಿಂತನೆಗಳಿಂದ ಆಕರ್ಷಿತರಾದ ಕೆಲವು ಯುವಕರು ಜಾನಪದ ಸಾಹಿತ್ಯ ಕ್ಷೇತ್ರದತ್ತ ತಮ್ಮ ಸಂಪೂರ್ಣ ಒಲವು ತೋರಲಾರಂಭಿಸಿದರು. ಅದರಲ್ಲೂ ಕೆಲವರು ತಮ್ಮನ್ನು ಸಂಪೂರ್ಣವಾಗಿ ಜಾನಪದಕ್ಕೆ ಸಮರ್ಪಿಸಿಕೊಂಡರು. ಹೀಗೆ ತಮ್ಮನ್ನು ಸಮರ್ಪಿಸಿಕೊಂಡವರಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರೂ ಒಬ್ಬರಾಗಿದ್ದಾರೆ.

ಕನ್ನಡ ಜಾನಪದ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡ ಡಾ. ಪೋಲಿಸ್ ಪಾಟೀಲರು, ಎಂ.ಎ. ವ್ಯಾಸಂಗದ ನಂತರ ಮರಳಿ ಗ್ರಾಮಗಳ ಅಧ್ಯಯನದತ್ತ ಮುಖಮಾಡಿ ಈ ಪ್ರದೇಶದ ಅಪಾರವಾದ ಶ್ರೀಮಂತವಾದ ಜಾನಪದ ಸಾಹಿತ್ಯ ಪ್ರಕಾರಗಳನ್ನು ಬೆಳಕಿಗೆ ತರುವ ಕಾರ್ಯದಲ್ಲಿ ನಿರತರಾದರು. ೧೯೭೭ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ನೆರವಿನಿಂದ ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಶೋಧನೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇಲ್ಲಿನ ಅಪಾರ ಜಾನಪದ ಸಾಹಿತ್ಯದ ಗಣಿಯನ್ನೇ ಶೋಧಿಸಿ ಸಾಹಿತ್ಯ ಜಗತ್ತಿಗೆ ಪರಿಚಯಿಸಿದರು. ಅವರ ಸಾಹಿತ್ಯ ಸಂಶೋಧನೆಗಳಲ್ಲಿ ಹೈದ್ರಾಬಾದ ಕರ್ನಾಟಕ, ಗೀತ ಪ್ರಕಾರಗಳು, ಲಾವಣಿ, ಹಂತಿ ಹಾಡು, ಶರಣರ ಹಾಡುಗಳು, ಜನಪದ ಕಥೆಗಳು, ಒಗಟು, ಗಾದೆ ಪಡೆನುಡಿಗಳು, ದೊಡ್ಡಾಟ, ಸಣ್ಣಾಟಗಳು, ಮೋಹರಂ ಪದಗಳು ಮುಂತಾದ ಅನೇಕ ಪ್ರಕಾರಗಳನ್ನು ವ್ಯಾಪಕ ಕ್ಷೇತ್ರ ಕಾರ್ಯ

ಅಧ್ಯಯನದಿಂದ ಸಂಗ್ರಹಿಸಿದ್ದಾರೆ. ಅವುಗಳನ್ನು ವ್ಯವಸ್ಥಿತಗೊಳಿಸಿ ಅಧ್ಯಯನ ಕೈಕೊಂಡಿದ್ದಾರೆ. ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ.

ಡಾ. ಬಸವರಾಜ ಪೋಲಿಸ್ ಪಾಟೀಲರ ಕ್ಷೇತ್ರ ಕಾರ್ಯ ಪದ್ಧತಿ, ವಿಷಯ ವಸ್ತುಗಳ ಸಂಗ್ರಹ ವಿಧಾನ, ಪರಿಕ್ಷಣೆ, ವರ್ಗೀಕರಣ ಹಾಗೂ ವಿಶ್ಲೇಷಣಾ ಶಿಸ್ತು, ಲೋಕದೃಷ್ಟಿ ಜಾನಪದ ಸಾಹಿತ್ಯ ಅಧ್ಯಯನಕ್ಕೊಂದು ಮಾದರಿ ಶಿಸ್ತನ್ನು ಕಲ್ಪಿಸಿದೆ. ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶವೊಂದನ್ನು ಆಯ್ದುಕೊಂಡು ಆ ಪ್ರದೇಶದ ಜಾನಪದ ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವವನ್ನು ಇತರ ಕ್ಷೇತ್ರಗಳೊಂದಿಗೆ ತೌಲನಿಕಗೊಳಿಸಿ ನೋಡುವ ಮತ್ತು ಭಿನ್ನತೆಗೆ ಕಾರಣಗಳನ್ನು ಹುಡುಕುವ, ಅದರಿಂದ ಒಂದು ಪ್ರದೇಶದ ಜಾನಪದವು ಇನ್ನೊಂದರಿಂದ ಹೇಗೆ, ಯಾವುದರಲ್ಲಿ ಮಹತ್ವ ಪಡೆದಿದೆ ಎಂಬುದನ್ನು ಗ್ರಹಿಸುವ ಅವರ ಲೋಕದೃಷ್ಟಿ ಮೆಚ್ಚುವಂಥದ್ದು, ಇದರಿಂದಾಗಿ ಕರ್ನಾಟಕ ಜಾನಪದ ಸಾಹಿತ್ಯದಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರಿಗೆ ವಿಶಿಷ್ಟ ಸ್ಥಾನವಿದೆ. ಅವರು ಜಾನಪದ ವಿದ್ವಾಂಸರಾಗಿರುವಂತೆ ಕವಿ, ವಿಮರ್ಶಕ, ಶ್ರೇಷ್ಠ ಪ್ರಾಧ್ಯಾಪಕ, ಸಂಘಟಕರು, ಸಾಂಸ್ಕೃತಿಕ ಚಿಂತಕರೂ ಆಗಿದ್ದಾರೆ. ಹೀಗೆ ಕನ್ನಡ ಜಾನಪದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವೇ ಆಗಿರುವ ಅವರ ಜೀವನ ಮತ್ತು ಕೃತಿಗಳ ಬಗೆಗೆ ಈ ವರೆಗೂ ಸಂಶೋಧನಾಧ್ಯಯನ ನಡೆದಿರುವುದಿಲ್ಲ. ಹಾಗೆಯೇ ಡಾ. ಬಸವರಾಜ ಪೋಲಿಸ್ ಪಾಟೀಲರನ್ನು ಹೊರತುಪಡಿಸಿ ಕನ್ನಡ ಮತ್ತು ಜಾನಪದ ಸಾಹಿತ್ಯಗಳ ಅಧ್ಯಯನ ಪೂರ್ಣವಾಗಲಾರದು, ಈ ಕೊರತೆಯನ್ನು ತುಂಬುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ.

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ:

ಜಾನಪದ ಮತ್ತು ಕನ್ನಡ ಸಾಹಿತ್ಯಗಳ ಹಲವು ಪ್ರಕಾರಗಳಲ್ಲಿ ತಮ್ಮ ಅಧ್ಯಯನ, ಸಂಶೋಧನೆಗಳಿಂದ ಗಮನಾರ್ಹ ಸಾಧನೆಗೈದ ಡಾ. ಬಸವರಾಜ ಪೋಲಿಸ್ ಪಾಟೀಲರ ಜೀವನ ಮತ್ತು ಕೃತಿಗಳನ್ನು ಕುರಿತಂತೆ ಅಧ್ಯಯನದ ಅನುಕೂಲತೆ ಮತ್ತು ಸಮಗ್ರತೆಯನ್ನು

ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರಬಂಧದ ಸ್ವರೂಪ ಮತ್ತು ವ್ಯಾಪ್ತಿಯನ್ನು ೬ ಅಧ್ಯಾಯಗಳಲ್ಲಿ ವಿಸ್ತರಿಸಿದ್ದೇನೆ.

ಅಧ್ಯಾಯ ೧ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯಾಗಿದೆ. ಈ ಅಧ್ಯಾಯದಲ್ಲಿ ಸಂಶೋಧನೆಗೆ ಪ್ರಸ್ತುತ ವಿಷಯವನ್ನು ಆಯ್ದುಕೊಂಡಿರುವ ಉದ್ದೇಶದ ಹಿನ್ನೆಲೆ, ಸಂಶೋಧನೆಯ ವಸ್ತು ವಿಷಯವಾಗಿರುವ ಲೇಖಕರ ಅಧ್ಯಯನದ ದೃಷ್ಟಿಕೋನ ಹಾಗೂ ಪ್ರಬಂಧ ರಚನಾ ಸ್ವರೂಪ ಮತ್ತು ಅಧ್ಯಯನದ ಚೌಕಟ್ಟನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ-೨ ಡಾ. ಬಸವರಾಜ ಪೋಲಿಸ ಪಾಟೀಲರ ಜೀವನ ಮತ್ತು ವ್ಯಕ್ತಿತ್ವ ಕುರಿತಾಗಿದೆ.

ಸಾಹಿತಿಯೊಬ್ಬನ ಸಾಹಿತ್ಯಿಕ ಸಿದ್ಧಿ-ಸಾಧನೆಗಳಿಗೆ ಆತನ ಮನೆತನ, ಸುತ್ತಲಿನ ಪರಿಸರ, ಜೀವನದ ಕೌಟುಂಬಿಕ, ಸಾಮಾಜಿಕ- ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಘಟನೆ, ಸಂಗತಿಗಳು ಹೇಗೆ ಕಾರಣಗಳಾಗಿರುತ್ತವೆ ಎಂಬುದನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಬದುಕು ಮತ್ತು ಸಾಹಿತ್ಯಗಳ ನಡುವೆ ಅವಿನಾಭಾವ ಸಂಬಂಧವಿದೆ. ಬದುಕಿನ ಅನುಭೂತಿಯಿಲ್ಲದೆ ಹುಟ್ಟುವ ಸಾಹಿತ್ಯ ಜೀವಂತವಾಗಲಾರದು. ಸಾಹಿತ್ಯ ಕೃತಿಗಳನ್ನು ಕುರಿತು ಅಧ್ಯಯನಕ್ಕೆ ತೊಡಗುವಾಗ ಕೃತಿಕಾರನ ಜೀವನವನ್ನು ಅಷ್ಟಾಗಿ ಪರಿಗಣಿಸಬೇಕಾಗಿಲ್ಲವೆಂಬ ಮಾತು ಅದರ ಬೆನ್ನಿಗೆ ಸಾಹಿತಿಯನ್ನು ಹೊರತು ಪಡಿಸಿ ಕೃತಿಗಳ ಅಧ್ಯಯನ ಪೂರ್ಣವಾಗದೆಂಬ ಮಾತು ಸಾಹಿತ್ಯಿಕ ವಲಯದಲ್ಲಿ ಕೇಳಿ ಬರುತ್ತವೆ. ಆದರೆ ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನಕ್ಕೆ ತೊಡಗುವ ಸಂದರ್ಭದಲ್ಲಿ ಅವೆರಡನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ದಿಕ್ಸೂಚಿ ಮಾತ್ರವಲ್ಲ, ಅಧ್ಯಯನದ ಪಾತಳಿಯನ್ನು ನಿರ್ಮಿಸಿಕೊಡುವುದು. ಈ ದೃಷ್ಟಿಯಿಂದ ಇಲ್ಲಿ ಕೃತಿಕಾರನ ಜೀವನ ಮತ್ತು ವ್ಯಕ್ತಿತ್ವವನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ೩ ಡಾ. ಬಸವರಾಜ ಪೋಲಿಸ್ ಪಾಟೀಲರು ಮತ್ತು ಜನಪದ ಸಾಹಿತ್ಯ ಪರಂಪರೆ ಕುರಿತಾಗಿದೆ. ಮಾನವ ಸಂಸ್ಕೃತಿಯನ್ನು

ಅಧ್ಯಯನ ಮಾಡುವ ಶಿಸ್ತುಗಳಲ್ಲಿ ಜಾನಪದವೂ ಒಂದು. ಮಾನವ ವಿಜ್ಞಾನಿಗಳು ಜಾನಪದವು ಸಾಂಸ್ಕೃತಿಯ ಭಾಗವೆಂದೇ ತಿಳಿದಿರುವರು. ಹೀಗಾಗಿ ಮಾನವನ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಜಾನಪದ ಅಧ್ಯಯನ ಚರಿತ್ರೆಯಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರ ಕಾರ್ಯವಿಧಾನ ಸಂಶೋಧನೆಯ ಆಯ್ಕೆಯ ವಸ್ತು ಹಾಗೂ ಕರ್ನಾಟಕ ಜಾನಪದ ಪರಂಪರೆಯ ಜೊತೆ ತಮ್ಮನ್ನು ಗುರುತಿಸಿಕೊಳ್ಳುವ ವಿವರಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ.

ಅಧ್ಯಾಯ ೪ ಡಾ. ಬಸವರಾಜ ಪೋಲಿಸ್ ಪಾಟೀಲರ ಕೃತಿಗಳ ಕುರಿತು ಪರಾಮರ್ಶೆಯಾಗಿದೆ. ಇಲ್ಲಿ ಮುಖ್ಯವಾಗಿ ಅವರ ಜಾನಪದ ಸಂಕಲನಗಳು, ಸಂಶೋಧನ ಗ್ರಂಥಗಳು, ಲೇಖನಗಳನ್ನು ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ. ಒಂದು ಪ್ರಕಾರಕ್ಕೆ ಸಂಬಂಧಿಸಿದ ಕೃತಿಗಳ ವಸ್ತು, ವಿಷಯ, ಸಮಸ್ಯೆಗಳನ್ನು ಬಿಡಿಸುವಲ್ಲಿ ಪಾಟೀಲರ ನಿಲುವುಗಳನ್ನು ವಿಮರ್ಶಾ ದೃಷ್ಟಿಕೋನದಿಂದ ನೋಡಲಾಗಿದೆ.

ಡಾ. ಪೋಲಿಸ್ ಪಾಟೀಲರು ಜಾನಪದವನ್ನಲ್ಲದೆ ಶಿಷ್ಟ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃಷಿಗೈದಿದ್ದಾರೆ. ಅವರು ಕಾವ್ಯ, ಜೀವನ ಚರಿತ್ರೆ ವಿಮರ್ಶೆ, ವೈಚಾರಿಕ-ಚಿಂತನೆ ಇವೆಲ್ಲವನ್ನು ಬರೆದಿದ್ದರೂ ಪ್ರಮುಖವಾಗಿ ಅವರನ್ನು ಜಾನಪದ ವಿದ್ವಾಂಸರೆಂತಲೇ ಗುರುತಿಸಲಾಗುತ್ತದೆ. ಒಂದಕ್ಕಿಂತ ಹೆಚ್ಚು ಪ್ರಕಾರಗಳಲ್ಲಿ ಅಭಿವ್ಯಕ್ತಿಸುವ ಬರಹಗಾರನಿಗೆ ಹಣೆಪಟ್ಟಿ ಲಭಿಸುವುದು, ಆತನ ಯಶಸ್ವಿ ಹಾಗೂ ಪರಿಣಾಮಕಾರಿ ಅಭಿವ್ಯಕ್ತಿ ಪ್ರಕಾರದಲ್ಲಿ ಮಾತ್ರ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಮುಂತಾದವರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃಷಿಗೈದಿದ್ದರೂ ಕವಿ, ಕಾದಂಬರಿಕಾರ, ಕಥೆಗಾರರೆಂದೇ ಅವರುಗಳನ್ನು ಗುರುತಿಸಲಾಗುತ್ತದೆ. ಅಂತೆಯೇ ಡಾ. ಬಸವರಾಜ ಪೋಲಿಸ್ ಪಾಟೀಲರು ಜಾನಪದ ವಿದ್ವಾಂಸರೆಂದೇ ಗುರುತಿಸಲ್ಪಡುವರು.

ಈ ದೃಷ್ಟಾಂತಗಳೊಂದಿಗೆ ವಿವರಿಸಲು ಕಾರಣವೆಂದರೆ ಒಬ್ಬ ಸಾಹಿತಿಯ ಒಟ್ಟು ಸಾಧನೆಯನ್ನು ಸಮೀಕ್ಷಿಸುವಾಗ ಆತನ ಪ್ರಾತಿನಿಧಿಕ ಪ್ರಕಾರವನ್ನೇ ಕುರಿತಾಗಿ ಉಲ್ಲೇಖಿಸಲಾಗುತ್ತದೆ. ಉಳಿದ ಕ್ಷೇತ್ರಗಳಲ್ಲಿ

ಪರಿಣಾಮಕಾರಿ ಅಭಿವ್ಯಕ್ತಿನೀಡಿದ್ದರೂ. ಅವುಗಳ ಚರ್ಚೆ ಅಷ್ಟಾಗಿ ನಡೆದಿರುವುದಿಲ್ಲ.

ಅಧ್ಯಾಯ ೫ ಕನ್ನಡ ಸಾಹಿತ್ಯಕ್ಕೆ ಡಾ. ಬಸವರಾಜ ಪೋಲಿಸ್ ಪಾಟೀಲರ ಕೊಡುಗೆ ಕುರಿತು ಪರಾಮರ್ಶಿಸಲಾಗಿದೆ. ಸಂಗ್ರಹಕರಾಗಿ, ಸಂಶೋಧಕರಾಗಿ ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಡಾ. ಬಸವರಾಜ ಪೋಲಿಸ್ ಪಾಟೀಲರು ಕನ್ನಡದ ಶ್ರೇಷ್ಠ ಜಾನಪದ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ. ಶಿಷ್ಟ, ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಪ್ರಕಟಿಸಿರುವ ಅವರು ಅವೆರಡೂ ಸಾಹಿತ್ಯ ಕ್ಷೇತ್ರಗಳ ಸೇತುವೆಯಾಗಿ ಕೆಲಸ ಮಾಡಿ, ಕನ್ನಡದ ಪ್ರಮುಖ ಸಾಹಿತಿಗಳೆನಿಸಿದ್ದಾರೆ. ಅವರ ಸಾಹಿತ್ಯಿಕ ಕೊಡುಗೆಯನ್ನು ಈ ಅಧ್ಯಾಯದಲ್ಲಿ ಎತ್ತಿತೋರಿಸಲಾಗಿದೆ.

ಅಧ್ಯಾಯ ೬ ಸಮಾರೋಪವಾಗಿದೆ. ಡಾ. ಬಸವರಾಜ ಪೋಲಿಸ್ ಪಾಟೀಲರ ಸಾಹಿತ್ಯ ಅಪಾರ ಹಾಗೂ ವೈವಿದ್ಯಮಯವಾಗಿದೆ. ಅವರ ಸಾಹಿತ್ಯ ಸೃಷ್ಟಿ ಈಗಲೂ ನಿರಂತರವಾಗಿ ಉತ್ತುಂಗ ಶಿಖರ ಶ್ರೇಣಿಯತ್ತಲೇ ಸಾಗುತ್ತಿದೆ. ಹೀಗಿರುವಾಗ ಅವರ ಸಾಹಿತ್ಯದ ಎಲ್ಲ ಕುತೂಹಲಗಳ ಕುರಿತು ಈ ಸಂದರ್ಭದಲ್ಲಿ ಒಂದು ನಿರ್ಣಯಕ್ಕೆ ಬರುವುದು ಕಷ್ಟಸಾಧ್ಯ. ಆದರೂ ಅವರ ಈ ವರೆಗಿನ ಸಾಧನೆಯನ್ನು ನನ್ನ ಗ್ರಹಿಕೆಗೆ ನಿಲುಕಿದಷ್ಟನ್ನು ಮಾತ್ರ ನೋಡಿ ಬೆಲೆಕಟ್ಟುವ ಪ್ರಯತ್ನವನ್ನು ಸಮಾರೋಪದಲ್ಲಿ ಮಾಡಲಾಗಿದೆ.

ಅನುಬಂಧದಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರ ಜೀವನ ಮತ್ತು ಸಾಧನೆಗಳನ್ನು ಒಳಗೊಂಡ ಭಾವಚಿತ್ರಗಳು, ಜೀವನದ ವಿವರಗಳು, ಪ್ರಶಸ್ತಿ, ಗೌರವ ಸನ್ಮಾನಗಳು, ವಿದ್ವಾಂಸರ ಅಭಿಪ್ರಾಯಗಳು. ಪ್ರಬಂಧ ರಚನೆಗೆ ಬಳಸಿಕೊಂಡಿರುವ ಆಕರ ಗ್ರಂಥಗಳು, ಲೇಖನಗಳು, ನಿಯತಕಾಲಿಕಗಳ ಸೂಚಿ ನೀಡಲಾಗಿದೆ.

ಅಧ್ಯಾಯ – ೨
ಜೀವನ ಮತ್ತು ವ್ಯಕ್ತಿತ್ವ

- ಪೀಠಿಕೆ
- ಮನೆತನ
- ಬಾಲ್ಯ ಜೀವನ
- ವಿದ್ಯಾಭ್ಯಾಸ
- ವೃತ್ತಿ ಜೀವನ
- ಕೌಟುಂಬಿಕ ಜೀವನ
- ವ್ಯಕ್ತಿತ್ವ

ಅಧ್ಯಾಯ–೨

ಜೀವನ ಮತ್ತು ವ್ಯಕ್ತಿತ್ವ

ಪೀಠಿಕೆ:

ಕನ್ನಡ ಸಾಹಿತ್ಯಲೋಕದ ಅನಂತ ಮಜಲುಗಳಲ್ಲಿ ಅಮೋಘ ಸೇವೆ ಸಲ್ಲಿಸಿದ ಹೈದ್ರಾಬಾದ ಕರ್ನಾಟಕದ ಬಹುಮುಖ ಪ್ರತಿಭೆಗಳಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರೊಬ್ಬರು ಇಂಥ ಒಬ್ಬ ಜಾನಪದ ತಜ್ಞರ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕಾದರೆ ಅವರು ಹುಟ್ಟಿದ ಊರು, ತಾಯಿ, ತಂದೆ, ಸುತ್ತಲಿನ ಪರಿಸರ, ಸಂಘಗಳ, ಮಿತ್ರರ ಸಂಬಂಧ ಮುಂತಾದವುಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಒಬ್ಬ ಲೇಖಕನಾಗಿ ಹೊರಹೊಮ್ಮಲು ಎಲ್ಲ ವಿಷಯಗಳು ಮಹತ್ವ ಪಡೆಯುತ್ತವೆ. ಅವರ ಮೇಲಾದ ಪ್ರಭಾವ, ಪ್ರೇರಣೆ, ಪ್ರೋತ್ಸಾಹ ಮುಂತಾದವು ಮುಖ್ಯವಾದವುಗಳು, . ಡಾ. ಬಸವರಾಜ ಪೋಲಿಸ್ ಪಾಟೀಲರು ಗ್ರಾಮೀಣ ಜಾನಪದ ಪರಿಸರದಲ್ಲಿಯೇ ಹುಟ್ಟಿ ಬೆಳೆದವರಾಗಿದ್ದಾರೆ. ತಮ್ಮ ಊರಲ್ಲಿ ನಡೆಯುವ ಜಾತ್ರೆಗಳು, ಹಬ್ಬಗಳು, ಭಜನೆಗಳು, ಮದುವೆ, ನಾಟಕಗಳು ಮುಂತಾದವುಗಳಲ್ಲಿ ಭಾಗವಹಿಸುತ್ತಿದ್ದ ಇವರು ಚಿಕ್ಕಂದಿನಿಂದಲೂ ಜಾನಪದದ ಆಕರ್ಷಣೆಗೆ ಒಳಗಾಗಿದ್ದಾರೆ. ಹೀಗಾಗಿಯೆ ಇಂದು ಇವರೊಬ್ಬ ಜಾನಪದ ವಿದ್ವಾಂಸರಾಗಿ ಹೊರಹೊಮ್ಮಿದ್ದಾರೆ.

ಮನೆತನ:

ಡಾ. ಬಸವರಾಜ ಪೋಲಿಸ್ ಪಾಟೀಲರು ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ದಿಕ್ಸಂಗಾ (ಬಿ) ಗ್ರಾಮದಲ್ಲಿ ೧-೮-೧೯೫೪ ರಂದು ಜನಿಸಿದರು. ಇವರ ತಂದೆ "ಶಾಮರಾವ ಪಾಟೀಲ" ಮತ್ತು ತಾಯಿ "ಸೋನುಬಾಯಿ". ಊರಲ್ಲಿ ಇವರದು ಗೌಡರ ಮನೆತನ, ಜನರ ಆದರ ಗೌರವಗಳಿಗೆ ಪಾತ್ರವಾದ ಮನೆತನ. ಇಂಥ ಗೌರವಸ್ಥ ಮನೆತನದಲ್ಲಿ ಜನಿಸಿದ ಡಾ. ಪಾಟೀಲರ ತಂದೆ ಶಾಮರಾವ ಪಾಟೀಲ ಒಟ್ಟು ೪ ಜನ

ಅಣ್ಣ ತಮ್ಮಂದಿರು. ಮೊದಲನೆಯವರು ದಿಕ್ಸಂಗಾ ಗ್ರಾಮದ ದಳಪತಿಯಾಗಿ ಕಾರ್ಯನಿರ್ವಹಿಸಿ ಊರ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಎರಡನೆಯವರೇ ಡಾ. ಬಸವರಾಜ ಪೋಲಿಸ್ ಪಾಟೀಲರ ತಂದೆ ಊರಲ್ಲಿ ಗೌಡಕಿ ಮಾಡುವುದರ ಜೊತೆ ಜೊತೆಗೆ ವೃತ್ತಿಯಿಂದ ವೈದ್ಯರು, ಯುನಾನಿ, ಹೋಮಿಯೋಪತಿ, ಆಲೋಪತಿಕ, ಆಯುರ್ವೇದ ಔಷಧಗಳ ಜ್ಞಾನ ಹೊಂದಿದ್ದು, ತಮ್ಮ ಹಳ್ಳಿ ಅಲ್ಲದೇ ಸುತ್ತ ಮುತ್ತಲಿನ ಹತ್ತಾರು ಹಳ್ಳಿಗಳ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುವ ಮೂಲಕ ಜನ ಸೇವೆಯಲ್ಲಿ ಸಿರತರಾಗಿದ್ದಾರೆ. ವಯಸ್ಸು ೮೦ ದಾಟಿದರೂ ಕೂಡ ಇಂದಿಗೂ ಅನೇಕ ರೋಗಿಗಳಿಗೆ ತಮ್ಮ ಔಷಧದಿಂದ ಗುಣಪಡಿಸುತ್ತಿದ್ದಾರೆ. ಮೂರನೆಯವರಾದ ಶಂಕರರಾವ ಪಾಟೀಲ ಅವರು ವಿಲೇಜ ಅಕೌಂಟೆಂಟ್ ಆಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. 'ಶಾಮರಾವ ಪಾಟೀಲ'ರ ಕಿರಿಯ ಸಹೋದರ ಸಿದ್ಧರಾಮು ಪೋಲಿಸ್ ಪಾಟೀಲರು ವೃತ್ತಿಯಿಂದ ಇಂಜಿನಿಯರಾದರೂ ಪ್ರವೃತ್ತಿಯಿಂದ ಕವಿಗಳು, ಸಾಹಿತಿಗಳು, ಇವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಸಾಹಿತ್ತಿಕ ಚಟುವಟಿಕೆಗಳ ಮೂಲಕ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಬಾಲ್ಯ ಜೀವನ:

ಡಾ. ಬಸವರಾಜ ಪೋಲಿಸ್ ಪಾಟೀಲರು ತಮ್ಮ ಬಾಲ್ಯದ ದಿನಗಳನ್ನು ಹೆಚ್ಚಾಗಿ ತಮ್ಮ ಹುಟ್ಟುರಾದ ದಿಕ್ಸಂಗಾದಲ್ಲೇ ಕಳೆದಿದ್ದಾರೆ. ಬಾಲ್ಯದಿಂದಲೂ ತಮ್ಮ ಗೆಳೆಯರ ಜೊತೆ, ಒಡನಾಡಿಗಳ ಜೊತೆ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದರು. ಎಲ್ಲರ ಜೊತೆಗೂ ತಮಾಷೆಯಾಗಿ ನಡೆದುಕೊಂಡು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಇವರಿಗೆ ಬಾಲ್ಯದಿಂದಲೂ ಜಾನಪದದ ಕಡೆ ಒಲವಿದ್ದದ್ದು ಗುರುತಿಸಬಹುದು. ತಮ್ಮ ಮನೆ ದೇವರಾದ "ಕಾರಭಾಸಗಿಯ ಶ್ರೀ ಕಾಡಸಿದ್ದೇಶ್ವರನ" ಸನ್ನಿಧಾನಕ್ಕೆ ತಪ್ಪದೇ ಹೋಗುತ್ತಿದ್ದರು. ಪ್ರತಿ ಅಮವಾಸೆ ಮತ್ತು ಹುಣ್ಣಿಮೆಗಳಲ್ಲಿ ಅಲ್ಲಿ ನಡೆಯುವ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಊರಲ್ಲಿ ನಡೆಯುವ ಸಣ್ಣಾಟ ಮತ್ತು ಸಾಮಾಜಿಕ

ನಾಟಕಗಳ ಕಥಾ ಸಂಚಾಲನ ಮಾಡುತ್ತಿದ್ದರು. ಜಾನಪದ ಕಲೆಗಳ ಅಭಿರುಚಿವುಳ್ಳವರಾಗಿದ್ದಾರು. ಚಿಕ್ಕವರಿದ್ದಾಗಲೆ ಭಜನಾಮೇಳಗಳು, ಕೀರ್ತನೆಗಳು, ಭಾಷಣಗಳಲ್ಲಿ ಭಾಗವಹಿಸುತ್ತಿದ್ದರು. ಚಿಕ್ಕಂದಿನಲ್ಲಿಯೇ ಜನಪದ ಹಾಡು, ಕಥೆಗಳನ್ನು ಕಲೆಹಾಕುವ ಹವ್ಯಾಸ ಹೊಂದಿದ್ದರು. ಬಾಲ್ಯದ ಇಂಥ ಗುಣಗಳಿಂದಲೇ ಡಾ. ಪಾಟೀಲರು ಇಂದು ದೊಡ್ಡ ಜಾನಪದ ವಿದ್ವಾಂಸರಾಗಿದ್ದಾರೆ.

ವಿದ್ಯಾಭ್ಯಾಸ:

ಡಾ. ಬಸವರಾಜ ಪೋಲಿಸ್ ಪಾಟೀಲರ ಶಿಕ್ಷಣ ಅವರ ಹುಟ್ಟೂರಾದ ದಿಕ್ಸಂಗಾ ಗ್ರಾಮದಲ್ಲಿಯೇ ಪ್ರಾರಂಭವಾಯಿತು. ೧ ರಿಂದ ೨ ನೇಯ ತರಗತಿಯ ವರೆಗೆ ಊರಿನ ಪ್ರಾಥಮಿಕ ಶಾಲೆಯಲ್ಲಿಯೆ ಅಭ್ಯಾಸ ಮಾಡಿದರು. ತರಗತಿಯ ಉಳಿದ ವಿದ್ಯಾಥಿಗಳಿಗಿಂತ ಇವರೆ ಓದಿನಲ್ಲಿ ಮುಂದೆ ಇದ್ದು, ಶಿಕ್ಷಕರ ಪ್ರೀತಿಗೆ. ಪಾತ್ರರಾಗಿದ್ದರು. ಮುಂದೆ ೩ ನೇ ತರಗತಿಗಾಗಿ ಇವರು ತಮ್ಮ ಹಳ್ಳಿಯ ಸಮೀಪದಲ್ಲೇ ಇರುವ ಕಾರಭಾಸಗಿ ಎಂಬ ಗ್ರಾಮಕ್ಕೆ ಹೋದರು. ಆದರೆ ಕೇವಲ ಒಂದು ವರ್ಷ ಮಾತ್ರ ಈ ಊರಲ್ಲಿ ಅಭ್ಯಾಸ ಮಾಡಿ ನಂತರ 'ದಿಕ್ಸಂಗಾ'ದಿಂದ ೩ ಕಿ.ಮೀ. ದೂರದಲ್ಲಿರುವ ಭೈರಾಮಡಿ ಎಂಬ ಗ್ರಾಮದಲ್ಲಿ ೪ ರಿಂದ ೬ ನೇ ತರಗತಿಯ ವರೆಗೆ ಅಭ್ಯಾಸ ಮಾಡಿದರು. ಓದಿನಲ್ಲಿನ ಅಪಾರ ಆಸಕ್ತಿ ಹೊಂದಿದ್ದ, ಪಾಟೀಲರು ತಮ್ಮ ಮುಂದಿನ ಶಿಕ್ಷಣಕ್ಕಾಗಿ ಗುಲಬರ್ಗಾಕ್ಕೆ ಬಂದರು. ೭ ನೇ ತರಗತಿಯನ್ನು ಗುಲಬರ್ಗಾದ ಬ್ರಹ್ಮಪುರ ನಂಬರ್-೨ ಸರಕಾರಿ ಶಾಲೆಯಲ್ಲಿ ಮುಗಿಸಿ ಮುಂದಿನ ಶಿಕ್ಷಣಕ್ಕಾಗಿ ಗುಲಬರ್ಗಾದಲ್ಲೇ ಇರುವ ಸರಕಾರಿ ಪ್ರ್ಯಾಕ್ಟಿಸಿಂಗ್ ಹೈಸ್ಕೂಲ್‌ಗೆ ಸೇರಿ ೮,೯ ಹಾಗೂ ೧೦ ನೇ ತರಗತಿಗಳನ್ನು ಆಸಕ್ತಿಯಿಂದ ಓದಿ ಮುಗಿಸಿದರು.

ಪಾಟೀಲರಿಗೆ ಅಧ್ಯಯನದಲ್ಲಿ ದಿನೆ ದಿನೆ ಆಸಕ್ತಿ ಹೆಚ್ಚುತ್ತಾ ನಡೆಯಿತು. ಓದು ಬರಹ ಅವರ ಹವ್ಯಾಸವಾಗತೊಡಗಿತು. ಸಾಹಿತ್ಯದಲ್ಲಿ ಅಭಿರುಚಿ, ಆಸಕ್ತಿ ಹೆಚ್ಚಾಗತೊಡಗಿತು. ೧೦ ನೇ ತರಗತಿಯಲ್ಲಿದ್ದಾಗಲೇ ಅನೇಕ ಸಾಹಿತಿಗಳ ಪುಸ್ತಕ ಓದುವುದು, ಲೇಖನಗಳನ್ನು ಓದುವುದು,

ತಾನೂ ಕೂಡಾ ಅವರಂತೆ ಪುಸ್ತಕ ಬರೆಯಬೇಕೆಂಬ ಆಸೆ ಚಿಗುರತೊಡಗಿತು ಹಾಗೂ ಅನೇಕ ಲೇಖನಗಳನ್ನು ಬರೆಯತೊಡಗಿದರು.

೧೦ನೇ ತರಗತಿಯಿದ್ದಾಗಲೇ ಡಾ. ಪಾಟೀಲರು ಕಥೆ, ಕವನ ಬರೆಯಲು ಪ್ರಾರಂಭಿಸಿದರು. ಸಾಹಿತಿಗಳ ಜೊತೆಗೆ ಸಂಪರ್ಕ, ಅವರ ಭಾಷಣ ಕೇಳುವುದು, ಅವರ ಪುಸ್ತಕ ಓದುವುದು ಇವರ ಚಟುವಟಿಕೆಯಾದವು. ರಾಷ್ಟ್ರಕವಿ ಕುವೆಂಪು ಅವರ ಅನೇಕ ಪುಸ್ತಕಗಳು ಓದಲು ಪ್ರಾರಂಭಿಸಿದ ಇವರಿಗೆ ತಾನು ಕೂಡಾ ಪುಸ್ತಕ ಬರೆಯಬೇಕೆಂಬ ಆಸೆ ಮೂಡಿತು.

ಮುಂದೆ ಪದವಿಪೂರ್ವ ಶಿಕ್ಷಣಕ್ಕಾಗಿ ಗುಲಬರ್ಗಾದ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ ಸೇರಿದರು. ನಂತರ ಪ್ರಧಾನವಾಗಿ ಕನ್ನಡವನ್ನು ತೆಗೆದುಕೊಂಡು ಪದವಿಯ ೩ ವರ್ಷಗಳನ್ನು ಇಲ್ಲಿಯೇ ಮುಗಿಸಿದರು.

೧೯೭೪. ರಲ್ಲಿ ಪದವಿ ಶಿಕ್ಷಣ ಪೂರ್ತಿಗೊಳಿಸಿದ ಇವರಿಗೆ ದಿನೆ ದಿನೆ ಸಾಹಿತ್ಯ ಕ್ಷೇತ್ರದ ಕಡೆ ಒಲವು ಹೆಚ್ಚಾಗತೊಡಗಿತು. ಸಾಹಿತ್ಯದಲ್ಲಿ ಆಳವಾದ ಅಧ್ಯಯನ ಪ್ರಾರಂಭವಾಯಿತು. ಬಾಲ್ಯದ ಜಾನಪದ ಕಡೆಗಿನ ಆಕರ್ಷಣೆ ಮತ್ತೆ ಗರಿಗೆದರಿತು. ಜನಪದ ಕವಿ, ಕಲಾವಿದರ ಕುರಿತು ಆಸಕ್ತಿ ಹೆಚ್ಚಾಯಿತು. ಮುಂದೆ ೧೯೭೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸ್ನಾತಕೋತ್ತರ ಕೇಂದ್ರ ಗುಲಬರ್ಗಾದಿಂದ ಎಂ.ಎ. ಕನ್ನಡ ಪದವಿಯನ್ನು ಪಡೆದುಕೊಂಡರು. ಇಲ್ಲಿಯೂ ಜಾನಪದವನ್ನು ವಿಶೇಷವಾಗಿ ಅಧ್ಯಯನ ಮಾಡಿದರು. ಡಾ. ಪಾಟೀಲ ಶಿಕ್ಷಣದಲ್ಲಿ ಮುಂದುವರೆದಂತೆಲ್ಲ ಇವರ ಜಾನಪದ ಲೋಕವು ವಿಸ್ತಾರಗೊಳ್ಳತೊಡಗಿತು. ಜಾನಪದದಲ್ಲಿನ ಆಸಕ್ತಿ ವೃದ್ಧಿಯಾಯಿತು.

ಜಾನಪದ ವಿದ್ವಾಂಸರು ಬರೆದಂಥ ಪುಸ್ತಕಗಳನ್ನು ಓದುವುದು, ಪತ್ರಿಕೆಗಳಲ್ಲಿ ಬರುವ ಲೇಖನಗಳನ್ನು ಓದುವುದು, ಜಾನಪದ ಸಾಹಿತ್ಯದ ಚಟುವಟಿಕೆಗಳಲ್ಲಿ ಬಾಗವಹಿಸುವುದು ಹೀಗೆ ಜಾನಪದ ಕ್ಷೇತ್ರವೇ ಇವರ ಆಸಕ್ತಿಯ ವಿಷಯವಾಯಿತು.

೧೯೭೭ ರಲ್ಲಿ ಡಾ. ಬಿ.ಬಿ. ಹೆಂಡಿಯವರ ಅಧ್ಯಕ್ಷತೆಯಲ್ಲಿ ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಗ್ರಹ–ಸಂಪದಾನೆ–ಪ್ರಕಟಣೆಯ ಯೋಜನೆಯನ್ನು ಯು.ಜಿ.ಸಿ. ನೆರವಿನಿಂದ ಹಾಕಿಕೊಳ್ಳಲಾಗಿತ್ತು. ಈ ಯೋಜನೆಯಲ್ಲಿ ಪಾಟೀಲರು "ಸಹಾಯಕ ಸಂಶೋಧಕರಾಗಿ" ಆಯ್ಕೆಗೊಂಡು ಉತ್ತರ ಕರ್ನಾಟಕ ಅದರಲ್ಲೂ ಹೈದ್ರಾಬಾದ ಕರ್ನಾಟಕದ ಹಳ್ಳಿ–ಹಳ್ಳಿಗಳನ್ನು ಸುತ್ತಾಡಿ ಕ್ಷೇತ್ರ ಕಾರ್ಯದ ಮೂಲಕ ಇಲ್ಲಿ ಅಡಗಿಹೋದ ಜಾನಪದ ಸಾಹಿತ್ಯ ಸಂಪತ್ತನ್ನು ಮೊದಲಬಾರಿಗೆ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಹಗಲು ರಾತ್ರಿ ಎನ್ನದೇ ತಿರುಗಾಡಿ ೩ ಸಾವಿರ ಹಾಡು ಮತ್ತು ೨ ಸಾವಿರ ಕಥೆಗಳನ್ನು ಸಂಗ್ರಹಿಸಿ ಕನ್ನಡ ಅಧ್ಯಯನ ಸಂಸ್ಥೆಗೆ ಶೇಖರಿಸಿದ್ದಾರೆ. ಈ ಭಾಗದ ಸಂಪ್ರದಾಯದ ಹಾಡು, ಬಯಲಾಟ, ಲಾವಣಿಗಳನ್ನು ಗುರುತಿಸಿದರು. ಜಾನಪದ ಸಾಹಿತ್ಯದ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ಈ ಯೋಜನೆ ಡಾ. ಪಾಟೀಲರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿತು.

೧೯೭೮ ರಲ್ಲಿ "ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ" ಒಂದು ಸಾಂಸ್ಕೃತಿಕ ಅಧ್ಯಯನ ವಿಷಯವನ್ನು ಸಂಶೋಧನೆಗೆ ಆರಿಸಿಕೊಂಡು ಡಾ. ಎಂ.ಎಸ್. ಲಠ್ಠೆ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನ ಪ್ರಾರಂಭಿಸಿದರು. ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗೆ ಭೇಟಿಕೊಟ್ಟು ಜನಪದ ಸಾಹಿತ್ಯ ಪ್ರಕಾರಗಳನ್ನು ಅಪಾರವಾಗಿ ಸಂಗ್ರಹಿಸಿ ಅಧ್ಯಯನ ಮಾಡಿದರು. ಅನೇಕ ಕವಿ–ಕಲಾವಿದರಿಗೆ ಭೇಟಿಯಾಗಿ ಜನಪದದ ಕುರಿತು ಮಾಹಿತಿ ಸಂಗ್ರಹಿಸಿದರು. ಹೀಗೆ ನಿರಂತರ ೧೯೭೮ ರಿಂದ ೧೯೮೪ ರ ವರೆಗೆ ಅಂದರೆ ೬ ವರ್ಷಗಳ ಕಾಲ ಸುಧೀರ್ಘವಾದ ಸಂಶೋಧನಾ ಅಧ್ಯಯನ ಕೈಗೊಂಡರು. ಇದರಿಂದ ಹೈದ್ರಾಬಾದ ಕರ್ನಾಟಕ ಪ್ರದೇಶದ ಜನಪದ ಕೇಂದ್ರಸ್ಥಳಗಳ ಸಂಪೂರ್ಣ ಮಾಹಿತಿ ಪಡೆದರು. ಮುಂದೆ ೧೯೮೫ ರಲ್ಲಿ ಇವರಿಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ "ಡಾಕ್ಟರೇಟ್" ಪದವಿ ಲಭಿಸಿತು.

ಹೀಗೆ ವಿದ್ಯಾರ್ಥಿ ದೆಸೆಯಿಂದಲೇ ಜಾನಪದ ಕ್ಷೇತ್ರದಲ್ಲಿ ಅಪಾರವಾಗಿ ದುಡಿದು ಜಾನಪದ ಸಾಹಿತ್ಯದಲ್ಲಿ ಆಳವಾದ ಅನುಭವ ಪಡೆದುಕೊಂಡರು.

ವೃತ್ತಿ ಜೀವನ:

ಡಾ. ಪೋಲಿಸ್ ಪಾಟೀಲರು ತಮ್ಮ ಸಂಶೋಧನಾ ಅಧ್ಯಯನ ಪೂರ್ತಿಗೊಳಿಸಿದ ನಂತರ ೧೯೮೪ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಇವರ ವೃತ್ತಿ ಜೀವನವೇನೋ ಸರಳವಾಗಿ ಆರಂಭವಾಯಿತು, ಆದರೆ ಮುಂದೆ ವೃತ್ತಿಗೆ ಸಂಬಂಧಿಸಿದಂತೆ ಇವರು ಅನೇಕ ತೊಂದರೆ, ಸಮಸ್ಯೆಗಳನ್ನು ಎದುರಿಸಬೇಕಾಯಿತು.

ಗುಲಬರ್ಗಾ ವಿಶ್ವವಿದ್ಯಾಲಯದ ಅಂದಿನ ಉಪಕುಲಪತಿಗಳಾದ ಡಾ. ಹಾ.ಮಾ. ನಾಯಕರು ಪ್ರತಿಭಾವಂತ ಪದವಿಧರರನ್ನೇ ಉಪನ್ಯಾಸಕರಾಗಿ ನೇಮಕಮಾಡಿಕೊಂಡರು. ಇದರಲ್ಲಿ ಡಾ. ಪೋಲಿಸ್ ಪಾಟೀಲರೂ ಆಯ್ಕೆಗೊಂಡರು. ಹೀಗೆ ಇವರ ವೃತ್ತಿ ಆರಂಭವಾದದ್ದು, ಗುಲಬರ್ಗಾ ವಿಶ್ವವಿದ್ಯಾಲಯದಿಂದಲೇ, ತಮ್ಮ ಕ್ರಿಯಾಶೀಲತೆ ಮತ್ತು ಪರಿಣಾಮಕಾರಿ ಬೋಧನೆಯಿಂದಾಗಿ ಬಹುಬೇಗನೆ ವಿದ್ಯಾರ್ಥಿಗಳ ನೆಚ್ಚಿನ ಉಪನ್ಯಾಸಕರಾದರು. ಇದೇ ಸಂದರ್ಭದಲ್ಲಿ ಗುಲಬರ್ಗಾದ ಎಂ.ಎಸ್.ಆಯ್. ಕಾಲೇಜಿನಲ್ಲಿಯೂ ಅತಿಥಿ ಉಪನ್ಯಾಸಕರಾಗಿ ಸೇವೆ ಆರಂಭಿಸಿದರು. ಮುಂಜಾನೆ ಎಂ.ಎಸ್.ಆಯ್. ಕಾಲೇಜಿನಲ್ಲಿ ಪಾಠ ಮುಗಿಸಿಕೊಂಡು, ಮಧ್ಯಾಹ್ನ ವಿಶ್ವವಿದ್ಯಾಲಯದಲ್ಲಿ ಪಾಠಕ್ಕಾಗಿ ಹಾಜರಾಗುತ್ತಿದ್ದರು. ಹೀಗೆ ವೃತ್ತಿಗೋಸ್ಕರವಾಗಿ ನಿರಂತರ ಓಡಾಟ ಪ್ರಾರಂಭವಾಯಿತು. ಇಂಥ ವೇಳೆಯಲ್ಲು ಜಾನಪದದ ಕಡೆ ಅವರ ಆಸಕ್ತಿ ಕುಗ್ಗಲಿಲ್ಲ. ಅನೇಕ ಪತ್ರಿಕೆಗಳಲ್ಲಿ ಜಾನಪದ ಸಾಹಿತ್ಯದ ಕುರಿತು ಲೇಖನಗಳು ಪ್ರಕಟವಾದವು. ವೃತ್ತಿ ಜೀವನದ ಸಮಸ್ಯೆಗಳ ನಡುವೆಯೂ ಜಾನಪದ ಸಾಹಿತ್ಯದ ಬೆಳವಣಿಗೆ ನಡೆಯಿತು.

ಮುಂದೆ ಎಂ.ಎಸ್.ಆಯ್. ಕಾಲೇಜಿನ ಆಡಳಿತ ಸಿಬ್ಬಂದಿಯವರು ಇವರನ್ನು ಬೆಂಗಳೂರು ಅಥವಾ ಚಿಂಚೋಳಿ ಕಾಲೇಜಿಗೆ ಉಪನ್ಯಾಸಕರಾಗಿ ಹೋಗಬೇಕೆಂಬ ಆಯ್ಕೆ ನೀಡಿದರು. ಈ ಸಮಯದಲ್ಲಿ ಡಾ. ಪಾಟೀಲರು ಇಕ್ಕಟ್ಟಿನಲ್ಲಿ ಸಿಲುಕಿದರು. ಸರಿಯಾದ ತೀರ್ಮಾನ ತೆಗೆದುಕೊಳ್ಳುವಲ್ಲಿ ಗೊಂದಲ ಉಂಟಾಯಿತು. ಹೀಗಾಗಿ ಕೊನೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ವೃತ್ತಿಯನ್ನೇ ಮುಂದುವರಿಸಿದರು. ಆದರೆ ಮುಂದೆ ಹಾ.ಮಾ. ನಾಯಕರ ಸ್ಥಾನದಲ್ಲಿ ಚಲುವರಾಜು ಎನ್ನುವವರು ಉಪಕುಲಪತಿಗಳಾಗಿ ಬಂದಾಗ ಮೊದಲು ಆಯ್ಕೆಗೊಂಡವರೆಲ್ಲರನ್ನು ಕಡೆಗಣಿಸಲಾಯಿತು. ಇದರಿಂದ ವಿಶ್ವವಿದ್ಯಾಲಯದ ಹುದ್ದೆಯು ಕೂಡಾ ಡಾ. ಪಾಟೀಲರ ಕೈತಪ್ಪಿ ಹೋಯಿತು. ಮೊದಲಿನಿಂದಲೂ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ, ಸಹಾಯಕ ಸಂಶೋಧಕನಾಗಿ, ಅತಿಥಿ ಉಪನ್ಯಾಸಕನಾಗಿ ಸಲ್ಲಿಸಿದ ಸೇವೆಯನ್ನು ಯಾರೂ ಪರಿಗಣಿಸಲಿಲ್ಲ. ಆದರೂ ಕೂಡಾ ಪೋಲಿಸ್ ಪಾಟೀಲರು ಎದೆಗುಂದದೆ, ತಮ್ಮ ಸಹೋದ್ಯೋಗಿಗಳೊಂದಿಗೆ ಸೇರಿ ವಿಶ್ವವಿದ್ಯಾಲಯದ ಮುಂದೆ ಪ್ರತಿಭಟನೆ ನಡೆಸಿದರು. ಇವರ ಪ್ರಯತ್ನ ನೆರವೇರದಿದ್ದಾಗ ೧೯೮೯ ರಲ್ಲಿ ಬೆಂಗಳೂರಿನ "ವಿರೇಂದ್ರ ಪಾಟೀಲ" ಡಿಗ್ರಿ ಕಾಲೇಜಿಗೆ ಸೇರಿಕೊಂಡರು. ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯವರು ಆರಂಭಿಸಿದ್ದ ಈ ಕಾಲೇಜು ಪೋಲಿಸ್ ಪಾಟೀಲರ ಬದುಕಿಗೆ ಸಾಹಿತ್ಯಿಕ ತಿರುವು ನೀಡುವುದರ ಜೊತೆಗೆ ಮನಸ್ಸಿಗೆ ಸಾಂತ್ವನ ನೀಡಿತು. ಹೋಗಿ ಬರಲು ತುಂಬಾ ದೂರಾದರೂ ತಿರುಗುವ ಹೃದಯಕ್ಕೆ ಉದ್ಯೋಗ ಒಂದು ದಡ ಸಿಕ್ಕಿತು. ಮನಸ್ಸಿಗೆ ಮೆದುಳಿಗೆ ಜೀವಕ್ಕೆ ಕುಟುಂಬಕ್ಕೆ ಮಹಾಪರಿಹಾರ ಒದಗಿಸಿತು.

ಬೆಂಗಳೂರಿಗೆ ಹೋಗಿ ಬರುವಾಗ ರೈಲಿನಲ್ಲಿಯೆ ಸಾಹಿತ್ಯ ರಚನೆ ಪ್ರಾರಂಭಿಸಿದರು. ಪ್ರಯಾಣದಲ್ಲಿ ಸಿಕ್ಕ ಸಮಯದಲ್ಲೆ ಕೃತಿ ರಚನೆ ಕಾರ್ಯ ನಡೆಯಿತು. ಪಾಠ ಪ್ರವಚನಗಳ ಮಧ್ಯೆ ದೊರೆತ ಬಿಡುವಿನ ವೇಳೆಯಲ್ಲಿಯೇ ಅನೇಕ ಲೇಖನಗಳನ್ನು ಬರೆದರು. ಈ ಸಮಯದಲ್ಲಿಯೆ, ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ "ಮಹಾದೇವಪ್ಪ ರಾಂಪುರೆ" ಅವರ ಬಗ್ಗೆ ಒಂದು ಪುಸ್ತಕ

ಬರೆಯಬೇಕೆಂಬ ಆಲೋಚನೆ ಹೊಳೆಯಿತು. ಅದನ್ನು ಕಾರ್ಯರೂಪಕ್ಕೆ ತರಲು ಹಗಲು ರಾತ್ರಿ ನಿರಂತರ ಅಧ್ಯಯನದಲ್ಲಿ ತೊಡಗಿದರು. ಈ ಮಧ್ಯದಲ್ಲೇ ೧೯೯೩ ರಲ್ಲಿ ರಾಯಚೂರಿನ ಸ್ನಾತಕೋತ್ತರ ಕೇಂದ್ರಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ನೇಮಕವಾಗಿ ಬಂದರು. ಇಲ್ಲಿಯೂ ಕೂಡಾ ಎಲ್ಲರೊಂದಿಗೆ ಆತ್ಮೀಯರಾಗಿ ವ್ಯವಹರಿಸಿದರು. ಜೊತೆಗೆ ತಮ್ಮ ಬರವಣಿಗೆಯನ್ನು ಮುಂದುವರೆಸುತ್ತಾ ನಡೆದರು. ೨೦೦೧ ರಲ್ಲಿ ಪುನ: ತಮ್ಮ ಆರಂಭದ ಸ್ಥಳವಾದ ಗುಲಬರ್ಗಾ "ಕನ್ನಡ ಅಧ್ಯಯನ ಸಂಸ್ಥೆ"ಗೆ ಬಂದರು. ಅಂದಿನಿಂದ ಇಲ್ಲಿಯೆ ಪ್ರವಾಚಕರಾಗಿ ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಪ್ರಿಯ ಪ್ರಾಧ್ಯಾಪಕರಾಗಿದ್ದಾರೆ.

೧೯೯೭ ರಲ್ಲಿ ರಾಮಕೃಷ್ಣ ಹೆಗಡೆ, ಪಾಟೀಲ ಪುಟ್ಟಪ್ಪ, ಜವಳಿ, ಭೀಮಳ್ಳಿ, ರಾಂಪುರೆ ಕುಟುಂಬದ ಸದಸ್ಯರು ಮುಂತಾದವರ ಸಮ್ಮುಖದಲ್ಲಿ ದೊಡ್ಡ ಸಮಾರಂಭವನ್ನು ಏರ್ಪಡಿಸಿ ಡಾ. ಪಾಟೀಲರು ಬರೆದಂಥ 'ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪುರೆ''ಯವರ ಜೀವನ ಚರಿತ್ರೆ ಪುಸ್ತಕವನ್ನು ಬಿಡುಗಡೆ ಮಾಡಿ ಡಾ. ಪಾಟೀಲರಿಗೆ ಸನ್ಮಾನಿಸಲಾಯಿತು. ಇದು ಗುಲಬರ್ಗಾ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿಗಳಿಗೆ ೭ ವರ್ಷಗಳ ಅವಧಿಯವರೆಗೆ ಪಠ್ಯವಾಗಿತ್ತು.

ಅನೇಕ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಎಂ.ಫಿಲ್. ಮತ್ತು ಪಿಎಚ್.ಡಿ. ಸಂಪ್ರಬಂಧಗಳನ್ನು, ಮಹಾಪ್ರಬಂಧಗಳನ್ನು ಬರೆದು ಪದವಿ ಸಂಪಾದಿಸಿದ್ದಾರೆ.

ಕೌಟುಂಬಿಕ ಜೀವನ:

ಶಾಮರಾವ ಪಾಟೀಲರು ದಿಕ್ಸಂಗಾ ಗ್ರಾಮದ ಗೌಡರಾಗಿದ್ದು, ಊರ ಜನರ ಗೌರವಾದರಗಳಿಗೆ ಪಾತ್ರರಾಗಿದ್ದ ವ್ಯಕ್ತಿ. ಇವರಿಗೆ ೯ ಜನ ಮಕ್ಕಳು, ಅದರಲ್ಲಿ ೪ ಜನ ಗಂಡು ಮಕ್ಕಳು ಮತ್ತು ೫ ಜನ ಹೆಣ್ಣು ಮಕ್ಕಳು, ಇವರಲ್ಲಿ ಮೊದಲನೆಯವರೆ ಡಾ. ಬಸವರಾಜ ಪೋಲಿಸ್ ಪಾಟೀಲ. ಇವರ ವಿದ್ಯಾಭ್ಯಾಸ ಪೂರ್ಣಗೊಂಡ ನಂತರ ಗೃಹಸ್ಥ ಜೀವನಕ್ಕಾಗಿ ಕನ್ಯಾಶೋಧ ನಡೆಯಿತು. ಚಿಂಚೋಳಿ ತಾಲೂಕಿನ 'ಗಡಿಕೇಶ್ವರ' ಗ್ರಾಮದ

[illegible]

ಸಾವನ್ನಾ ಎನ್ನುವ ಸುಸಂಸ್ಕೃತ ಮತ್ತು ಸುಶಿಕ್ಷಿತ ಮನೆತನದ ಕನ್ನೆಯನ್ನೆ ಆರಿಸಿಕೊಂಡರು.

ದಿನಾಂಕ: ೧೫-೫-೧೯೮೧ ಶುಕ್ರವಾರದಂದು ಗುಲಬರ್ಗಾ ಜಿಲ್ಲೆಯ 'ಅಫಜಲಪುರ' ತಾಲೂಕಿನ ಚಿಣಮಗೇರಿ-ಚೌಡಾಪುರ ಮಧ್ಯದಲ್ಲಿರುವ ಗುಡ್ಡದ 'ಶ್ರೀ ಮಹಾಂತೇಶ್ವರ' ದೇವಾಲಯದಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲ ಮತ್ತು ಶಶಿಕಲಾ ಅವರ ವಿವಾಹ ಜರುಗಿತು. ಹೀಗೆ ಪಾಟೀಲ ಮತ್ತು ಸಾವನ್‌ರ ಕುಟುಂಬದ ರಕ್ತ ಸಂಬಂಧ ಬೆಳೆಯತೊಡಗಿತು. ಡಾ. ಬಸವರಾಜ ಪೋಲಿಸ್ ಪಾಟೀಲರ ಅತ್ತೆ ಮಾವಂದಿರರಾದ ಶ್ರೀ ಸಂಗಪ್ಪ ಸಾವನ್ ಮತ್ತು ಶ್ರೀಮತಿ ಹೇಮಾವತಿ ಸಾವನ್ ಇಬ್ಬರೂ ಶಿಕ್ಷಕ ದಂಪತಿಗಳು, ಸುಸಂಸ್ಕೃತರು, ಶಿಕ್ಷಣ ಪ್ರೇಮಿಗಳು - ಹೀಗಾಗಿ ತಮ್ಮ ಮಗಳಾದ ಶಶಿಕಲಾ ಅವರಿಗೂ ಅದೇ ವಾತಾವರಣದಲ್ಲಿ ಬೆಳೆಸಿಕೊಂಡು ಬಂದವರು.

ಡಾ. ಪಾಟೀಲರ ದಾಂಪತ್ಯ ಜೀವನ ಆರಂಭವಾದದು, ಗುಲಬರ್ಗಾದ ಶಹಾಬಜಾರದ ಒಂದು ಬಾಡಿಗೆ ಮನೆಯಲ್ಲಿ ಸತಿ-ಪತಿಗಳಿಬ್ಬರೂ ಪರಸ್ಪರ ಅರಿತು ಜೀವನ ಸಾಗಿಸಿದವರು. ಇವರಿಗೆ ವಿದ್ಯಾಸಾಗರ, ಅಮರನಾಥ, ಮಂಜುನಾಥ ಎಂಬ ಮೂವರು ಗಂಡು ಮಕ್ಕಳು. ಎರಡನೆಯ ಮಗ ಅಮರನಾಥ ರಸ್ತೆಯ ಅಪಘಾತದಲ್ಲಿ ನಿಧನ ಹೊಂದಿದ. ಇದು ಪಾಟೀಲರ ಜೀವನದಲ್ಲಿ ಬರಸಿಡಿಲಿನಂತಾಯಿತು.

ಡಾ. ಪಾಟೀಲರ ಧರ್ಮಪತ್ನಿಯಾದ ಶ್ರೀಮತಿ ಶಶಿಕಲಾ ಪಾಟೀಲ ಅವರೂ ಸಾಹಿತ್ಯ ಪ್ರೇಮಿಗಳು, ವೃತ್ತಿಯಿಂದ ಶಿಕ್ಷಕಿಯರು. ಡಾ. ಪೋಲಿಸ್ ಪಾಟೀಲರು ಸಾಹಿತ್ಯ ಕ್ಷೇತ್ರದಲ್ಲಿ ಅದರಲ್ಲೂ ಜಾನಪದ ಕ್ಷೇತ್ರದಲ್ಲಿ ಬೆಳೆಯಲು ಅವರ ಶ್ರೀಮತಿಯವರ ಪಾತ್ರ ತುಂಬಾ ಇದೆ. ಇಡೀ ಮನೆತನದ ಜವಾಬ್ದಾರಿಯನ್ನು ಇವರೇ ಹೊತ್ತುಕೊಂಡು ನಿಭಾಯಿಸುತ್ತಾರೆ. ಮಕ್ಕಳು ಚಿಕ್ಕವರಿದ್ದಾಗ ಅವರನ್ನು ಶಾಲೆಗೆ ಕಳುಹಿಸುವ ಕರೆತರುವ ಕೆಲಸವನ್ನು ಡಾ. ಪಾಟೀಲರು ಮಾಡಿದರೆ. ಶಶಿಕಲಾ ಅವರು ಸಮಗ್ರವಾಗಿ ಕುಟುಂಬ ಶೈಕ್ಷಣಿಕವಾಗಿ ಅಭಿವೃದ್ಧಿ

ಹೊಂದಬೇಕೆಂದು ಯತ್ನಿಸುತ್ತಿದ್ದರು. ಡಾ. ಪಾಟೀಲ ಅವರ ಕೌಟುಂಬಿಕ ಬದುಕು ತುಂಬ ಚೇತೋಹಾರಿಯಾದುದು. ಹಾಲು-ಜೇನು ಬೆರೆಸಿದಂಥದು.

ಇವರ ಮಕ್ಕಳು ಕೂಡ ವಿದ್ಯಾಭ್ಯಾಸದಲ್ಲಿ ಸದಾ ಮುಂದೆ ಮೊದಲನೆ ಮಗ 'ವಿದ್ಯಾಸಾಗರ' ಇಂಜಿನೀಯರ್ ಪದವಿಧರನಾಗಿ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದಾನೆ. ಅತ್ಯಂತ ಬುದ್ಧಿವಂತ ಹಾಗೂ ಪ್ರತಿಭಾನ್ವಿತನಾದ ಇವರ ಎರಡನೆಯ ಮಗ 'ಅಮರ' ಇಂಜಿನಿಯರಿಂಗ್ ಓದುತ್ತಿದ್ದಾಗಲೇ ರಸ್ತೆ ಅಪಘಾತದಲ್ಲಿ ಮೃತಪಟ್ಟ. ಇದೊಂದು ನುಂಗಲಾರದ ಕಹಿ ಸತ್ಯ. ಮೂರನೆ ಮಗ ಮಂಜುನಾಥ ಐ.ಟಿ.ಐ. ಮುಗಿಸಿಕೊಂಡು ತಂದೆ-ತಾಯಿಯ ಜೊತೆಗೆ ಇದ್ದಾನೆ.

ಡಾ. ಪಾಟೀಲರದು ಆದರ್ಶ ಕುಟುಂಬ. ಒಬ್ಬರ ಬೇಕು ಬೇಡಗಳನ್ನು ಇನ್ನೊಬ್ಬರು ಅರಿತುಕೊಂಡು ಅರ್ಥಪೂರ್ಣ ಜೀವನ ನಡೆಸಿದವರು. ದಿನಾಂಕ: ೧೫-೫-೨೦೦೬ ರಂದು ಇವರು ದಾಂಪತ್ಯ ಜೀವನದ ೨೫ ವರ್ಷಗಳನ್ನು ಪೂರ್ತಿಗೊಳಿಸಿದರು. ಈ ಸಂದರ್ಭದಲ್ಲಿ ಇವರ ಅಭಿಮಾನಿಗಳು, ಸ್ನೇಹಿತರು ಎಲ್ಲರೂ ಕೂಡಿ ೨೫ ವರ್ಷದ ಬೆಳ್ಳಿ ಹಬ್ಬವನ್ನು ಆಚರಿಸಿದರು. ಮುಂದೆ ಇವರನ್ನೇ ಕುರಿತು 'ಬೆಳ್ಳಿ ದಾಂಪತ್ಯ' ಎನ್ನುವ ಗ್ರಂಥವನ್ನು ಹೊರತರಲಾಯಿತು.

ಡಾ. ಬಸವರಾಜ ಪೋಲಿಸ್ ಪಾಟೀಲ ಮತ್ತು ಇವರ ಪತ್ನಿ ಶಶಿಕಲಾ ಪಾಟೀಲ, ಇಬ್ಬರು ಕಲಿಸುವ ವೃತ್ತಿಯಲ್ಲಿರುವವರು. ಕುಟುಂಬದ ಜವಾಬ್ದಾರಿಯ ಜೊತೆಗೆ ತಮ್ಮ ವೃತ್ತಿಯನ್ನು ಅಚ್ಚು ಕಟ್ಟಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಡಾ. ಪಾಟೀಲರು ವಿಶ್ವವಿದ್ಯಾಲಯದ ಸ್ನಾತಕರಿಗೆ ಬೋಧನೆ ಮಾಡುತ್ತಿದ್ದರೆ, ಇವರ ಶ್ರೀಮತಿಯವರು ಕಿರಿಯ ಮಕ್ಕಳಿಗೆ ಕಲಿಸುತ್ತಿದ್ದಾರೆ. ಇಬ್ಬರೂ ಕಲಿಸುವುದನ್ನೇ ಕಾಯಕವನ್ನಾಗಿ ಮಾಡಿಕೊಂಡಿರುವವರು. ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಪುಸ್ತಕ ಪ್ರಕಾಶನದಲ್ಲಿ ಆಸಕ್ತಿವುಳ್ಳವರಾಗಿದ್ದಾರೆ.

ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ, ಯುವ ಬರಹಗಾರರನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಅಮರ ಪ್ರಕಾಶನ ಸಂಸ್ಥೆ ಪ್ರಾರಂಭಿಸಿದ್ದಾರೆ. ಅನೇಕ ಪ್ರತಿಭಾನ್ವಿತರ, ವಿದ್ವಾಂಸರ ಕೃತಿಗಳನ್ನು ಈ ಪ್ರಕಾಶನದಿಂದ

ಪ್ರಕಟಿಸಲಾಗಿದೆ. ಈಗಾಗಲೇ ಸುಮಾರು ೨೫ ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡಿವೆ. ಇದರಲ್ಲಿನ ಹಲವು ಲೇಖಕರ ಕೃತಿಗಳಿಗೆ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ತಮ್ಮ ಪ್ರಕಾಶನದ ವತಿಯಿಂದ ರಾಜ್ಯ ಮಟ್ಟದ ವಿಚಾರ ಸಂಕಿರಣ, ಸಾಹಿತಿಗಳಿಂದ, ವಿದ್ವಾಂಸರಿಂದ ಪ್ರಬಂಧ ಮಂಡಣೆ, ಸಂವಾದ ಗೋಷ್ಠಿಗಳನ್ನು ನಡೆಸುತ್ತಿದ್ದು ಸಾಹಿತ್ಯ ಚಟುವಟಿಕೆಗಳಲ್ಲೂ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ.

ಹೀಗೆ ಡಾ. ಬಸವರಾಜ ಪೋಲಿಸ್ ಪಾಟೀಲರ ಇಡೀ ಕುಟುಂಬವೇ ಶಿಕ್ಷಣ, ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ.

ವ್ಯಕ್ತಿತ್ವ:

ಡಾ. ಬಸವರಾಜ ಪೋಲಿಸ್ ಪಾಟೀಲರು ನಾಡಿನ ಹೆಸರಾಂತ ಜಾನಪದ ವಿದ್ವಾಂಸರಾಗಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದು, ಹಳ್ಳಿಗಾಡಿನ ನೀರು, ನೆಲದ ಸತ್ವವನ್ನು ಹೀರಿಕೊಂಡು ಬೆಳೆದಿದ್ದಾರೆ. ಜಾನಪದದ ಆಸ್ತಿಯಾಗಿದ್ದಾರೆ.

ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲೂ ಶಿಸ್ತು, ನಿಯಮಿತತೆ, ವಿನಯ, ಸನ್ನಡತೆ, ಸಭ್ಯತೆ ಮತ್ತು ಸುಸಂಸ್ಕೃತ ಗುಣಗಳಿಂದ ಎಲ್ಲ ಗುರುಗಳ ಮೆಚ್ಚುಗೆ ಗಳಿಸಿದ್ದರು. ನಿರಂತರ ದುಡಿಮೆ, ಅದಮ್ಯ ಉತ್ಸಾಹ, ಕ್ರೀಯಾಶೀಲತೆ, ಸೌಜನ್ಯದ ವರ್ತನೆಯು ಇವರ ವ್ಯಕ್ತಿತ್ವಕ್ಕೆ ಮೆರಗು ತಂದುಕೊಟ್ಟಿದೆ.

ತಮ್ಮ ವೃತ್ತಿಜೀವನದಲ್ಲೂ ಯಾವ ಒಣ ಪ್ರತಿಷ್ಠೆಗೆ ಕಟ್ಟು ಬೀಳದೆ, ಅಭಿಮಾನ, ಅಹಂಕಾರ ರಾಜಕೀಯವಿಲ್ಲದ ಮಾಡದ ಇವರ ವ್ಯಕ್ತಿತ್ವ ವಿಶಿಷ್ಟ ಛಾಪು ಮೂಡಿಸಿದೆ. ತಮಗೆ ಪಾಠ ಮಾಡಿದ ಗುರುಗಳಾದ ಡಾ. ಸವದತ್ತಿ, ಡಾ. ಹೆಂಡಿ, ಡಾ. ಎಂ.ಎಸ್. ಲಠ್ಠೆ ಅವರ ಜೊತೆ ಸಹೋದ್ಯೋಗಿಯಾಗಿ ಕೆಲಸ ಮಾಡುವ ಸಂದರ್ಭದಲ್ಲೂ ತನ್ನ ವಿದ್ಯಾಗುರುವೆಂಬ ಗೌರವ ಭಾವನೆಯನ್ನು ಇಟ್ಟುಕೊಂಡೆ ವರ್ತಿಸುತ್ತಿದ್ದರು. ಯಾವುದೇ ವಿಷಯವಿರಲಿ ಮುಚ್ಚುಮರೆ ಇಲ್ಲದೇ ಚರ್ಚಿಸುವ ಸ್ವಭಾವ ಇವರದು.

ಡಾ. ಪಾಟೀಲರು ಸಜ್ಜನ ವ್ಯಕ್ತಿ ಎನಿಸಿಕೊಂಡಿದ್ದಾರೆ. ಯಾರ ಉಸಾಬರಿಗೆ ಹೋಗದೆ ತಾಸಾಯಿತು ತಮ್ಮ ಅಧ್ಯಯನ ಅಧ್ಯಾಪನ, ಬರಹವಾಯಿತು. ತಮ್ಮ ಬದುಕಿನ ಅನೇಕ ಘಟ್ಟಗಳನ್ನು ಧಾಟಿ ಬಂದಿದ್ದಾರೆ. ಹಗಲಿರುಳು ಜಾನಪದಕ್ಕಾಗಿ ದುಡಿದಿದ್ದಾರೆ. ಅವರ ಶಾಂತಿಯ ವರ್ತನೆ, ಸೌಜನ್ಯ ನುಡಿ ಎಂಬ ಅಸ್ತ್ರದಿಂದ ಎಲ್ಲರನ್ನು ಆಕರ್ಷಿಸಿದ್ದಾರೆ.

ಸುಮಾರು ೨೫ ವರ್ಷಗಳಿಂದ ಜಾನಪದಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ಅಧಿಕಾರ-ಪ್ರಶಸ್ತಿ ಆಸೆಗೆ ಬಲಿಬೀಳದೆ ಜನಪದದಲ್ಲಿಯೇ ಕೃಷಿ ಮಾಡುತ್ತಿದ್ದಾರೆ. ಹೈದ್ರಾಬಾದ ಕರ್ನಾಟಕದ ಜನಪದ ಕೇಂದ್ರ ಸ್ಥಳಗಳನ್ನು ಗುರುತಿಸಿದ್ದಾರೆ. ಜಾನಪದ ವಿದ್ವಾಂಸರಲ್ಲಿಯೇ ಇವರು ವಿರಳ.

ಸಜ್ಜನರು, ಸ್ನೇಹಪರರು ಹಾಗೂ ಸರಳರು. ತಮ್ಮ ಸೌಜನ್ಯಶೀಲ ವ್ಯಕ್ತಿತ್ವದಿಂದ ನೂರಾರು ಜನರಿಗೆ ಹತ್ತಿರವಾಗಿದ್ದಾರೆ. ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹಮ್ಮು ಬಿಮ್ಮುಗಳಿಲ್ಲದ ಸರಳ ವ್ಯಕ್ತಿ. ತುಂಬ ಪ್ರಾಮಾಣಿಕರು. ನುಡಿದಂತೆ ನಡೆಯುವ ವಿರಳ ವ್ಯಕ್ತಿಗಳಲ್ಲಿ ಇವರು ಒಬ್ಬರು. ಎಂದೂ ಯಾರಿಗೂ ಕೆಟ್ಟದನ್ನು ಬಯಸದ ವ್ಯಕ್ತಿತ್ವ. ತನಗೆ ಸಾಧ್ಯವಾದರೆ ಒಳ್ಳೆಯದನ್ನು ಮಾಡುವ ಶಕ್ತಿಯನ್ನು ಮಾತ್ರ ಉಳಿಸಿಕೊಂಡಿದ್ದಾರೆ. ಇರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣ. ಹೊಸ ಸಮಸ್ಯೆಗಳ ಸೃಷ್ಟಿಗೆ ಕೈ ಹಾಕುವುದೇ ಬೇಡ ಎಂಬ ಪ್ರವೃತ್ತಿ ಇವರದು.

ಸಹೋದ್ಯೋಗಿಗಳೊಂದಿಗೆ, ಮೇಲಾಧಿಕಾರಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಸದಾ ಚರ್ಚೆ, ಸಂಭಾಷಣೆಗಳಲ್ಲಿಯೆ ಕಾಲಕಳೆಯುವಂತವರು.

ಕೆಲಸ ಖಾಯಂ ಆಗುವುದಕ್ಕೆ ಹರಸಾಹಸ ಪಡಬೇಕಾಯಿತು. ಸುಮಾರು ಅರ್ಧದಷ್ಟು ವಯಸ್ಸು ಕಳೆದಿತ್ತು. ಜೀವನದಲ್ಲಿ ನಿರಾಸೆ, ಜಿಗುಪ್ಸೆ ಎದ್ದು ಕಾಣುತ್ತಿತ್ತು. ಆದರೂ ಇವರು ಜೀವನದ ಹೋರಾಟದಲ್ಲಿ ಬಹುಬೇಗ ಸೋಲನ್ನೊಪ್ಪಿಕೊಳ್ಳಲಿಲ್ಲ. ಸಮಸ್ಯೆಗಳನ್ನು ಸವಾಲಾಗಿ

ಸ್ವೀಕರಿಸಿದರು. ಅವುಗಳೊಡನೆ ಸೆಣಸಾಡಿದರು. ಕೊನೆಗೂ ಜಯುಗಳಿಸಿದರು.

ಉತ್ತರಾರ್ಧ ಜೀವನ ಮಾತ್ರ ಸುಖಕರವಾಯಿತು. ಕಟ್ಟೆಯ ಕಲ್ಲು ಕಟ್ಟೆಗೆ ಕುಳಿತಂತಾಯಿತು ಎನ್ನುವ ಗಾದೆಯ ಮಾತಿಗೆ ಒಪ್ಪಿದಂತಾಯಿತು. ಜೀವನದ ಪೂರ್ವಾರ್ಧ ಭಾಗ ತಾತ್ಕಾಲಿಕ ಸಂಬಳ ಪಡೆದು ಬಾಳನೌಕೆ ಸಾಗಿಸಿದ್ದಾರೆ. ಉತ್ತರಾರ್ಧ ಜೀವನ ಮಾತ್ರ ಸುಖಕರವಾಯಿತು.

"ಡಾ. ಬಸವರಾಜ ಪೋಲಿಸ್ ಪಾಟೀಲರ ಬದುಕು ಸರಳ", ಭಾಷೆ ಇನ್ನೂ ಸರಳ, ಭಾವನೆಗಳು ಸರಳಾತಿ ಸರಳ, ಬದುಕಿನ ಸುಂದರ ವ್ಯಕ್ತಿತ್ವದ ಇವರ ಮಾತುಗಳು ನುಡಿದರೆ ಮುತ್ತಿನಹಾರ, "ಮೃದು ವಚನಂಗಳೆ ಸಕಲ ಜಪತಪಂಗಳಯ್ಯ" ಎನ್ನುವ ವಚನಕ್ಕೆ ಕನ್ನಡಿ ಹಿಡಿದಂತೆ ಇವರ ವ್ಯಕ್ತಿತ್ವ ಆಚಾರ ವಿಚಾರಗಳಲ್ಲಿ ಸಾಮಿಪ್ಯ. ವೈಯಕ್ತಿಕ ಬದುಕು ಪರಿಶುದ್ಧ ಇವರ ಚರಿತ್ರೆ ಸುಂದರ. ಚಾರಿತ್ರ್ಯ ಇನ್ನೂ ಸುಂದರ. ಈ ಕಾಲದಲ್ಲಿಯೂ ಭ್ರಷ್ಟಗೊಳ್ಳದೆ ಒಳ್ಳೆಯವರು ಇದ್ದಾರೆನ್ನುವುದಕ್ಕೆ ಬಸವರಾಜ ಪಾಟೀಲ ಒಂದು ಒಳ್ಳೆಯ ನಿದರ್ಶನ. ಸರಳ, ಸಜ್ಜನಿಕೆ, ಉದ್ವತ್‌ಗಳೆ ಇವರಿಗೆ ಆಭರಣಗಳು, ಸರಳ ಉಡುಪುಗಳಲ್ಲೇ ಇವರು ಶೋಭಿಸುತ್ತಾರೆ. ನಗುತ್ತ ನಗಿಸುತ್ತ ಸ್ನೇಹಿತರೊಂದಿಗೆ ಬೆರೆಯುತ್ತಾರೆ. ಸದಾ ಸುಖಿಹಸನ್ಮುಖದ ಭಾವ ಅವರದು. ತಮ್ಮ ನೆಚ್ಚಿನ ವಿದ್ಯಾರ್ಥಿಗಳು, ಆತ್ಮೀಯರಾದವರಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ. ತಮಗೆ ಬಂದೊದಗಿದ ಕಷ್ಟ-ನಷ್ಟಗಳು ಯಾರಿಗೂ ಬರಬಾರದು ಎಂದು ಮನದಲ್ಲಿ ಚಿಂತಿಸುತ್ತಾರೆ"[೧].

ದಲಿತ ಮತ್ತು ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ಧನ್ಯತೆಯ ಭಾವ ವ್ಯಕ್ತಪಡಿಸುತ್ತಾರೆ ಅಪಾರ ಶಿಷ್ಯ ಬಳಗ ಹೊಂದಿದ್ದಾರೆ. ಬಡವ ಬಲ್ಲಿದ, ಕನಿಷ್ಠ ಗರಿಷ್ಠ, ದಡ್ಡ-ಜಾಣ ಎಂಬ

---

೧. , ಡಾ. ಗವಿಸಿದ್ದಪ್ಪ. ಎಚ್. ಪಾಟೀಲ-ಬೆಳ್ಳಿದಾಂಪತ್ಯ-ಅಮರ ಪ್ರಕಾಶನ ೨೦೦೫, ಪುಟ-೨೦-೨೧.

ಭೇದಭಾವ ಮಾಡಿದವರಲ್ಲ. ಅಲಕ್ಷಿಸಿದವರಲ್ಲ. ನಿಂದಿಸಿದವರಲ್ಲ. ಎಲ್ಲರೂ ನಮ್ಮವರೆಂಬ ಭಾವನೆಯಿಂದ ನೋಡುವ ದೃಷ್ಟಿಕೋನವುಳ್ಳವರು. ಒಳ್ಳೆಯ ಗುಣಗಳನ್ನು ಮೆಚ್ಚಿಕೊಳ್ಳುವ, ತಪ್ಪಾದರೆ ಕ್ಷಮಿಸುವ ಉದಾರ ಗುಣ ಇವರದು.

ಪ್ರತಿಯೊಬ್ಬ ಪುರುಷನ ಏಳಿಗೆಯ ಹಿಂದೆ ಒಬ್ಬ ಸ್ತ್ರೀಯ ಶ್ರೇಯಸ್ಸು ಇರುತ್ತದೆ ಎಂಬ ಮಾತಿನಂತೆ ಡಾ. ಪಾಟೀಲರ ಸಾಧನೆಯ ಪಥದಲ್ಲಿ ಇವರ ಪತ್ನಿಯ ಶ್ರಮವು ಸಾಕಷ್ಟಿದೆ.

ತಾವುಗಳಷ್ಟೆ ಬೆಳೆಯದೆ ತಮ್ಮ ವಿದ್ಯಾರ್ಥಿಗಳನ್ನು ಬೆಳೆಸುತ್ತಿದ್ದಾರೆ. ತಮಗಿಂತ ತಮ್ಮ ಶಿಷ್ಯರು ಶ್ರೇಷ್ಠ ಮಟ್ಟದ ಸಾಹಿತಿಗಳು, ಬರಹಗಾರರು ಆಗಬೇಕೆಂಬ ಹಂಬಲವುಳ್ಳವರು. ಯಾವುದಕ್ಕೂ ಎಂದಿಗೂ ಎಲ್ಲಿಯೂ ಆಸೆಪಟ್ಟವರಲ್ಲ. ತಾನಾಗಿ ಬಂದದ್ದು ಮಾತ್ರ ಸ್ವೀಕರಿಸಿ ಸಂತೋಷಪಡುವ ಸ್ವಭಾವ ಯಾರಾದರೂ ಪುಸ್ತಕಗಳಾಗಲಿ, ವಸ್ತುಗಳಾಗಲಿ ತೆಗೆದುಕೊಂಡು ಹೋಗಿ ಪುನ: ಕೊಡದಿದ್ದರೂ ರೇಗಾಡುವವರಲ್ಲ. ತುಂಬ ಶಾಂತ ಸ್ವಭಾವ ಇವರದು.

ಹಲವಾರು ಯೋಜನೆ-ಸಂಗ್ರಹ ಮಾಡಿಕೊಂಡು ಕಾರ್ಯಮಗ್ನರಾದ ಡಾ. ಬಸವರಾಜ ಪೋಲಿಸ್ ಪಾಟೀಲರು ನಾಡಿನ ಸುಪ್ರಸಿದ್ಧ ಪತ್ರಿಕೆ ಅಂಥಾಲಜಿ, ಅಭಿನಂದನ ಗ್ರಂಥ ಪತ್ರಿಕೆಗಳಲ್ಲಿ ನೂರಕ್ಕೂ ಹೆಚ್ಚು ಜನಪದ ಸಾಹಿತ್ಯದ ಸಂಶೋಧನಾತ್ಮಕ ಲೇಖನ ಬರೆದಿದ್ದಾರೆ. ೨೫ ಕ್ಕೂ ಹೆಚ್ಚು ಮೌಲಿಕವಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಅನೇಕ ಸಮ್ಮೇಳನ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಅತಿಥಿಗಳಾಗಿ, ಉದ್ಘಾಟಕರಾಗಿ, ಅಧ್ಯಕ್ಷರಾಗಿ ಜಾನಪದ ಕ್ಷೇತ್ರದ ಮೌಲ್ಯ ಎತ್ತಿ ಹಿಡಿದಿದ್ದಾರೆ. ಗುಲಬರ್ಗಾ, ಬೆಂಗಳೂರು, ಧಾರವಾಡ ಮತ್ತು ರಾಯಚೂರು ಆಕಾಶವಾಣಿಗಳಲ್ಲಿ ಅವರ ಚಿಂತನ, ಭಾಷಣ, ಲೇಖನಗಳು

ಪ್ರಸಾರಗೊಂಡಿವೆ. ಹಲವು ಸಂಘ, ಸಂಸ್ಥೆಯ ಕಾರ್ಯದರ್ಶಿಗಳಾಗಿ ಕಾರ್ಯಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

'ಅಮರ' ಪ್ರಕಾಶನ ಸಂಸ್ಥೆ ಸ್ಥಾಪಿಸಿ ಯುವ ಬರಹಗಾರರ ಪುಸ್ತಕಗಳನ್ನು ಪ್ರಕಟಿಸಿ ಯುವ ಬರಹಗಾರರನ್ನು ಬೆಳಕಿನೆಡೆಗೆ ತಂದಿದ್ದಾರೆ. ಇವರ ಹಲವಾರು ಕೃತಿಗೆ ಪ್ರಶಸ್ತಿಗಳೂ ಸಂದಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುರಸ್ಕಾರಗಳು ಲಭಿಸಿವೆ. ಅಫಜಲಪುರದಲ್ಲಿ ನಡೆದ ಕಲಬುರ್ಗಿ ಜಿಲ್ಲಾ ಪ್ರಥಮ ಜನಪದ ಸಾಹಿತ್ಯ ಮತ್ತು ಕಲಾ ಸಮ್ಮೇಳನಾಧ್ಯಕ್ಷರಾಗಿದ್ದರು.

ಅಧ್ಯಾಯ–೩

ಕರ್ನಾಟಕ ಜಾನಪದ ಸಾಹಿತ್ಯ ಪರಂಪರೆ ಮತ್ತು ಡಾ. ಬಸವರಾಜ ಪೋಲಿಸ್ ಪಾಟೀಲ

ಅಧ್ಯಾಯ-೩

ಕರ್ನಾಟಕ ಜಾನಪದ ಸಾಹಿತ್ಯ ಪರಂಪರೆ ಮತ್ತು ಡಾ. ಬಸವರಾಜ ಪೋಲಿಸ್ ಪಾಟೀಲ.

"ಜನಪದಕ್ಕೆ ಸಂಬಂಧಿಸಿದ್ದು ಜಾನಪದ, ಜನಪದದ ಸಮಸ್ತವನ್ನೂ ಒಳಗೊಂಡಿದ್ದು, ಜಾನಪದ ಮನುಷ್ಯ ಸೃಷ್ಟಿಯ ಎಷ್ಟೋ ವರ್ಷಗಳ ಮೇಲೆ ಭಾಷೆಯನ್ನು ಅಳವಡಿಸಿಕೊಂಡರೂ ಬರವಣಿಗೆಯ ಅದ್ಭುತ ಸಿದ್ಧಿಸಿರಲಿಲ್ಲವಾದ್ದರಿಂದ, ಭಾಷೆಯ ಅನುಭವಗಳನ್ನು ಪರಸ್ಪರರಲ್ಲಿ ಹಂಚಿಕೊಂಡು, ನೆನಪಿನಲ್ಲಿ ಉಳಿಸಿಕೊಳ್ಳುತ್ತಿದ್ದರು. ಆ ನೆನಪಿನ ಆಸ್ತಿಯನ್ನು ತಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ, ಮರಿಮಕ್ಕಳಿಗೆ, ಅಕ್ಕ ಪಕ್ಕದವರಿಗೆ, ಬಂಧು ಬಾಂಧವರಿಗೆ ರವಾನಿಸುತ್ತಿದ್ದರು. ಅಂದರೆ ಜನಪದ ಸಂಸ್ಕೃತಿ ಜನರಿಂದ ಜನರಿಗೆ, ತಲೆಮಾರಿನಿಂದ ತಲೆ ಮಾರಿಗೆ, ನೆನಪಿನಿಂದ ನೆನಪಿಗೆ ಸಾಗುತ್ತಿತ್ತು. ಈ ನೆನಪಿನ ನಿಧಿಯೇ ಜಾನಪದ. ಪ್ರಾಚೀನ ಕಾಲದ, ಪ್ರಾಚೀನ ಜನರ ಸಮಸ್ತ ಸಂಸ್ಕೃತಿಯ ಸಾರರೂಪವೇ ಜಾನಪದ. ಅದರ ಅಭ್ಯಾಸವೇ ಜಾನಪದದ ಅಭ್ಯಾಸ. ಜಾನಪದ ಅಭ್ಯಾಸವೆಂದರೆ ಮನುಕುಲದ ಸಾಂಸ್ಕೃತಿಕ ಪರಂಪರೆಯ ಅಭ್ಯಾಸವೆಂದೇ ಅರ್ಥ"[೧].

ಜಾನಪದದಲ್ಲಿ ಬಹು ಮುಖ್ಯವಾದ ಪ್ರಕಾರ ಜನಪದ ಸಾಹಿತ್ಯ. ಜಾನಪದದ ಇತರ ಪ್ರಕಾರಗಳ ಅಧ್ಯಯನ ಪ್ರಾರಂಭವಾಗುವ ಮೊದಲೇ ಜನಪದ ಸಾಹಿತ್ಯ ಬೆಳಕಿಗೆ ಬಂತು. ಜಾನಪದ ಸಾಹಿತ್ಯವೇ ಜಾನಪದದ ಅಧ್ಯಯನಕ್ಕೆ ನಾಂದಿ ಎನ್ನಬಹುದು. ಜಗತ್ತಿನ ಎಲ್ಲಾ ಕಡೆ ಜನಪದ ಸಾಹಿತ್ಯ ಜನರ ಆಸಕ್ತಿಯನ್ನು ಸೆಳೆದಿದೆ.

ಪ್ರಪಂಚದ ಎಲ್ಲಾ ಮೂಲ ಮಹಾಕಾವ್ಯಗಳಲ್ಲೂ ಆಯಾ ಜನಾಂಗದ ಜಾನಪದ ಅಂಶವಿರುವುದನ್ನು ಮನಗಾಣಬಹುದು. ಭಾರತದಲ್ಲಿ ಋಗ್ವೇದದ ಕಾಲದಿಂದಲೂ ಜಾನಪದದ ಅಂಶವನ್ನು ಗುರುತಿಸಲಾಗುತ್ತಿದೆ. ಗುಣಾಢ್ಯನ ಬೃಹತ್ಕಥೆ, ಕ್ಷೇಮೇಂದ್ರನ ಬೃಹತ್ಕಥಾಮಂಜರಿ, ಬೇತಾಳ ಪಂಚವಿಂಶತಿ ಮುಂತಾದವು ಜನಪದ ಮೂಲದಿಂದ ಸೃಷ್ಟಿಯಾದ ಕಥೆಗಳೇ ಆಗಿವೆ.

---

೧. ಡಿ. ಲಿಂಗಯ್ಯ ಮತ್ತು ಡಾ. ಕೆ.ಆರ್. ಸಂಧ್ಯಾರೆಡ್ಡಿ-ಜಾನಪದ ಸ್ವರೂಪ ಮತ್ತು ಸಾಹಿತ್ಯ-ಕನ್ನಡ ಸಾಹಿತ್ಯ ಪರಿಷತ್ತು-೨೦೦೬, ಪು-೨-೩.

ಕನ್ನಡದ ಮೊದಲನೆಯ ಉಪಲಬ್ಧ ಗ್ರಂಥವಾದ "ವಡ್ಡಾರಾಧನೆ"ಯೂ ಜನಪದ ಕಥಾಮೂಲಕ್ಕೆ ಋಣಿಯಾಗಿದೆ. ಕನ್ನಡದ ಕೆಲವು ಮಹಾಕವಿಗಳ ಕಾವ್ಯಗಳಲ್ಲೂ ಜನಪದ ಕಥೆಗಳ ಬಳಕೆಯಿದೆ. ವಿಶ್ವದ ಎಲ್ಲಕಡೆ ಜನಪದ ಗದ್ಯ ಪದ್ಯ ಸಾಹಿತ್ಯ ಸಹೃದಯರ ಗಮನವನ್ನು ಸೆಳೆದಿದೆ. ೧೮೧೨ ರಲ್ಲಿ ಜರ್ಮನಿಯ ಜೇಕಬ್ ಮತ್ತು ವಿಲ್‌ಹೆಲ್ಮ್ ಗ್ರಿಮ್ ಸಹೋದರರು ಪ್ರಕಟಿಸಿದ ಜನಪದ ಕಥೆಗಳ ಸಂಕಲನ ಜನಪದ ಸಾಹಿತ್ಯದ ವೈಜ್ಞಾನಿಕ ಅಧ್ಯಯನಕ್ಕೆ ಪ್ರೇರಣೆಯಾಯಿತು. ಫಿನ್‌ಲೆಂಡ್, ಸ್ಪೈಯಿನ್ ಮುಂತಾದ ದೇಶಗಳ ಜನಪದ ಕಾವ್ಯಗಳ ಪ್ರಕಟಣೆ, ಪ್ರೊ. ಚೈಲ್ಡ್ ಮೊದಲಾದವರ ಲಾವಣಿ ಸಂಗ್ರಹಗಳು ಜನಪದ ಸಾಹಿತ್ಯ ಕ್ಷೇತ್ರದ ಸ್ವಾರಸ್ಯವನ್ನು ಜಗತ್ತಿಗೆ ಸಾರಿದರು.

"ಕನ್ನಡದಲ್ಲಿ ಶ್ರೀಮಂತವಾದ ಜನಪದ ಸಾಹಿತ್ಯವಿದೆ. ಜಗತ್ತಿನ ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಉದಾಹರಣೆ ನೀಡಬಹುದಾದ ಸಾಹಿತ್ಯ ಇರುವುದಷ್ಟೆ ಅಲ್ಲ, ಆ ಪ್ರಕಾರಗಳಿಗೆ ಹೊರತಾದವು ಹೊಸ ಪ್ರಕಾರಗಳಿಗೆ ಆಕರವಾಗುವಂಥವೂ ಇವೆ. ಇಂಗ್ಲೀಷ ಭಾಷೆಯ 'Folk literature' ಎನ್ನುವುದಕ್ಕೆ ಸಮಾನಾರ್ಥಕವಾಗಿ 'ಜನಪದ ಸಾಹಿತ್ಯ' ಎಂದು ಬಳಸುತ್ತಿದೆ. ಕಳೆದ ೧೦೦ ವರ್ಷದಿಂದ ಕನ್ನಡದಲ್ಲಿ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ ನಡೆಯುತ್ತಿದೆ"[೧].

ಜನಪದ ಸಾಹಿತ್ಯ ಕಾಯಕದೊಡನೆ ಸೃಷ್ಟಿಯಾಗಿದೆ. ಜನಪದರ ಬದುಕು ಬೇರೆಯಲ್ಲ. ಅವರ ಸಾಹಿತ್ಯ ಬೇರೆಯಲ್ಲ. ಇದು ಕೃತಕವಾಗಿ, ಬಲವಂತವಾಗಿ ತಿಣಿಕಿ ಕಟ್ಟಿದ್ದಲ್ಲ; ಪರಿಸರದ ಪ್ರಭಾವದಿಂದ ಸಹಜವಾಗಿ ಹುಟ್ಟಿದ್ದು, ಜನಪದ ಸಾಹಿತ್ಯದ ವಸ್ತು, ರೂಪ, ಅಭಿವ್ಯಕ್ತಿ ವೈವಿಧ್ಯಮಯವಾಗಿದೆ.

---

೧. ಡಿ. ಲಿಂಗಯ್ಯ ಮತ್ತು ಕೆ.ಆರ್. ಸಂಧ್ಯಾರೆಡ್ಡಿ – ಜಾನಪದ ಸ್ವರೂಪ ಮತ್ತು ಸಾಹಿತ್ಯ–ಕನ್ನಡ ಸಾಹಿತ್ಯ ಪರಿಷತ್–೨೦೦೬, ಪುಟ–೪೧.

ಪದ್ಯ ಸಾಹಿತ್ಯ, ಗದ್ಯ ಸಾಹಿತ್ಯ ಮತ್ತು ಜನಪದ ರಂಗಭೂಮಿ ಎಂದು ಮೂರು ಮುಖ್ಯ ಭಾಗವಾಗಿ ವಿಂಗಡಿಸಿ, ಕರ್ನಾಟಕದ ಜನಪದ ಸಾಹಿತ್ಯ ಪರಂಪರೆಯನ್ನು ಅರಿತುಕೊಳ್ಳಬಹುದು.

ಜನಪದ ಪದ್ಯ ಸಾಹಿತ್ಯದಲ್ಲಿ ಜನಪದ ಬಿಡಿಗೀತೆ, ಹಂತಿಪದ, ಗೀಗೀ ಪದ, ಡೊಳ್ಳಿನ ಪದ, ಲಾವಣಿ, ಜನಪದ ಕಥನಗೀತೆ ಅಥವಾ ಜನಪದ ಖಂಡಕಾವ್ಯ, ಜನಪದ ಮಹಾಕಾವ್ಯ, ಗಾದೆ, ಒಗಟು ಮುಂತಾದವುಗಳು ಸೇರಿಕೊಳ್ಳುತ್ತವೆ.

ಜನಪದ ಗೀತೆ:

ಇದುಜನಪದ ಸಂಸ್ಕೃತಿಯ ಒಂದು ಅಂಗ, ಜಾನಪದದ ಇತರ ಪ್ರಕಾರಗಳಂತೆ ಇದೂ ಕೂಡ ವಾಕ್ ಪರಂಪರೆ ಅಥವಾ ಮೌಖಿಕ ಪರಂಪರೆಯಿಂದ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದಿದೆ. ಕಂಠಸ್ಥ ಪರಂಪರೆಯೇ ಇದರ ಜೀವಾಳ. ಜನಪದ ಗೀತೆ ಭಾವಗೀತೆಯ ಸ್ವರೂಪ ಹೊಂದಿದೆ. ಶತಮಾನಗಳ ಹಿಂದೆ ಹುಟ್ಟಿದೆ. ಅಕ್ಷರದಲ್ಲಿ ಕಾಣಿಸಿಕೊಳ್ಳದಿದ್ದರೂ ಜನಪದ ಗೀತೆ ಸಾಹಿತ್ಯವೆ. ಈಗಿನ ವಿದ್ಯಾವಂತರು ಹಾಡಿದರೂ ಜನಪದ ಗೀತೆಯ ಮೌಖಿಕ ಮೂಲವನ್ನೇ ಅವಲಂಬಿಸುತ್ತಾರೆ”[೧].

ಜನಪದ ಮಹಾಕಾವ್ಯ:

ಶಿಷ್ಟ ಸಾಹಿತ್ಯದಲ್ಲಿ ಮಹಾಭಾರತ, ರಾಮಾಯಣ ಮಹಾಕಾವ್ಯಗಳಿರುವಂತೆ ಜನಪದರಿಗೆ ಅವರದೇ ಆದ ಮಹಾಕಾವ್ಯಗಳಿವೆ ಕನ್ನಡದಲ್ಲಿ ಶ್ರೀ ಮಲೆಮಹಾದೇಶ್ವರ ಸ್ವಾಮಿ, ಮಂಟೇ ಸ್ವಾಮಿ, ಜುಂಜಪ್ಪ, ಚೌಡಿಕೆ ಎಲ್ಲಮ್ಮ, ಮೈಲಾರಲಿಂಗ ಮೊದಲಾದಜನಪದ ಮಹಾಕಾವ್ಯಗಳಿವೆ. ಕನ್ನಡದ ಜನಪದ ಮಹಾಕಾವ್ಯಗಳನ್ನು ಕಂಸಾಳೆ ಗುಡ್ಡರು, ನೀಲಗಾರರು, ಗೊರವರು ಮೊದಲಾದವರು ಉಳಿಸಿಕೊಂಡು ಬಂದಿದ್ದಾರೆ.

---

೧. ಡಿ. ಲಿಂಗಯ್ಯ ಮತ್ತು ಕೆ.ಆರ್. ಸಂಧ್ಯಾರೆಡ್ಡಿ–ಜಾನಪದ ಸ್ವರೂಪ ಮತ್ತು ಸಾಹಿತ್ಯ ೨೦೦೬, ಪುಟ–೪೩.

ಗಾದೆ:

ಜನಪದ ಗಾದೆಗಳು ಮೂಲತ: ಜನಪದ ಕಾವ್ಯಾಂಗಗಳೇ, ಭಾರತದಲ್ಲಿ ವೇದ, ಉಪನಿಷತ್ತು, ವಿಷ್ಣು ಪುರಾಣ, ಶಿವಪುರಾಣ, ಜೈನಪುರಾಣ, ಮಹಾಭಾರತ, ರಾಮಾಯಣ, ದಮ್ಮಪದ, ಪಂಚತಂತ್ರ ಮೊದಲಾದ ಗ್ರಂಥಗಳಲ್ಲಿ ಗಾದೆಗಳಿವೆ.

ಒಗಟು:

ಕನ್ನಡ ಕಾವ್ಯಗಳಲ್ಲಿ, ಶಿವಶರಣರ ವಚನಗಳಲ್ಲಿ ಒಗಟಿನ ಲಕ್ಷಣಗಳು ಇವೆ. ಅಲ್ಲಮಪ್ರಭು, ಅಕ್ಕಮಹಾದೇವಿ, ಸರ್ವಜ್ಞ, ಮೊದಲಾದವರ ಬೆಡಗಿನ ವಚನಗಳಲ್ಲಿ ಇಂಥವನ್ನು ಕಾಣಬಹುದು. 'ಕಂತಿ ಹಂಪನ ಸಮಸ್ಯೆಗಳು ಮತ್ತು ಹರಿಹರನ ಮುಡಿಗೆ ಅಷ್ಟಕ' ಗಳಲ್ಲೂ ಒಗಟಿನ ಅಂಶವುಂಟು. ಕನಕದಾಸರ ಜೀವನ ವೃತ್ತಾಂತಗಳಲ್ಲಿ ಮುಡಿಗೆ ಅಷ್ಟಕಗಳಲ್ಲಿ ಒಗಟಿನ ವಿಷಯಗಳಿಗೆ. ಪುರಂದರ ದಾಸರ ಕೀರ್ತನೆಗಳಲ್ಲೂ ಇಂಥ ರಚನೆಗಳುಂಟು. ಶಿಶುನಾಳ ಶರೀಫರಂತಹ ತತ್ವಪದಕಾರರ ತತ್ವಪದಗಳಲ್ಲೂ, ನವ್ಯ ಕಾವ್ಯಗಳಲ್ಲೂ ನವ್ಯ ನಾಟಕಗಳಲ್ಲೂ ಒಗಟಿನ-ಅಂಶಗಳನ್ನು ಕಾಣಬಹುದು.

ಜನಪದ ಕಥೆ:

ತಲೆಮಾರಿನಿಂದ ತಲೆಮಾರಿಗೆ ವಾಗ್ರೂಪದಲ್ಲಿ ಸಾಗಿ ಬರುವ ಕಥೆಯನ್ನು ಜನಪದ ಕಥೆ ಎನ್ನುತ್ತೇವೆ. ಕನ್ನಡದಲ್ಲಿ ಅಜ್ಜಿ ಕಥೆ, ಕಟ್ಟುಕಥೆ, ರಾಜರಾಣಿ ಕಥೆ ಇತ್ಯಾದಿ ಪದಗಳನ್ನು ಜನಪದ ಕಥೆಗೆ ಸಂವಾದಿಯಾಗಿ ಬಳಸುವ ರೂಢಿ ಇದೆ. ಭಾರತದ ಪಂಚತಂತ್ರ, ಹಿತೋಪದೇಶ ಗ್ರೀಸಿನ ಈ ಸೋಪನ ನೀತಿ ಕಥೆಗಳು ಜಗತ್ತಿನಲ್ಲೆಲ್ಲಾ ಪ್ರಸಿದ್ಧವಾಗಿವೆ.

ಜನಪದ ರಂಗಭೂಮಿ:

ಜನಪದ ರಂಗಭೂಮಿ ಪ್ರಾಚೀನವಾದುದು, ಮನುಷ್ಯನಿಗೆ ಕಲೆಯ ಬಗೆಗೆ ಆಸಕ್ತಿ ಮೂಡಿದಾಗ ಹುಟ್ಟಿದ್ದು, ಜನಪದ ಹಾಡು, ಕುಣಿತಗಳು ಮೇಳವಿಸಿದಾಗ ಜನಪದ ರಂಗಭೂಮಿ

ಪ್ರಾರಂಭವಾಯಿತು. ಜನಪದ ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುವ ನಾಟಕಗಳ ಕಥಾವಸ್ತು ಜನಪದ ಕಲ್ಪನೆಯಲ್ಲಿ ಸೃಷ್ಟಿಯಾದದ್ದು. ಈಗ ಪ್ರಚಾರದಲ್ಲಿರುವ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳಿಗೆ ಅನೇಕ ಕಥಾನಕಗಳಿಗೆ ಜನಪದ ಕಲ್ಪನೆಯೇ ಮೂಲ.

ವಿದ್ವಾಂಸರ ಕೊಡುಗೆಯ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಸಾಹಿತ್ಯ ಪರಂಪರೆ:

ಹಲಸಂಗಿ ಚೆನ್ನಮಲ್ಲಪ್ಪ:

"ಇವರ ಸ್ಥಳ ಬಿಜಾಪುರ ಜಿಲ್ಲೆ. ಹೆಣ್ಣು ಮಕ್ಕಳು ಕುಟ್ಟುವಾಗ ಬೀಸುವಾಗ ಹಾಡುವ ತ್ರಿಪದಿಗಳನ್ನು ಸಂಗ್ರಹಿಸಿದರು. 'ಗರತಿಯ ಹಾಡು' ಸಂಕಲನವನ್ನು 'ಜಯ ಕರ್ನಾಟಕ' ಗ್ರಂಥಮಾಲೆಯಲ್ಲಿ ಹೊರತಂದರು. ೧೯೨೩ ರಲ್ಲಿ ವಿಜಾಪುರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ 'ಹಳ್ಳಿಯ ಸಾಹಿತ್ಯ' ಎಂಬ ಪ್ರಬಂಧವನ್ನು ಮಂಡಿಸಿದರು. 'ಬೀಸುಕಲ್ಲು ಹಾಡುಗಳು' ಎಂಬ ಪ್ರಬಂಧವನ್ನೂ ಬರೆದಿದ್ದಾರೆ"[೧].

ಸಿಂಪಿ ಲಿಂಗಣ್ಣ:

ಬಿಜಾಪುರ ಜಿಲ್ಲೆಯ ಚಡಚಣ ಗ್ರಾಮದಲ್ಲಿ ಜನಿಸಿದವರು ಬಾಲ್ಯದಿಂದಲೂ ಜನಪದ ಹಾಡುಗಳ ಬಗ್ಗೆ ಒಲವುಳ್ಳವರಾಗಿದ್ದರು. ೧೯೨೮ ರಿಂದಲೇ ತಾವು ಸಂಗ್ರಹಿಸಿದ ಜನಪದ ಗೀತೆಗಳನ್ನು 'ಜಾನಪದ ಸಾಹಿತ್ಯ' ಎಂಬ ಹೆಸರಿನಲ್ಲಿ ಪ್ರಕಟಿಸಲು ಪ್ರಾರಂಭಿಸಿದರು 'ಗರತಿಯ ಹಾಡು' ಸಂಕಲನವನ್ನು ಸಂಪಾದಿಸಿದರು. ೧೯೩೪ ರಲ್ಲಿ ಪಿ. ಧೂಲಾರೊಡನೆ ಸೇರಿ 'ಜೀವನ ಸಂಗೀತ' ಎಂಬ ಲಾವಣಿಗಳ ಸಂಕಲನ ಹೊರತಂದರು. 'ಉತ್ತರ ಕರ್ನಾಟಕ ಜಾನಪದ ಕಥೆಗಳು' ಎಂಬ ಜನಪದ ಕಥಾ ಸಂಕಲನವನ್ನು ಸಿದ್ಧಪಡಿಸಿದರು.

---

೧. ರಾಜಪ್ಪ ದಳವಾಯಿ-ಕನ್ನಡ ಸಾಹಿತ್ಯಕೋಶ-ಕದಿರು, ಪ್ರಕಾಶನ-೨೦೦೩, ಪುಟ-೫೧೩.

ಕಾಪಸೆ ರೇವಪ್ಪಾ:

ಇವರು ಹುಟ್ಟಿದ ಸ್ಥಳ ವಿಜಾಪುರದ ಹಲಸಂಗಿ, ಉತ್ತರ ಕರ್ನಾಟಕ ಹಾಡುಗಳನ್ನು ಉದಾಹರಿಸಿ ಹೃದಯ ಸ್ಪರ್ಶಿಯಾಗುವಂತೆ ಭಾಷಣಗಳನ್ನು ಮಾಡಿ ಜನಪದ ಸಾಹಿತ್ಯದ ಹಿರಿಮೆಯನ್ನು ಸಾರ್ವಜನಿಕರಿಗೆ ಮನಗಾಣಿಸಿಕೊಟ್ಟ ಅಗ್ರಗಣ್ಯರು.

ಬಿ.ಎಸ್. ಗದ್ದಗಿ ಮಠ:

ಇವರು ತಮ್ಮ ಎಳೆಯ ವಯಸ್ಸಿನಲ್ಲಿಯೇ ಹಳ್ಳಿಯ ಸಾಹಿತ್ಯವನ್ನು ಸಂಗ್ರಹಿಸುವ ಹವ್ಯಾಸ ಹತ್ತಿಸಿಕೊಂಡು ಸುಮಾರು ೧೫ ಸಾವಿರ ಪುಟಗಳಷ್ಟು ಹಾಡುಗಳನ್ನು ಕೂಡಿಸಿರುವ ಇವರ ಸೇವೆ ಅಪಾರವಾದದ್ದು. ಉತ್ತರ ಕರ್ನಾಟಕದ ಮದುವೆ ಹಾಡುಗಳನ್ನು ಪ್ರಥಮ ಬಾರಿಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳಕಿಗೆತಂದರು. ಕನ್ನಡ ಜನಪದ ಗೀತೆಗಳನ್ನು ಕುರಿತು ೧೯೫೫ ರಲ್ಲಿ ಪಿಎಚ್.ಡಿ. ಪಡೆದವರಾಗಿದ್ದಾರೆ.

ಬೆಟಗೇರಿ ಕೃಷ್ಣಶರ್ಮ:

"ಬೆಳಗಾವಿ ಜಿಲ್ಲೆಯ ಬೆಟಗೇರಿಯವರು ಇಂದು ಕನ್ನಡ ನಾಡಿನಾದ್ಯಂತ ಅತ್ಯಂತ ಜನಪ್ರಿಯವಾಗಿರುವ 'ಕೆರೆಗೆ ಹಾರ' ಎಂಬ ಜನಪದ ಗೀತೆಯನ್ನು ಸಂಗ್ರಹ ಮಾಡಿದವರು ಇವರೇ. ೧೯೨೯ ರ ಸುಮಾರಿನಲ್ಲಿಯೇ ಬೀಸುವ ಕಲ್ಲಿನ ಪದಗಳನ್ನು ಕುರಿತಂಥ ಪರಿಚಯಾತ್ಮಕ ಲೇಖನವನ್ನು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪಂಡಿತಪಾಮರರಿಗೂ ಜನಪದ ಸಾಹಿತ್ಯದತ್ತ ಒಲವು ಮೂಡುವಂತೆ ಲೇಖವನ್ನು ಬರೆದಿದ್ದಾರೆ"[1].

ಅರ್ಚಕ ರಂಗಸ್ವಾಮಿ:

ಕರ್ನಾಟಕದ ಆದ್ಯ ಜಾನಪದ ಸಂಗ್ರಾಹಕರಲ್ಲಿ ಒಬ್ಬರಾಗಿದ್ದಾರೆ. ೧೯೩೩ ರಲ್ಲಿ 'ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು' ಎಂಬ ಕೃತಿಯನ್ನು ಸಂಪಾದಿಸಿ ಜಾನಪದ ಕಾರ್ಯ ಕ್ಷೇತ್ರಕ್ಕೆ ಹೊಸ ಶಕೆಯನ್ನೇ ತಂದರು.

೧.ರಾಜಪ್ಪ ದಳವಾಯಿ-ಕನ್ನಡ ಸಾಹಿತ್ಯಕೋಶ-ಕದಿರು ಪ್ರಕಾಶನ-೨೦೦೩ ಪು-೫೧೪.

ಇವರು ತಮ್ಮ ಊರಿನಲ್ಲಿ ಪ್ರಚಲಿತವಿದ್ದ ಕತೆಗಳು, ಗೀತೆಗಳು, ಲಾವಣಿಗಳು, ಗಾದೆಗಳು, ಹಬ್ಬ ಹರಿದಿನಗಳು, ಜನಪದ ನಡೆನುಡಿ ಮುಂತಾದವನ್ನು ತಮ್ಮ ಕೃತಿಯಲ್ಲಿ ವಿವರವಾಗಿ ಸಂಗ್ರಹಿಸಿದ್ದಾರೆ.

ಜೀ.ಶಂ. ಪರಮಶಿವಯ್ಯ:

ಇವರು ಬಹುದೊಡ್ಡ ಜಾನಪದ ವಿದ್ವಾಂಸರು ಕಥೆ, ಕಾದಂಬರಿ ಕ್ಷೇತ್ರದಲ್ಲಿ ದುಡಿದಿದ್ದಾರೆ. 'ಜಾನಪದ ಸಂಗಮ', 'ಕಂಸಾಳೆಯವರು', 'ಹೆಂಗಸರ ಜನಪದ ಗೀತೆಗಳು', 'ಗಂಡಸರ ಜನಪದ ಗೀತೆಗಳು', ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನ, ವಸ್ತು ಸಂಗ್ರಹಾಲಯಗಳ ಹಿಂದೆ ಜೀ.ಶಂ. ಪರಮಶಿವಯ್ಯ ಅವರ ಶ್ರಮ ಅಪಾರವಾಗಿದೆ"[1].

ಹಾ.ಮಾ. ನಾಯಕ:

ಜಾನಪದ ವಿದ್ವಾಂಸ ಮತ್ತು ಭಾಷಾ ವಿಜ್ಞಾನಿ. Folklore ಗೆ ಸಂವಾದಿಯಾಗಿ 'ಜಾನಪದ' ಎಂಬ ಪದವನ್ನು ಬಳಕೆಗೆ ತಂದವರು 'ಜಾನಪದದಲ್ಲಿ ವೈಜ್ಞಾನಿಕ ದೃಷ್ಟಿ' ಎಂಬ ಲೇಖನವನ್ನು ಬರೆದು ಕನ್ನಡ ಜಾನಪದಕ್ಕೆ ಹೊಸದಾಗಿ ಹಾದಿ ಹಾಕಿಕೊಟ್ಟರು. ಇವರ ಮತ್ತೊಂದು ಮಹತ್ವದ ಕೃತಿ 'ಕನ್ನಡ ಜಾನಪದ ಗ್ರಂಥ ಸೂಚಿ, ಇದರಲ್ಲಿ ಆರಂಭದಿಂದ ೧೯೭೩ ರ ವರೆಗೆ ಪ್ರಕಟಗೊಂಡ ಜಾನಪದ ಕೃತಿಗಳ ಮಾಹಿತಿ ದೊರೆಯುತ್ತದೆ. ಕನ್ನಡ ಜಾನಪದ ಅಭ್ಯಾಸಿಗಳಿಗೆ ಇದೊಂದು ಮುಖ್ಯ ಆಕರ ಗ್ರಂಥವಾಗಿದೆ.

---

೧. ರಾಜಪ್ಪ ದಳವಾಯಿ-ಕನ್ನಡ ಸಾಹಿತ್ಯ ಕೋಶ-ಕದಿರು ಪ್ರಕಾಶನ-೨೦೦೩ ಪು-೫೧೮.

ತೀ.ನಂ. ಶಂಕರ ನಾರಾಯಣ:

"ಜಾನಪದ ಸಂಶೋಧನಾ ಕ್ಷೇತ್ರದಲ್ಲಿ ಇವರದು ಪ್ರಮುಖ ಹೆಸರು. ಇವರು ಜಾನಪದ ಕಥೆ, ಗೀತೆ, ನಂಬಿಕೆ, ಸಂಪ್ರದಾಯ, ಆಚಾರ–ವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮ ಅನುಭವ ಹಾಗೂ ಕ್ಷೇತ್ರ ಕಾರ್ಯದಿಂದ ಉತ್ತಮವಾದ ಜಾನಪದ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಸಂಕೀರ್ಣ ಜನಪದ ಕಥೆಗಳು', 'ಐದು ಜಾನಪದ ಸಂಪ್ರಬಂಧಗಳ ಜಾನಪದ ವಿಚಾರ', ಮುಂತಾದವು"[೧].

ಚಂದ್ರಶೇಖರ ಕಂಬಾರ:

"ಇವರು ಸೃಜನಶೀಲ ಸಾಹಿತಿಯಾಗಿರುವಂತೆ ಜಾನಪದ ವಿದ್ವಾಂಸರು ಆಗಿದ್ದಾರೆ. 'ಕನ್ನಡ ಜಾನಪದ ವಿಶ್ವಕೋಶ'ದ ಎರಡು ಸಂಪುಟಗಳು ಇವರ ಸಂಪಾದಕತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿವೆ. 'ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, 'ಬಯಲಾಟಗಳು', 'ಲಕ್ಷಾಪತಿ ರಾಜನ ಕತೆ', 'ಸಂಗ್ಯಾ–ಬಾಳ್ಯ' ಇವು ಇವರ ಇತರ ಕೃತಿಗಳು"[೨].

ಪುರುಷೋತ್ತಮ ಬಿಳಿಮಲೆ:

ಕರ್ನಾಟಕ ಜಾನಪದಕ್ಕೆ ತಮ್ಮ ವೈಜ್ಞಾನಿಕ ಅಧ್ಯಯನದ ಮೂಲಕ ಸೈದ್ಧಾಂತಿಕ ರೂಪವನ್ನು ಕೊಡಲು ಶ್ರಮಿಸುತ್ತಿರುವ ಸಮಕಾಲೀನ ಜಾನಪದ ವಿದ್ವಾಂಸರಲ್ಲಿ ಇವರೂ ಒಬ್ಬರು. 'ಕರಾವಳಿ ಜಾನಪದ', 'ಕೊರಗರು', 'ಜಾನಪದ ಕ್ಷೇತ್ರ ಕಾರ್ಯ ಆಧುನಿಕ ವಿಧಾನಗಳು', 'ಕೂಡುಕಟ್ಟು' ಇವರ ಕೃತಿಗಳು.

ಉತ್ತರ ಕರ್ನಾಟಕ ಭಾಗದಲ್ಲಿ ಡಾ. ಎಂ.ಎಸ್. ಸುಂಕಾಪುರ, ಡಾ. ಸೋಮಶೇಖರ ಇಮ್ರಾಪುರ, ಡಾ. ದೇವೇಂದ್ರ ಕುಮಾರ ಹಕಾರಿ, ಡಾ. ಎಂ.ಎಸ್. ಲಠ್ಠೆ, ಡಾ. ಎಂ.ಜಿ. ಬಿರಾದಾರ, ಡಾ. ಬಸವರಾಜ ಪೋಲಿಸ್ ಪಾಟೀಲ.

---

೧. ರಾಜಪ್ಪ ದಳವಾಯಿ–ಕನ್ನಡ ಸಾಹಿತ್ಯ ಕೋಶ–ಕದಿರು ಪ್ರಕಾಶನ–೨೦೦೩. ಪು–೫೨೪.

೨. ರಾಜಪ್ಪ ದಳವಾಯಿ–ಕನ್ನಡ ಸಾಹಿತ್ಯ ಕೋಶ–ಕದಿರು ಪ್ರಕಾಶನ–೨೦೦೩. ಪು–೫೨೫.

ಮುಂತಾದವರ ವಿಶೇಷ ಆಸಕ್ತಿಯಿಂದ ಅಪಾರ ಸಂಖ್ಯೆಯ ಜಾನಪದ ಗ್ರಂಥಗಳು ಬೆಳಕು ಕಂಡಿವೆ.

ಡಾ. ಬಸವರಾಜ ಪೋಲಿಸ್ ಪಾಟೀಲ:

ಬಾಲ್ಯದಿಂದಲೇ ಜಾನಪದದ ಆಕರ್ಷಣೆಗೆ ಒಳಗಾಗಿದ್ದ ಡಾ. ಬಸವರಾಜ ಪೋಲಿಸ್ ಪಾಟೀಲರು ಕನ್ನಡ ಜಾನಪದಕ್ಕೆ ಸಲ್ಲಿಸಿದ ಸೇವೆ ಉಲ್ಲೇಖನಾರ್ಹ. ಇವರು ವಿಶೇಷವಾಗಿ ಹೈದ್ರಾಬಾದ-ಕರ್ನಾಟಕದ ಜನಪದ ಸಾಹಿತ್ಯದಕುರಿತು ಸಂಶೋಧನೆ ನಡೆಸಿದ್ದಾರೆ. ೧೯೭೩ ರಿಂದಲೇ ಜಾನಪದ ಸಂಶೋಧನಾ ಕ್ಷೇತ್ರ ಕಾರ್ಯ ಕೈಗೊಂಡು ಇಡೀ ಹೈದ್ರಾಬಾದ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಕ್ಷೇತ್ರ ಕಾರ್ಯಕೈಗೊಂಡವರಲ್ಲಿ ಇವರು ಒಬ್ಬರು. ಯು.ಜಿ.ಸಿ. ನೆರವಿನೊಂದಿಗೆ ಡಾ. ಹೆಂಡಿ, ಡಾ. ಲಠ್ಠೆ, ಡಾ. ಬಿರಾದಾರ ಅವರ ಕೈಯಲ್ಲಿ ಸಹಾಯಕ ಸಂಶೋಧಕರಾಗಿ ಮೂರು ಸಾವಿರ ಹಾಡು, ಎರಡು ಸಾವಿರ ಕಥೆಗಳನ್ನು ಸಂಗ್ರಹಿಸಿ ಕನ್ನಡ ಅಧ್ಯಯನ ಸಂಸ್ಥೆಗೆ, ನೀಡಿದ್ದರ ಫಲವೇ ಆಯ್ದ ಜನಪದ ನೂರೆಂಟು ಕಥೆಗಳು, 'ಹರದೇಶಿ-ನಾಗೇಶಿ', 'ಆಯ್ದ ಜನಪದ ಕಥನ ಗೀತೆಗಳು' ಪ್ರಕಟವಾಗಿಬಂದವು. ಈ ಭಾಗದ ಹಾಡು, ಬಯಲಾಟ, ಲಾವಣಿಗಳನ್ನು ಗುರುತಿಸಿದರು. 'ಸಣ್ಣಾಟಗಳ' ಕುರಿತು ಸಂಶೋಧನೆ ಮಾಡಿ 'ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು' ಎಂಬ ಕೃತಿಯನ್ನು ರಚಿಸಿದರು. ಜಾನಪದ ಭಾರತಿ, ಜಾನಪದ ಸಿರಿ, ಜಾನಪದ ವ್ಯಾಸಂಗ ಹೀಗೆ ಜಾನಪದಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ನೀಡಿದ್ದಾರೆ.

ಸುಮಾರು ೧೦೦ ವರ್ಷಗಳ ಹಿಂದೆಯೇ ಪಾಶ್ಚಾತ್ಯ ವಿದ್ವಾಂಸರಿಂದ ಆರಂಭವಾದ ಕರ್ನಾಟಕ ಜಾನಪದ ಸಾಹಿತ್ಯ ಪರಂಪರೆ ಇತ್ತೀಚಿನ ದಿನಗಳಲ್ಲೂ ಉತ್ಸಾಹದಿಂದ ನಡೆಯುತ್ತಿದೆ.

ಅಧ್ಯಾಯ-೪

ಕೃತಿಗಳು

ಸಂಶೋಧನಾ ಕೃತಿಗಳು:

ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ.
ಜಾನಪದ ಭಾರತಿ
ಜಾನಪದ ಸಿರಿ
ಜಾನಪದ ಸೌರಭ
ಸಂವೇದನಾ
ಜಾನಪದ ವ್ಯಾಸಂಗ
ಹರದೇಶಿ - ನಾಗೇಶಿ
ಜಾನಪದ ಚಿಂತನ
ಜನಪದ ಕಥೆಗಳ ಸಂಗ್ರಹ
ಅಮರ ಜಾನಪದ
ಅಮೂಲ್ಯ ಜಾನಪದ

ಸಂಪಾದನಾ ಕೃತಿಗಳು:

ಬಿಡುಗಡೆ
ಜ್ಞಾನಗಂಗಾ
ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ
ನಡುಗನ್ನಡ ಸಾಹಿತ್ಯ ಸಂಗ್ರಹ
ಜನಪದ ಸಾಹಿತ್ಯ: ಶರಣರು.

ಜೀವನ ಚರಿತ್ರೆ:

ಕಲಬುರ್ಗಿ ಶ್ರೀ ಶರಣಬಸವೇಶ್ವರ
ಶಿಕ್ಷಣ ಶಿಲ್ಪಿ ಮಹಾದೇವಪ್ಪಾ ರಾಂಪುರೆ
ಸಂಸ್ಕೃತಿ ಶೀಲರು

ವ್ಯಕ್ತಿ ಚಿತ್ರಗಳು:

ಮಾಸ್ತಿ ವೆಂಕಟೇಶ ಅಯ್ಯಂಗಾರ
ಮಹಾದೇವಪ್ಪ ರಾಂಪುರೆ
ಹರ್ಡೇಕರ ಮಂಜಪ್ಪ

ಅಭಿನಂದನಾ ಕೃತಿಗಳು:

ಭಾಷಾ ಸಂಗಮ
ಸಮದರ್ಶಿ
ಹೇಮ ಸಂಗಮ

ಅಧ್ಯಾಯ–೪

ಕೃತಿಗಳು

ಪೀಠಿಕೆ:

ಜಾನಪದವನ್ನು ಪೂರ್ಣ ಪ್ರಮಾಣದ ಅಧ್ಯಯನದ ವಿಷಯುವನ್ನಾಗಿಸಿ, ಅವುಗಳ ಸಂಗ್ರಹ ವಿಶ್ಲೇಷಣೆ ಎರಡರಲ್ಲೂ ಆಸಕ್ತಿ ವಹಿಸಿ ಕಾರ್ಯ ಮಾಡುತ್ತಿರುವ ಜಾನಪದ ವಿದ್ವಾಂಸರಾದ ಡಾ. ಬಸವರಾಜ ಪೋಲಿಸ ಪಾಟೀಲರು ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕಾರದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಡಾ. ಪೋಲಿಸ್ ಪಾಟೀಲರು ಸುಮಾರು ೩ ದಶಕಗಳಿಂದ ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಹಾಗೂ ಸಂಶೋಧನೆಗೆ ತೊಡಗಿಸಿಕೊಂಡವರಾಗಿದ್ದು, ಅದರಲ್ಲೂ ಹೈದ್ರಾಬಾದ ಕರ್ನಾಟಕದ ಜಾನಪದ ಪ್ರಕಾರ ಕುರಿತಾಗಿ ಅಮೂಲಾಗ್ರ ತಿಳುವಳಿಕೆ ಹೊಂದಿದ ವಿದ್ವಾಂಸರು ಅವರ ಕ್ಷೇತ್ರ ಬಗೆಗಿನ ನಿಷ್ಠೆ, ಸಂಶೋಧನಾ ಪ್ರಜ್ಞೆ, ವಿಶ್ಲೇಷಣಾ ಗುಣಾಗ್ರಗಳಿಂದ ಮೂಡಿ ಬರುವ ಬರವಣಿಗೆಗೆ ಅಧಿಕೃತವೆಂಬ ಗುಣವಿದೆ.

ಜಾನಪದಕ್ಕಾಗಿ ತಮ್ಮ ಬದುಕು–ಬರಹ ಮೀಸಲಿಟ್ಟ ಕೆಲವೇ ಕೆಲವು ವಿದ್ವಾಂಸರಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರೊಬ್ಬರು. ಜಾನಪದ ಸಂಪಾದನೆ – ಸಂಗ್ರಹ – ಸಂಶೋಧನೆಯಲ್ಲಿ ವಿಶೇಷ ಒಲವುಳ್ಳವರಾಗಿದ್ದಾರೆ. ಅದರ ಪ್ರಯತ್ನದ ಫಲವಾಗಿ ಹೊರಬಂದ ಕೃತಿಗಳನ್ನು ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ಸಂಶೋಧನಾ ಕೃತಿಗಳು:

"ನಮ್ಮ ತಿಳುವಳಿಕೆಯು ವಿಸ್ತಾರಗೊಳ್ಳಲು ತುಂಬಾ ಸಹಕಾರಿಯಾದ ಅಧ್ಯಯನ ಕ್ರಮ ಸಂಶೋಧನೆ. ಈ ಹೇಳಿಕೆಯು ವಿಜ್ಞಾನ, ಸಾಹಿತ್ಯ, ಕಲೆ, ಮತ್ತಿತರೆಲ್ಲಾ ರಂಗಗಳಿಗೂ ಅನ್ವಯಿಸುತ್ತದೆ. ನಮ್ಮ ಹಿಂದಿನ ಪೀಳಿಗೆಯ ಜನರು ತಮ್ಮ ಕಾಲದಲ್ಲಿ ಹಲವು ಕ್ಷೇತ್ರಗಳಲ್ಲಿ ಅನೇಕ ಸಾಧನೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅವುಗಳನ್ನು ಕುರಿತ ವಿವರಗಳು, ಸಾಧನೆಗಳು ನಾನಾ ಕಾರಣಗಳಿಂದ ನಮ್ಮ ಕಣ್ಣಿಗೆ ಬೀಳದೇ ನಿಗೂಢವಾಗಿರುತ್ತವೆ. ಇಂಥವುಗಳನ್ನು ಹುಡುಕಿ ತೆಗೆದು, ಅವುಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಅವುಗಳ ಬಗ್ಗೆ

ತಿಳುವಳಿಕೆ ಪಡೆಯುವುದೇ ಸಂಶೋಧನೆಯ ಪ್ರಧಾನ ಉದ್ದೇಶ. ಕನ್ನಡ ಜನಪದ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ನಡೆದಿರುವ ಸಂಶೋಧನೆಯು ಗಮನಾರ್ಹವಾದುದು. ಈ ಕ್ಷೇತ್ರದಲ್ಲಿ ಗೊರೂರು, ಆನಂದಕಂದ, ಕರಿಂ ಖಾನ್ ಮುಂತಾದವರು ದುಡಿದಿದ್ದಾರೆ. ಸಂಶೋಧಸೆ ಸಾಹಿತ್ಯ ಅಧ್ಯಯನ ಕ್ರಮದಲ್ಲಿ ತಿಳುವಳಿಕೆ ಹೆಚ್ಚಿಸುವ ಒಂದು ಪ್ರಮುಖ ಭಾಗವಾಗಿದೆ”. ಡಾ. ಪಾಟೀಲರ ಸಂಶೋಧನಾ ಕೃತಿಗಳ ಕುರಿತು ವಿಶ್ಲೇಷಿಸಲಾಗಿದೆ.

- ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ:
- ಜಾನಪದ ಭಾರತಿ
- ಜಾನಪದ ಸಿರಿ
- ಜಾನಪದ ಸೌರಭ
- ಸಂವೇದನ
- ಜಾನಪದ ವ್ಯಾಸಂಗ
- ಹರದೇಶಿ ನಾಗೇಶಿ
- ಜಾನಪದ ಚಿಂತನ
- ಜನಪದ ಕಥೆಗಳ ಸಂಗ್ರಹ
- ಅಮರ ಜಾನಪದ
- ಅಮೂಲ್ಯ ಜಾನಪದ

ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ:

ಪೋಲಿಸ್ ಪಾಟೀಲರಿಗೆ ಪಿಎಚ್.ಡಿ. ಪದವಿಯನ್ನು ದೊರಕಿಸಿಕೊಟ್ಟ ಗ್ರಂಥವಾಗಿದೆ. ಸಂಶೋಧನಾ ಮಹಾಪ್ರಬಂಧವಾಗಿದೆ. ೧೯೭೮ ರಿಂದ ೧೯೮೪ ರ ಅವಧಿಯಲ್ಲಿ ೬ ವರ್ಷಗಳ ಕಾಲ ನಿರಂತರ ಸುಧೀರ್ಘವಾದ ಸಂಶೋಧನಾ ಅಧ್ಯಯನ ಕೈಗೊಂಡು ಈ ಗ್ರಂಥವನ್ನು ಪೂರ್ತಿಗೊಳಿಸಿದ್ದಾರೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಜನಪದ ಸಾಹಿತ್ಯದ ಸಮಗ್ರವಾದ ಅಧ್ಯಯನ ಇಲ್ಲಿದೆ. ಈ ಕೃತಿಯು ಒಟ್ಟು ೫ ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯ ೧ ರಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಪರಿಸರ, ಐತಿಹಾಸಿಕ, ಸಾಹಿತ್ಯಿಕ,

೧. ರಾಜಪ್ಪ ದಳವಾಯಿ-ಕನ್ನಡ ಸಾಹಿತ್ಯಕೋಶ-ಕದಿರು ಪ್ರಕಾಶನ ಮೈಸೂರು-೨೦೧೩ . ಪುಟ-೯೧-೯೨.

ಭೌಗೋಳಿಕ, ಸಾಂಸ್ಕೃತಿಕ ಸಂಗತಿಗಳನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ ೨ನೇ ಅಧ್ಯಾಯದಲ್ಲಿ ಹೈದ್ರಾಬಾದ ಕರ್ನಾಟಕ ಭಾಗದ ಗದ್ಯ ಸಾಹಿತ್ಯ ಪ್ರಕಾರಗಳಾದ ಕಥೆ, ಗಾದೆ, ಒಗಟು, ಒಡಪು, ಒಡಬು, ಪಡೆ ನುಡಿಗಳ ಕುರಿತು ವಿಸ್ತೃತವಾದ ಹಾಗೂ ಆಳವಾದ ಅಧ್ಯಯನ ಕಂಡು ಬರುತ್ತದೆ.

"ಸೂರು ರುಪಾಲ ಕೊಡಬಹುದು ಆದ್ರ
ಮೂರು ತುರುಬ ಎಂದಿಗೂ ಕೊಡುವುದಿಲ್ಲ"[೧].

ಹೀಗೆ ಅವಿಭಕ್ತ ಕುಟುಂಬ, ಆದರ್ಶ ಬದುಕು, ಸಮಾಜ ದರ್ಶನ, ಸ್ವಭಾವ ಚಿತ್ರಣ ಮುಂತಾದವುಗಳಿಗೆ ಸಂಬಂಧಿಸಿದ ಅನೇಕ ಗಾದೆಗಳನ್ನು ತಮ್ಮ ಈ ಕೃತಿಯಲ್ಲಿ ಅರ್ಥವತ್ತಾಗಿ ಕಟ್ಟಿಕೊಟ್ಟಿದ್ದಾರೆ.

ಅಧ್ಯಾಯ ೩ ಪದ್ಯ ಸಾಹಿತ್ಯ ಪ್ರಕಾರವಾಗಿದ್ದು, ಲಾವಣಿ ಗೀಗೀ ಹಾಡುಗಳ ವಸ್ತು ವಿಷಯ, ಹಾಡುಗಾರಿಕೆ, ಅದರ ಮಹತ್ವ, ಸವಾಲ್ ಜವಾಬನ ಹೆಚ್ಚುಗಾರಿಕೆ, ಸಾಮಾಜಿಕ ನೀತಿ, ತತ್ವ, ಅಧ್ಯಾತ್ಮ ಕವಿಗಳ ಮತ್ತು ಕಲಾವಿದರ ಪರಿಚಯ, ಗೀಗೀ ಹಾಡಿನ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು, ಹಾಡಿನ ಒಂದೊಂದು ಪ್ರಕಾರದ ನುಡಿಗಳನ್ನಾಯ್ದುಕೊಂಡು ಚರ್ಚೆಗೊಳಪಡಿಸಿದ್ದಾರೆ. ಅಲ್ಲದೇ ಈ ಭಾಗದ ಹಂತಿಹಾಡು ಮತ್ತು ಹೆಣ್ಣು ಮಕ್ಕಳ ಹಾಡುಗಳನ್ನು ಕುರಿತು ಸುಧೀರ್ಘವಾಗಿ ಚರ್ಚಿಸಿದ್ದಾರೆ. ಹಾಗೂ ಭಜನೆಯ ಹಾಡುಗಳಲ್ಲಿ ಅಡಕವಾಗಿರುವ ನೀತಿ, ಅಧ್ಯಾತ್ಮ, ವಿಡಂಬನೆಯನ್ನು ಎತ್ತಿ ತೋರಿಸುವುದರ ಜೊತೆಗೆ ಭಜನೆ ಹಾಡುಗಾರರ ವಿವರ ಮತ್ತುಭಜನಾ ಮೇಳಗಳ ಪಟ್ಟಿಯನ್ನು ನೀಡಿದ್ದಾರೆ.

ಇಷ್ಟೆ ಅಲ್ಲದೆ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕಂಡು ಬರುವ ಮತ ಸಂಪ್ರದಾಯದ ಹಾಡುಗಳು ಮತ್ತು ಡೊಳ್ಳಿನ ಹಾಡಿನಲ್ಲಿ ಕುರುಬ ಜನಾಂಗದ ಪರಿಚಯ, ಡೊಳ್ಳಿನ ರಚನೆ, ಭಕ್ತಿ ಮತ್ತು ಶಕ್ತಿಯ ಮಹಿಮೆ ಮತ್ತು ಈ ಜನಾಂಗದ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ತಿಳಿಸಿಕೊಡಲಾಗಿದೆ. ಹಾಗೂ ಮೊಹರಂ ಹಾಡುಗಳಲ್ಲಿ ಬರುವ

೧.ಡಾ. ಬಸವರಾಜ ಪೊಲೀಸ್ ಪಾಟೀಲ-ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ-೨೦೦೧.ಪು.

ಸಾಮರಸ್ಯ, ಕೋಮುಸೌಹಾರ್ದತೆ, ಮೊಹರಂ ಆಚರಿಸುವ ಪದ್ಧತಿಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಈ ಕೃತಿಯಲ್ಲಿ ಪದ್ಯ ಸಾಹಿತ್ಯ ಪ್ರಕಾರ ಗುರುತಿಸುವುದರ ಜೊತೆಗೆ ಹಾಡುಗಾರರ, ಕವಿಗಳ, ಹಾಡಿನ ಸಂದರ್ಭದ ಚರಿತ್ರೆಯ ಅವಲೋಕನವನ್ನು ಲೇಖಕರು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ.

ಮಿಶ್ರ ಸಾಹಿತ್ಯ ಪ್ರಕಾರಗಳ ಕುರಿತು ಈ ಕೃತಿಯ ೪ನೇ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಜನಪದ ರಂಗಭೂಮಿಯ ಪರಿಚಯ, ಬಯಲಾಟಗಳು, ದೊಡ್ಡಾಟ, ಸಣ್ಣಾಟ, ಗೊಂದಲಿಗರ ಪ್ರಸಂಗಗಳ ಕುರಿತು ಸುಧೀರ್ಘವಾಗಿ ವಿಶ್ಲೇಷಿಸಿದ್ದಾರೆ. ಜೊತೆಗೆ ದೊಡ್ಡಾಟ ಮತ್ತು ಸಣ್ಣಾಟದ ಕವಿಗಳ ಹೆಸರು, ಕಾಲ ಹಾಗೂ ಕೃತಿಗಳು, ಕುರಿತಾಗಿ ಪಟ್ಟಿಯನ್ನು ನೀಡಿದ್ದಾರೆ.

ಒಟ್ಟಿನಲ್ಲಿ "ಡಾ. ಪಾಟೀಲರು ಸಮಗ್ರವಾದ ವಿವೇಚನೆ, ಕ್ಷೇತ್ರಕಾರ್ಯ, ಜಾನಪದದ ಮೇಲಿಟ್ಟ ಅಪಾರ ಗೌರವಭಕ್ತಿ, ಹಾಗೂ ಹೊಸನೆಲೆಯಲ್ಲಿ ಗುರುತಿಸಬೇಕೆಂಬ ತವಕ ತಲ್ಲಣಗಳನ್ನು ಇಟ್ಟುಕೊಂಡು ಜೊತೆಗೆ ಸುಂದರವಾದ ಭಾಷೆ ಶೈಲಿಯೊಂದಿಗೆ ನಿರೂಪಿಸಿದ್ದಾರೆ"[೧].

ಜಾನಪದ ಭಾರತಿ:

ಇದು ಡಾ. ಪಾಟೀಲರ ಎರಡನೆಯ ಕೃತಿ. ಜನಪದ ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಕಲೆಗಳಿಗೆ ಸಂಬಂಧಿಸಿದ ೫ ಪ್ರಬಂಧಗಳ ಸಂಕಲನವೇ ಈ ಕೃತಿ. ಡಾ. ಪಾಟೀಲರು ಈ ಕೃತಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳೂ, ಜಾನಪದ ವಿದ್ವಾಂಸರೂ ಆದ ಡಾ. ಹಾ.ಮಾ. ನಾಯಕ ಅವರಿಗೆ ಅರ್ಪಿಸಿದ್ದಾರೆ.

ಈ ಕೃತಿಯ ಒಂದನೆ ಅಧ್ಯಾಯದಲ್ಲಿ ಜನಪದ ಕಥೆಗಳಲ್ಲಿ ಗ್ರಾಮೀಣರ ಜೀವನ ಕುರಿತ ವಿಷಯವನ್ನು ವಿಶ್ಲೇಷಿಸಿದ್ದಾರೆ. ಹಾಸ್ಯ ಕಥೆಗಳು, ಮಕ್ಕಳ ಕಥೆಗಳು, ಪ್ರಾಣಿ ಕಥೆಗಳು, ಶೃಂಗಾರ ರಸದ ಕಥೆಗಳು, ನೀತಿ ಕಥೆಗಳು ಹೀಗೆ ಅನೇಕ ಜನಪದ ಕಥೆಗಳ ಬಗ್ಗೆ ಈ ಲೇಖನದಲ್ಲಿ ವಿವರಿಸಿದ್ದಾರೆ. ಜನಪದ ಜೀವನದಲ್ಲಿ ಧರ್ಮ-ದೇವರು-ದೈವದ ಕುರಿತ ಮನೋಭಾವ, ಜನಪದರ ಬದುಕಿನಲ್ಲಿ ಬರುವ ಶನಿಕಾಟ, ಹರಕೆ, ದಾನ- ಧರ್ಮಾದಿ ಕಾರ್ಯಗಳ ಬಗ್ಗೆ ಅವರ ನಂಬಿಕೆಹೀಗೆ ಅನೇಕ ಅಂಶಗಳು ಇಲ್ಲಿನ ಕಥೆಗಳಲ್ಲಿ ಮೂಡಿಬಂದಿವೆ. ಹಳ್ಳಿಯ ವಿವಿಧ

೧.ಡಾ. ಗವಿಸಿದ್ದಪ್ಪ ಎಚ್. ಪಾಟೀಲ-ಬೆಳ್ಳಿ ದಾಂಪತ್ಯ-೨೦೦೪ ಪು-೪೬.

ವೃತ್ತಿಕಾರರಾದ ಕಂಬಾರ, ಕುಂಬಾರ, ಬಡಿಗ, ನೇಕಾರ, ನಾಯಿಂದ, ಅಗಸ, ಚಮ್ಮಾರ ಹೀಗೆ ಅನೇಕ ಕಸುಬುಗಳಿಗೆ ಅನುಸಾರವಾಗಿಯು ಕಥೆಗಳು ಸೃಷ್ಟಿಯಾದ ಅಂಶವನ್ನು ಪಾಟೀಲರು ಈ ಲೇಖನದಲ್ಲಿ ಎತ್ತಿತೋರಿಸಿದ್ದಾರೆ.

ಎರಡನೆ ಲೇಖನದಲ್ಲಿ ಹರದೇಶಿ-ನಾಗೇಶಿ ಹಾಡಿನ ಸಂಪ್ರದಾಯಕ್ಕೆ ಸಂಬಂಧಿಸಿದ ಮಹತ್ವದ ಅಂಶಗಳಿವೆ. ಹರದೇಶಿ ನಾಗೇಶಿ ಹಾಡಿನ ಸಂಪ್ರದಾಯವು ಉತ್ತರ ಕರ್ನಾಟಕದ ಜಾನಪದದ ಅನನ್ಯತೆಯಾಗಿದೆ. ಈ ಸಂಪ್ರದಾಯದ ಹಾಡಿನ ಸ್ವರೂಪ, ಲಕ್ಷಣ, ವಸ್ತು ವೈವಿಧ್ಯ ಹಾಗೂ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತು ಸುಧೀರ್ಘವಾಗಿ ಆಧಾರ ಸಮೇತವಾಗಿ ಪೋಲಿಸ ಪಾಟೀಲರು ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

ಹರದೇಶಿ : "ಗಂಡ ಹೆಣ್ಣ, ಸವನೆಂದು ಮಂಡನಾಗೇಶಿ ಹಾಡತೀದಿ
ಭಂಡ ಕವಿ ಒದರುದ್ಯಾಕ? ನಿಂತಿದಿ ಹಾಡುದಕ
ಆಕಾರಾಗುವಕಿನ್ನ ಪೈಲ್ ನಿರಾಕಾರ ಗಂಡು ಇತ್ತು
ಗೊಳ್ಳ ವಿದ್ಯಾದೇನೊ? ಇದು ಬಾಯಲಿ ಹೇಳುದಕ್ಕೆ
ನಿಮ್ಮ ಆದಿಶಕ್ತಿ ಎಲ್ಲಿ ಹೋಗಿ ಆಗ್ಯಾಳ ಹಡಿಲಕ"[೧].

ನಾಗೇಶಿ : "ನಿಮ್ಮ ಗಂಡಿನ ಕುಲ ಬಹಳ ಖೋಡಿ
ನನ್ನಲ್ಲೇ ಹುಟ್ಟಿತೋ ತಿಳಿಗೇಡಿ
ಮಲಿಹಾಲ ಕುಡಸಿದ್ದೆ ನೋಡಿ
ನಾ ಹೆಚ್ಚ ಅಂತಿದಿ ಎಂಥ ನಾಚಿಗಿಗೇಡಿ"[೨].

ಈ ಹಾಡುಗಳಿಗೆ ಶಿವ-ಶಕ್ತಿ, ಗಂಡು-ಹೆಣ್ಣು, ಬೀಜ-ಭೂಮಿಯಾಗಿ ವಾದಿಸಿ ಸವಾಲ್ ಜವಾಬ್ ರೂಪದಲ್ಲಿ ಹೆಣೆದುಕೊಂಡು ಬಂದಿವೆ. ಇಂಥ ಹಾಡುಗಳ ವಿವರಣೆ ಈ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. ಅಲ್ಲದೆ ಅಪರಾಳ ತಮ್ಮಣ್ಣ, ಕುಲಗೋಡು ತಮ್ಮಣ್ಣನವರಿಂದ ಹಿಡಿದು ಇಲ್ಲಿಯವರೆಗೆ ಬರುವ ಹರದೇಶಿ-ನಾಗೇಶಿ ಹಾಡುಗಾರರ ಸ್ಥೂಲ ಪರಿಚಯ ಇಲ್ಲಿ ಸಿಗುತ್ತದೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜಾನಪದ ಭಾರತಿ-೧೯೮೫, ಪು-೨೩.

೨. ಡಾ. ಬಸವರಾಜ ಪೋಲಿಸ್ ಪಾಟೀಲ-ಜಾನಪದ ಭಾರತಿ-೧೯೮೫, ಪು-೨೭.

ಕಲಬುರ್ಗಿ ಜಿಲ್ಲೆಯ ಸಂಪ್ರದಾಯಗಳು ಕುರಿತಾದ ಮೂರನೇ ಲೇಖನದಲ್ಲಿ, ಕಲಬುರ್ಗಿ ಜಿಲ್ಲೆಯ ವಿಶಿಷ್ಟ ಜನಪದ ಆಚರಣೆಗಳಾದ ಸಿಡಿ ಆಡುವುದು, ಚುಂಚುರ ಮಾಪುರ ತಾಯಿಗೆ ಸೇವೆ ಸಲ್ಲಿಸುವುದು, ಚಟಗಿ ಒಡೆಯುವುದು, ಹೇಳಿಕೆ ಹೇಳುವುದು, ಥಂಡಿ ಮಾಡುವುದು, ಕರಿ ಹರಿಯುವುದ, ಅಗ್ಗಿ ತುಳಿಯುವುದು, ಬುಟ್ಟಿ ಜಾತ್ರೆ ಹೀಗೆ ಮುಂತಾದ ಆಚರಣೆಗಳ ಮಹತ್ವವನ್ನು ಎತ್ತಿ ತೋರಿಸಿದ್ದಾರೆ.

ಜನಪದರ ದೃಷ್ಟಿಯಲ್ಲಿ ದೀಪಾವಳಿಯ ಮಹತ್ವ ಮತ್ತು ಆಚರಣೆಯ ಕುರಿತಾದ ಅಂಶಗಳನ್ನು ನಾಲ್ಕನೇ ಲೇಖನದಲ್ಲಿ ದಾಖಲಿಸಿದ್ದಾರೆ.

"ದೀವಳಿಗೆ ಹಬ್ಬ ದೇವಿಂದ್ರ ನೈಭೋಗ
ಬೆಳೆದು ಬೀಗ್ಯಾಳೊ ಭೂಮ್ತಾಯಿ/ ತಾ ಆನಂದನೆ
ಬೆಳೆದು ಬೀಗ್ಯಾಳೊ ಭೂಮ್ತಾಯಿ"[೧].

ಕೃತಿಯ ಕೊನೆಯ ಲೇಖನವು 'ಹೈದ್ರಾಬಾದ ಕರ್ನಾಟಕದ ಸಣ್ಣಾಗಳಿಗೆ ಸಂಬಂಧಿಸಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಲಭ್ಯವಾಗುವ ಭೂ ಕೈಲಾಸ, ತಾರಾಮಲಿ, ನಂದಗೋಪಾಲ, ನೀಲಕಂಠರಾಜ ಮುಂತಾದ ಸಣ್ಣಾಟಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ.

ಒಟ್ಟಿನಲ್ಲಿ ಜನಪದ ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಕಲೆಗಳಿಗೆ ಸಂಬಂಧಿಸಿದ ವಿದ್ವತ್ತಪೂರ್ಣವಾದ ಗ್ರಂಥ ಇದಾಗಿದೆ.

ಜಾನಪದ ಸಿರಿ:

ಇದು ಡಾ. ಪಾಟೀಲರ ಮೂರನೇ ಕೃತಿಯಾಗಿದೆ. ಜಾನಪದಕ್ಕೆ ಸಂಬಂಧಿಸಿದ ಪ್ರಬಂಧಗಳ ಸಂಕಲನವೇ ಈ ಗ್ರಂಥ. ಈ ಕೃತಿಯಲ್ಲಿನ ಲೇಖನಗಳು ನಾಡಿನ ಖ್ಯಾತ ವಿದ್ವಾಂಸರ ಅಭಿನಂದನ ಗ್ರಂಥಗಳಲ್ಲೂ, ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲೂ ಹಾಗೂ ವಿವಿಧ ಸಂಶೋಧನಾ ಪತ್ರಿಕೆಗಳಲ್ಲೂ ಪ್ರಕಟವಾದವುಗಳಾಗಿವೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜಾನಪದ ಭಾರತಿ-೧೯೮೫, ಪು-೭೨.

ಈ ಕೃತಿಯಲ್ಲಿ ಡಾ. ಪಾಟೀಲರು ಅನೇಕ ವಿಷಯುಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಇಲ್ಲಿ ಒಟ್ಟು ಏಳು ಲೇಖನಗಳಿದ್ದು, ಇವು "ಜನಪದರ ಧರ್ಮಶ್ರದ್ಧೆ", "ಒಕಳಿ. ಒಂದು ವಿಶ್ಲೇಷಣೆ", "ಸಿಡಿ ಮತ್ತು ಸಿಡಿತಲೆ", "ಸ್ಥಳೀಯ ಐತಿಹ್ಯಗಳು: ಒಂದು ವಿವೇಚನೆ", "ಪಾರಿಜಾತ ಮತ್ತು ಶರಣರಾಟಗಳ ಭಾಷೆ", "ಹೈದ್ರಾಬಾದ ಕರ್ನಾಟಕ ಲಾವಣಿ ಸಾಹಿತ್ಯ", ಮತ್ತು "ಜನಪದ ಹಾಡುಗಳಲ್ಲಿ ಮುಗಿಳೆ" ವಿಷಯಗಳು ಅಡಕವಾಗಿವೆ.

'ಓಕಳಿ' ಕುರಿತಾದ ಲೇಖನದಲ್ಲಿ ಜನಪದರ ಆಚರಣೆಯನ್ನು ದಾಖಲಿಸಿದ್ದಾರೆ. ಜಿದ್ದಿನ ಓಕುಳಿ, ಅರಸರ ಕಾಲದಲ್ಲಿ ಒಕುಳಿ ಹೀಗೆ ಅನೇಕ ಅಂಶಗಳು, ಮತ್ತು ಓಕುಳಿಯ ಮಹತ್ವವನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಜಾನಪದಕ್ಕೆ ಸಂಬಂಧಿಸಿದ ವಿಷಯಗಳನ್ನೇ ಎತ್ತಿ ತೋರಿಸಿದ್ದಾರೆ.

ಜಾನಪದ ಸೌರಭ:

ಡಾ. ಬಸವರಾಜ ಪೋಲಿಸ್ ಪಾಟೀಲರು ಬರೆದ ಐದನೇ ಕೃತಿಯೆ ಜಾನಪದ ಸೌರಭ. ಈ ಕೃತಿಯು ಐದು ಅಧ್ಯಾಯಗಳನ್ನೊಳಗೊಂಡಿದ್ದು, ಪ್ರತಿಯೊಂದು ಅಧ್ಯಾಯವು ಜಾನಪದ ವಿಷಯಕ್ಕೆ ಸಂಬಂಧಿಸಿದೆ.

ಜನಪದ ಕರ್ನಾಟಕದ ಜನಪದ ಸಾಹಿತ್ಯ; ಒಂದು ಸಮೀಕ್ಷೆ.
ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ; ಒಂದು ಸಮೀಕ್ಷೆ.
ಜನಪದ ನಾಲ್ಕು ಚಿಂತನೆಗಳು.
ಬಯಲಾಟದ ವೇಷ-ಭೂಷಣಗಳ ರಚನೆ – ಒಂದು ವಿಶ್ಲೇಷಣೆ.
ಜಾನಪದ ಅಂಶಗಳು – ಒಂದು ಟಿಪ್ಪಣಿ.

ಜನಪದರ ನಂಬಿಕೆ, ಐಕ್ಯತೆ, ಪೂಜೆ, ಜಾತ್ರೆ, ಅವರ ಉದ್ಯೋಗ, ಒಕ್ಕಲುತನ, ಮಳೆ, ಬೆಳೆ ಕುರಿತಾದ ಜನಪದ ಶ್ರದ್ಧೆ ಹಾಗೂ ಜನಪದರು ನಡೆಸಿಕೊಂಡು ಬಂದ ಗ್ರಾಮಾಡಳಿತ ಪದ್ಧತಿ ಇಂಥ ವಿಷಯಗಳನ್ನು ಪಾಟೀಲರು ಈ ಕೃತಿಯ ಮೊದಲನೇ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

“ಮಳಿಯುಪ್ಪ ಮಳಿರಾಜ ಬೆಳಿ ಒಣಗಿ ಹೋದಾವು
ಬಡವರು ಬಾಯ ಬಿಡತಾರೋ/ ಅಡವೆನ್ನ
ಗಿಡಬಳ್ಳಿ ಕೊರಗಿ ಕಮರ್ಯಾವೊ”[೧].

ಹೀಗೆ ಮಳೆಯಿಲ್ಲದೇ ಬೆಳೆಯಿಲ್ಲ; ಬೆಳೆಯಿಲ್ಲದೆ ಬದುಕಿಲ್ಲ ಎಂಬಂತೆ ಜನಪದರ ಜೀವನದಲ್ಲಿ ಮಳೆಯ ಮಹತ್ವವನ್ನು ಎತ್ತಿ ತೋರಿಸುವಂತಹ ಅನೇಕ ಸಾಲುಗಳು ಈ ಲೇಖನದಲ್ಲಿ ಒಳಗೊಂಡಿವೆ.

ಈ ಕೃತಿಯ ಎರಡನೆ ಲೇಖನದಲ್ಲಿ ಹೈದ್ರಾಬಾದ ಕರ್ನಾಟಕದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಎತ್ತಿ ತೋರಿಸಿದ್ದಾರೆ. ಈ ಭಾಗದ ಗದ್ಯ, ಪದ್ಯ ಮತ್ತು ಮಿಶ್ರಸಾಹಿತ್ಯದ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಈ ಹೈದ್ರಾಬಾದ ಕರ್ನಾಟಕ ಪ್ರದೇಶದ ಗೀಗೀ ಕವಿಗಳ, ಗೀಗೀ ಮೇಳಗಳ, ಭಜನಾ ಕವಿಗಳ ಮತ್ತು ಭಜನಾ ಮೇಳಗಳ ಹಾಗೂ ಪ್ರಸಿದ್ಧ ಹಂತಿ ಮತ್ತು ಮೋಹರಂ ಹಾಡುಗಾರರ ಅಚ್ಚುಕಟ್ಟಾದ ಪಟ್ಟಿಯನ್ನು ಈ ಲೇಖನದಲ್ಲಿ ನೀಡಿದ್ದಾರೆ. ಮತ್ತು ಈ ಹೈದ್ರಾಬಾದ ಕರ್ನಾಟಕ ಪ್ರದೇಶದ ದೊಡ್ಡಾಟ ಮತ್ತು ಸಣ್ಣಾಟದ ಕವಿ, ಕೃತಿ ಮತ್ತು ಅವರ ಕಾಲದ ಕುರಿತು ವಿವರಣೆಯನ್ನು ಈ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ.

‘ಐತಿಹ್ಯ, ‘ಹದ-ಬೆದಿ’, ‘ಸಿಡಿ-ಸಿಡಿತಲೆ’, ‘ಒಕುಳಿಗಳ ಅರ್ಥ, ಬಳಕೆಯ ಕುರಿತಾದ ವಿವರಣೆ ಈ ಕೃತಿಯ ಮೂರನೇ ಲೇಖನವು ಒಳಗೊಂಡಿದೆ.

ಬಯಲಾಟದ ರಂಗ ಮಂಟಪ ರಚನೆ, ಕಿರೀಟ ರಚನೆ, ಸ್ತ್ರೀ ಪಾತ್ರದ ವೇಷಭೂಷಣ, ಆಭರಣಗಳ ರಚನೆ, ಯುದ್ಧ ಉಪಕರಣಗಳ ರಚನೆ ಕುರಿತಾದ ಸಂಪೂರ್ಣ ವಿವರಣೆಯನ್ನು ಅಚ್ಚುಕಟ್ಟಾಗಿ ನಾಲ್ಕನೇ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

ಶಿಷ್ಟ ಸಾಹಿತ್ಯದಲ್ಲಿ ಬರುವಂಥ ಅನೇಕ ಜನಪದ ಅಂಶಗಳನ್ನು ಪಾಟೀಲರು ಈ ಕೃತಿಯ ಕೊನೆಯ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಹೇಳಬೇಕಾದರೆ ಜನಪದರ ಜೀವನ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಕುರಿತಾದ ಚಿತ್ರಣವನ್ನು ಈ ಕೃತಿಯು ತಿಳಿಸಿಕೊಡುತ್ತದೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜಾನಪದ ಸೌರಭ-೧೯೯೪. ಪು-೫.

ಸಂವೇದನ:

ಡಾ. ಪಾಟೀಲರು ಜನಪದ ಕ್ಷೇತ್ರದಲ್ಲಿ ಅಷ್ಟೇ ಕೆಲಸ ಮಾಡದೆ ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ಅಧ್ಯಯನ ಮಾಡಿರುವುದುಂಟು. ಅಂತೆಯೇ ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಸುವೆದನೆ' ಎಂಬ ಹೆಸರಿನ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೧೨ ನೆಯ ಶತಮಾನದ ಶರಣರ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಮಹತ್ವದ ಲೇಖನಗಳು ಇಲ್ಲಿ ಸಂಗ್ರಹಗೊಂಡಿವೆ. ಶರಣರ ವೈಚಾರಿಕ ಕ್ರಾಂತಿಯ ಮೂರು ಮುಖಗಳು, ಉರಿಲಿಂಗಪೆದ್ದಿ, ಗುರುಭಕ್ತಿ-ಲಿಂಗನಿಷ್ಠೆಯ ವಚನಗಳು, ನಾಲ್ವರು, ಅನುಭಾವಿ ಕವಿಯತ್ರಿಯರು, ಸತ್ಯಜ್ಞನ ವಚನಗಳ ಒಂದು ಸಮೀಕ್ಷೆ. ಬಸವಣ್ಣನವರು ಮತ್ತು ಸ್ತ್ರೀ ಸಮಾಜ ಇವು ಇಲ್ಲಿಯ ಮಹತ್ವದ ಲೇಖನಗಳಾದ್ದು ಈ ಲೇಖನಗಳಲ್ಲಿ ಪೋಲಿಸ್ ಪಾಟೀಲರ ಸಂಶೋಧನಾತ್ಮಕ ದೃಷ್ಟಿಯ ಜೊತೆಗೆ ವ್ಯಾಪಕವಾದ ಅಧ್ಯಯನದ ನೆಲೆಯು ಕಂಡುಬರುತ್ತದೆ.

ಜಾನಪದ ವ್ಯಾಸಂಗ:

ಇದು ಡಾ. ಬಸವರಾಜ ಪೋಲಿಸ್ ಪಾಟೀಲರ ಏಳನೆಯ ಕೃತಿ. ೧೨೦ ಪುಟಗಳ ಪುಸ್ತಕದಲ್ಲಿ ೧೧ ವಿಮರ್ಶಾ ಸಂಶೋಧನಾ ಲೇಖನಗಳಿವೆ. ಇವುಗಳೆಲ್ಲ ವಿಚಾರ ಸಂಕಿರಣ, ಪ್ರಮುಖ ಪತ್ರಿಕೆಗಳಲ್ಲೂ ಕೂಡ ಬಂದಿವೆ. ತತ್ವಪದ, ಹಂತಿಪದ ಭಾಷೆಯ ಮೇಲೆ ಪ್ರಭಾವಗೊಂಡ ಅನೇಕ ನೂರಾರು ಕಲೆ ಸಾಹಿತ್ಯಗಳನ್ನು ಹೆಕ್ಕಿ ತೆಗೆದಿದ್ದಾರೆ. ಇಲ್ಲಿಯವರೆಗೂ ಇಲ್ಲಿ ನಡೆದ ಸಂಶೋಧನೆ ಎಷ್ಟರ ಮಟ್ಟಿಗೆ ನಡೆದಿದೆ. ಅದರ ಹಂತ ಪ್ರಮುಖರು ಯಾರು? ನಂತರ ಹಂತ ಹಂತವಾಗಿ ತೊಡಗಿಕೊಂಡ ಸಂಶೋಧಕರು. ವಿಷಯ ವಿಮರ್ಶೆ, ಕೃತಿಗಳ ವಿವೇಚನೆಯ ಸಮಗ್ರ ಪಟ್ಟಿ ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಸಣ್ಣಾಟಗಳ ಕುರಿತು ಅದರ ಬಳಕೆ, ಎಲ್ಲಿಂದ ಹೇಗೆ ಬಂತು, ಸಣ್ಣಾಟಗಳ ವೈವಿದ್ಯತೆ, ಇದುವರೆಗೂ ಕಂಡು ಬಂದ ಗಮನಾರ್ಹ ಸಣ್ಣಾಟಗಳು, ಅದರ ಕರ್ತೃ, ಯಾವ ತೆರನಾಗಿ ಆಡುತ್ತಾರೆ. ಅದರ ವಿವಿಧ ಮಜಲುಗಳನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಅಪ್ರಕಟಿತ ಸಣ್ಣಾಟಗಳು ಉತ್ತರ ಕರ್ನಾಟಕದಲ್ಲಿ ಅಷ್ಟೆ ಅಲ್ಲ ಅದರ ಮೂಲ ಬೇರು ಇಲ್ಲಿದೆ. ಆದರೆ' ಇವುಗಳಿಗೆ ಪ್ರಚಾರ ದೊರೆಯಲಿಲ್ಲವೆಂದು ಅವುಗಳ ಆಶಯ, ವಸ್ತುವಿನ್ಯಾಸ, ಮಾಧ್ಯಮ,

ಯಾವ ಸಂದರ್ಭದಲ್ಲಿ ಆಡುವರೆಂಬುದನ್ನು ಸಮಗ್ರವಾಗಿ ಸಂಶೋಧಿಸಿ, ಕವಿ–ಸಣ್ಣಾಟಗಳ ಒಂದು ಪಟ್ಟಿ ನೀಡಿದ್ದಾರೆ. ಇದು ಮೊಟ್ಟ ಮೊದಲ ಸಣ್ಣಾಟಗಳ ಮೇಲೆ ಆದ ಶೋಧ. ರಾಯಚೂರು ಜಿಲ್ಲೆಯ ಕವಿ–ಕಲಾವಿದರು ಕಲಾಮೇಳಗಳು ಎಲ್ಲೆಲ್ಲಿ ಹೇಗೆ ನಡೆದಿವೆ. ಅವುಗಳನ್ನು ಆಡುವರ್‍ಯಾರು ಎಂಬುದನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಮತ್ತೊಂದೆಡೆಗೆ ಇಲ್ಲಿ ನಡೆದ ಸಂಗ್ರಹ, ಸಂಪಾದನೆ, ಸಂಶೋಧನೆಗಳನ್ನು ವಿವರವಾಗಿ ಹೇಳಿ ಅವುಗಳ ವಿಮರ್ಶೆ ಸಹ ಮಾಡಿದ್ದಾರೆ.

ಅಫಜಲಪುರ ತಾಲೂಕಿನ ಜನಪದ ಸಾಹಿತ್ಯ ಮತ್ತು ತಾಲೂಕಾ ದರ್ಶನ ಎಂಬೆರಡೂ ಲೇಖನಗಳಲ್ಲಿ, ಈ ತಾಲೂಕಿನ ಐತಿಹಾಸಿಕ, ಭೌಗೋಳಿಕ. ವೈಶಿಷ್ಟ್ಯತೆ ಮತ್ತು ಜಾನಪದಕ್ಕಾಗಿ ಈ ತಾಲೂಕು ಎಷ್ಟೊಂದು ಸಮೃದ್ಧಿ ಹೊಂದಿದೆ. ಎನ್ನುವ ಅಂಶಗಳನ್ನೆಲ್ಲ ಶೇಖರಿಸಿ ನೀಡಿದ್ದಾರೆ. ಅಲ್ಲದೆ ಕೋಮು ಸೌಹಾರ್ದತೆವಿರುವ ಅಂಶ ಎಳೆ ಎಳೆಯಾಗಿ ಜನಪದರ ಪದರದಿಂದ ಬಿಚ್ಚಿದ್ದಾರೆ.

"ಮುಸ್ಲಿಂರ ಮುಖ್ಯ ಧರ್ಮಗುಡಿ ದರ್ಗಾಗಳು ಈ ಭಾಗದಲ್ಲಿ ಬರುವ ಬಂದೇ ನವಾಜ್, ರಾಜಾಪೀರ್, ಯಮನೂರ್ ಪೀರ್, ಬಾವಲ ಮುತ್ಯರಂತಹ ಮುಸ್ಲಿಂ ಕವಿ – ದರ್ಗಾಗಳ ವೈಶಿಷ್ಟ್ಯಗಳನ್ನು ಜನಪದ ಹಾಡುಗಳ ಮೂಲಕ ಸುಂದರವಾಗಿ ಹಿಡಿದಿಟ್ಟಿದ್ದಾರೆ.

ಹೀಗಾಗಿ ಜಾನಪದ ವ್ಯಾಸಂಗ ಹಲವು ವೈವಿದ್ಯ ವೈಶಿಷ್ಟ್ಯತೆಯಿಂದ ಕೂಡಿದ ವಿಮರ್ಶಾ ಸಂಶೋಧಿತ ಲೇಖನಗಳು ಒಂದೆಡೆ ಸೇರಿಸಿದ್ದರಿಂದ ಹೈದ್ರಾಬಾದ ಕರ್ನಾಟಕ ಜಾನಪದ ಸಂಪತ್ತಿನ ಮುಖ್ಯ ಭಂಡಾರವನ್ನು ಇದರಲ್ಲಿ ಅಡಗಿಸಿದ್ದು ಗ್ರಾಮೀಣ ಸಂಸ್ಕೃತಿಯ ಓದು – ಬರಹ ಬಾರದವರು ಹೇಗೆ ರಚಿಸಿದ್ದಾರೆ. ಇದನ್ನು ಹೇಗೆ ಮೈಗೂಡಿಸಿಕೊಂಡು ಶಕ್ತಿಯುತರಾಗಿ ಬಳಸಿ ಕಟ್ಟಿಕೊಟ್ಟಿದ್ದಾರೆ ಎಂಬುದು ಹೆಕ್ಕಿ ತೆಗೆದ ಹೈದ್ರಾಬಾದ ಕರ್ನಾಟಕ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಕೃತಿ ಇದಾಗಿದೆ"[೧].

ಹರದೇಶಿ – ನಾಗೇಶಿ:

"ಈ ಕೃತಿಯಲ್ಲಿ ಡಾ. ಪಾಟೀಲರು ಲಾವಣಿಗಳ ಸ್ವರೂಪ, ಲಕ್ಷಣಗಳು ಕನ್ನಡದಲ್ಲಿ ಬೆಳೆದು ಬಂದ ಪರಂಪರೆಯನ್ನು ವಿವರಿಸಿದ್ದಾರೆ.

---

೧. ಡಾ. ಗವಿಸಿದ್ದಪ್ಪ.ಎಚ್. ಪಾಟೀಲ–ಬೆಳ್ಳಿ ದಾಂಪತ್ಯ–೨೦೦೮ ಪು–೮೨–೮೩.

ಗಂಡು ಹೆಚ್ಚು, ಹೆಣ್ಣು ಹೆಚ್ಚು ಎಂದು ಎರಡರಲ್ಲೂ ನಾ ಹೆಚ್ಚು ತಾ ಹೆಚ್ಚು ಸವಲ್-ಜವಾಬ್ ಕೊಡುವ ಬಗೆಯನ್ನು ಇಲ್ಲಿ ದಾಖಲಿಸಲಾಗಿದೆ. ಇದರ ಮೂಲಕ ಒಂದು ಮಹತ್ವದ ಜಾನಪದ ಪ್ರಕಾರ ಹೊರಹಾಕಿದ್ದಾರೆ. ಇಲ್ಲಿಯ ಹಾಡುಗಳನ್ನು ಸಂಗ್ರಹಿಸಿ ಅವುಗಳನ್ನು ಹಲವಾರು ವಿಭಾಗಗಳನ್ನಾಗಿ ವರ್ಗೀಕರಿಸಿದ್ದಾರೆ. ವರ್ಗೀಕರಿಸಿದ ಹಾಡುಗಳನ್ನು ಬೇರೆ ಬೇರೆ ಹಂತಗಳಲ್ಲಿ ದಾಖಲಿಸಿದ್ದಾರೆ.

ಲಾವಣಿ ಹಾಡಿನ ಹಾಡುಗಾರರ ಪಟ್ಟಿ, ಜನಪದ ಹಾಡು ಕಟ್ಟಿದವರ ಪಟ್ಟಿಯನ್ನು ಕೊಡುತ್ತಾ ಶಬ್ದಗಳ ಪದಕೋಶವನ್ನು ನೀಡಿದ್ದಾರೆ. ಹರದೇಶಿ-ನಾಗೇಶಿ ವೈಶಿಷ್ಟ್ಯತೆಗಳನ್ನು ಹಲವಾರು ಸಾಕ್ಷ್ಯಾಧಾರಗಳನ್ನು ನೀಡುವ ಮೂಲಕ ಹೊಸದೊಂದು ಪ್ರಕಾರವನ್ನು ಸಂಪಾದಿಸಿಕೊಟ್ಟಿದ್ದಾರೆ"[೧].

ಜಾನಪದ ಚಿಂತನ:

ಜನಪದ ಸಾಹಿತ್ಯ, ಸಂಸ್ಕೃತಿ, ಕಲೆ, ಸಂಪ್ರದಾಯಗಳಿಗೆ ಸಂಬಂಧಪಟ್ಟ ಲೇಖನಗಳ ಸಂಗ್ರಹ ಇದಾಗಿದೆ. ಜನಪದ ಕುರಿತು ಆಲೋಚಿಸುವ ಚಿಂತನೆ ಮಾಡುವ ನಿಟ್ಟಿನಲ್ಲಿ ಇಲ್ಲಿನ ಲೇಖನಗಳು ಸಾಗುತ್ತವೆ. ಒಟ್ಟು ಹನ್ನೆರಡು ಲೇಖನಗಳಿಂದ ಕೂಡಿದ 'ಜಾನಪದ ಚಿಂತನ' ಕೃತಿಯಾಗಿದೆ. ೧೯೭೮ ರಿಂದ ಈ ವರೆಗೂ ಜಾನಪದ ಕೃಷಿಗೈದು ಕೃತಿ ರಚಿಸಿದ್ದಾರೆ. ಮನುಷ್ಯನಿಗೆ ನೀಡಿದ ಒಂದು ವರ ಸಂಸ್ಕೃತಿ. ಸಂಸ್ಕೃತಿ ಎಂದರೇನು? ಅದು ಬೆಳೆದು ಬಂದ ಬಗೆ ಕುರಿತು ವಿವರಣೆ ಇಲ್ಲಿದೆ. ನಯ, ವಿನಯ, ಧರ್ಮ, ವಿದ್ಯೆ ಮುಂತಾದವು ಸಂಸ್ಕೃತಿಯನ್ನು ರೂಪಿಸುವಲ್ಲಿ ವಹಿಸುವ ಪಾತ್ರ ಕುರಿತು ಲೇಖನ ತಿಳಿಸುತ್ತದೆ.

ಜನಪದರ ಬದುಕಿನಲ್ಲಿ ದೇವಾಲಯಗಳ ಮಹತ್ವ, ಅವುಗಳ ಪಾತ್ರ, ಜನಪದ ಮನೋನಂಬಿಕೆಯ ಪರಿಣಾಮವಾಗಿ ಉದಯವಾದ ದೇವಾಲಯಗಳು ತಿರುಗಿ ಅವರ ಬದುಕನ್ನು ಹಸನುಗೊಳಿಸಿ ಅವರಲ್ಲಿ ಧರ್ಮಶ್ರದ್ಧೆ ಮೂಡುವಂತೆ ಮಾಡಿವೆ ಎನ್ನುವುದನ್ನು ಇಲ್ಲಿನ ಲೇಖನ ವಿವರಿಸುತ್ತವೆ.

ವರ್ಗ-ವರ್ಣ ವ್ಯವಸ್ಥೆಯ ಮಧ್ಯದಲ್ಲೂ ಜನಪದ ಕೋಮು ಸೌಹಾರ್ದತೆಯನ್ನು ಉಳಿಸಿಕೊಂಡು ಬಂದ ಬಗೆಯನ್ನು ಲೇಖನ ಹೇಳುತ್ತದೆ.

---

೧. ಡಾ. ಗವಿಸಿದ್ದಪ್ಪ.ಎಚ್. ಪಾಟೀಲ-ಬೆಳ್ಳಿ ದಾಂಪತ್ಯ-೨೦೦೮ ಪು-೯೧-೯೨.

ಜನಪದ ಮಹಿಳೆಯ ವ್ಯಕ್ತಿತ್ವ, ಸಂಸ್ಕೃತಿಯನ್ನು ಹಾಡುಗಳ ಮುಖಾಂತರ ಇಲ್ಲಿನ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. ಸಹ ಗಮನ ಪದ್ಧತಿ, ಕೆರೆಗೆ ಹಾರವಾಗುವಂತಹ ದುಷ್ಟ ಸಂಪ್ರದಾಯಗಳನ್ನು ಸಹ ಸಹಿಸಿಕೊಂಡು ಶೀಲವತಿಯಾಗಿ, ಪುಣ್ಯವತಿಯಾಗಿ ಬದುಕು ನಡೆಸಿಕೊಂಡು ಬಂದಿರುವುದನ್ನು ಡಾ. ಪಾಟೀಲರು ಇಲ್ಲಿನ ಲೇಖನದಲ್ಲಿ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ.

ಜನಪದ ರಂಗ ಮಂಟಪ ರಚನೆ, ವಿಧಿ-ವಿಧಾನ ಮತ್ತು ವೇಷ ಭೂಷಣಗಳ ರಚನೆಯ ಕ್ರಮ ಕುರಿತು ಸಂಶೋಧನಾತ್ಮಕ ನೆಲೆಯಲ್ಲಿ ಲೇಖಕರು ನೋಡಿದ್ದಾರೆ. ಲಾವಣಿ ಸಾಹಿತ್ಯ, ಸ್ಥಳೀಯ ಐತಿಹ್ಯಗಳು, ದರಗಾಗಳು, ಮಹಿಳೆ ಮುಂತಾದಹನ್ನೆರಡು ಲೇಖನಗಳು ಒಂದಿಲ್ಲೊಂದು ಸಂದರ್ಭದಲ್ಲಿ ಮುಖ್ಯವಾಗಿವೆ. ಇವುಗಲೆಲ್ಲ ನಾಡಿನ ಪ್ರಮುಖ ಪತ್ರಿಕೆ ಸ್ಮರಣ ಸಂಚಿಕೆ ಹಾಗೂ ಗೋಷ್ಠಿಗಳಲ್ಲಿ ಮಂಡಿಸಿದವುಗಳಾಗಿವೆ. ಒಟ್ಟಾರೆ ಜನಪದ ಸಾಹಿತ್ಯವನ್ನು ಹತ್ತು ಹಲವು ಮುಖಗಳಲ್ಲಿ ಚಿಂತಿಸುವ ಕ್ರಮ, ಸಂಶೋಧನಾತ್ಮಕ ನೆಲೆ, ವಿಶ್ಲೇಷಣೆಯಿಂದ ತಲಸ್ಪರ್ಶಿಯಾದ ಬರಹದಿಂದ 'ಜಾನಪದ ಚಿಂತನ' ಬಹು ಮುಖ್ಯ ಕೃತಿ ಆಗಿದೆ.

ಜನಪದ ಕಥೆಗಳ ಸಂಗ್ರಹ:

ಈ ಕೃತಿಯನ್ನು ಡಾ. ಬಸವರಾಜ ಪೋಲಿಸ್ ಪಾಟೀಲ, ಡಾ. ಜಗನ್ನಾಥ ಹೆಬ್ಬಾಳೆ ಅವರ ಜೊತೆ ಸೇರಿ ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ರಮ್ಯ ಕಥೆಗಳು, ಅದ್ಭುತ ಕಥೆಗಳು, ಮಾಟ ಮಂತ್ರದ ಕಥೆಗಳು, ನೀತಿ ಕಥೆಗಳು, ಪ್ರಾಣಿ ಕಥೆಗಳು, ವಿನೋದ ಕಥೆಗಳು ಎಂಬ ೬ ಅಧ್ಯಾಯಗಳಿವೆ.

ಪ್ರಸ್ತಾವನೆಯಲ್ಲಿ ಕಥೆಗಳ ಹುಟ್ಟಿಗೆ ಕಾರಣವೇನು? ಕಥೆಗಳು ಯಾವ ಮೂಲದಿಂದ ಬಂದವುಗಳಾಗಿವೆ. ಇವುಗಳ ಉಗಮ ವಿಕಾಸ ಮತ್ತು ಕಥೆಗಳು ಪಡೆದುಕೊಂಡ ವ್ಯಾಪ್ತಿಯ ಕುರಿತಾಗಿ ಸುಧೀರ್ಘವಾಗಿ ಚರ್ಚಿಸಿದ್ದಾರೆ. ಮೂಲತಹ ಕಥೆಗಳು ಯಾವ ಭಾಷೆಯಲ್ಲಿ ಹುಟ್ಟಿಕೊಂಡವು ಮತ್ತು ಕಥೆಗಳ ವರ್ಗೀಕರಣದ ಕುರಿತು ಈ ಕೃತಿಯ ಆರಂಭದಲ್ಲಿ ಚರ್ಚಿಸಿದ್ದಾರೆ.

ಹಣದ ಶಕ್ತಿ ಎಂತಹದು, ಸೊಸೆಯ ಜಾಣ್ಮೆ, ದೇವರ ಕೃಪೆಯಿಂದ ಆಗುವ ಬದಲಾವಣೆ, ಜೀವನದಲ್ಲಿ ತಾಯಿಯ ಮಹತ್ವ, ಅಣ್ಣ ದಯಾಪರತೆ, ಮುಂತಾದ ಮೌಲ್ಯಗಳನ್ನು ಎತ್ತಿ ತೋರಿಸುವಂತಹ

ಕಥೆಗಳು ಇಲ್ಲಿ ಮೂಡಿಬಂದಿವೆ. ಮತ್ತು ಇಲ್ಲಿ ಬರುವ ಪ್ರಾಣಿಗಳ ಕಥೆಗಳು ಮತ್ತು ವಿನೋದ ಕಥೆಗಳು ಅತ್ಯಂತ ಕುತೂಹಲಭರಿತ ಹಾಗೂ ಆಸಕ್ತಿಭರಿತ ಕಥೆಗಳಾಗಿದ್ದು ಕೇಳುಗರನ್ನು ತಮ್ಮ ಕಡೆ ಸೆಳೆದುಕೊಳ್ಳುತ್ತೇವೆ.

ಒಟ್ಟಿನಲ್ಲಿ ಡಾ. ಪಾಟೀಲರು ಈ ಕೃತಿಯಲ್ಲಿ ಜನಪದ ಕಥೆಗಳ ಮಹತ್ವ, ವೈಶಿಷ್ಟ್ಯಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಹಾಗೂ ಅನೇಕ ಜನಪದ ಕಥೆಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ.

ಅಮರ ಜಾನಪದ:

ಅಮರ ಜಾನಪದದಲ್ಲಿ ಒಟ್ಟು ೯ ಸಂಶೋಧನಾತ್ಮಕ ಲೇಖನಗಳಿದ್ದು, ಇವುಗಳು ಹೈದ್ರಾಬಾದ ಕರ್ನಾಟಕದ ಜನಪದ ಕತೆ, ಕಲೆ, ಸಾಹಿತ್ಯ ಮೊದಲಾದವುಗಳ ಕುರಿತು ಬೆಳಕು ಚೆಲ್ಲುತ್ತವೆ.

ಕೃತಿಯ ಮೊದಲನೆ ಲೇಖನದಲ್ಲಿ ನಿಸರ್ಗದ ಪೂಜೆ, ದೇವರು, ದೈವಗಳ ಮೇಲೆ ಜನಪದರು ಇಟ್ಟಿರುವ ಭಕ್ತಿ, ಶ್ರದ್ಧೆ, ಗ್ರಾಮದೇವರ ಬಗ್ಗೆ, ಅನೇಕ ಭಕ್ತರು ರೋಗರುಜನಿಗಳಿಗೆ ಒಳಗಾದಾಗ ಅವುಗಳು ಗುಣವಾಗದಿದ್ದರೆ ಹರಕೆಯನ್ನು ಪೂರೈಸುವುದು ಹೀಗೆ ಮೊದಲಾದ ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಜನಪದ ಕಥೆಗಳ ಉಗಮ, ವಿಕಾಸ, ವರ್ಗೀಕರಣವನ್ನು ಬಲು ಸೂಕ್ಷ್ಮವಾಗಿ ಎರಡನೆ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. ರಮ್ಯ ಕಥೆಗಳು. ಅದ್ಭುತ ಕಥೆಗಳು, ಮಾಂತ್ರಿಕ ಕಥೆಗಳು, ನೀತಿ ಕಥೆಗಳು, ಪ್ರಾಣಿ ಕಥೆಗಳು ಹಾಗೂ ವಿನೋದ ಕಥೆಗಳ ಬಗ್ಗೆ ವಿವರಣೆ ಈ ಲೇಖನದಲ್ಲಿ ನೀಡಿದ್ದಾರೆ.

'ಹೈದ್ರಾಬಾದ-ಕರ್ನಾಟಕ ಲಾವಣಿ' ಸಾಹಿತ್ಯ ಅರ್ಥ, ಮಹತ್ವ, ವೈಶಿಷ್ಟ್ಯ, ಪ್ರಮುಖ ಲಾವಣಿ ಕಲಾ ಮೇಳಗಳ ಬಗ್ಗೆ ಹಾಗೂ ಹೈದ್ರಾಬಾದ ಕರ್ನಾಟಕದ ಪ್ರಮುಖ ಲಾವಣಿ ಕವಿಗಳ ಬಗ್ಗೆ ಕೃತಿಯ ಮೂರನೆ ಲೇಖನದಲ್ಲಿ ವಿವರಿಸಿದ್ದು, ಸಂಶೋಧನಕಾರರಿಗೆ ಉಪಯುಕ್ತವಾದ ಅಂಶಗಳಾಗಿವೆ.

ಸಂಸ್ಕೃತಿ, ಜನಪದ ಸಂಸ್ಕೃತಿ, ಜನಪದ ಸಾಹಿತ್ಯ ಹಾಗೂ ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ ಪ್ರಕಾರ ಕುರಿತಾದ ಲೇಖನಗಳು ಈ ಕೃತಿಯಲ್ಲಿ ಮೂಡಿಬಂದಿವೆ.

ತತ್ವ ಪದದ ಅರ್ಥ, ಸ್ವರೂಪ, ಲಕ್ಷಣ ಪರಂಪರೆ ಹಾಗೂ ಹೈದ್ರಾಬಾದ ಕರ್ನಾಟಕದ ಪ್ರಮುಖ ತತ್ವಪದಕಾರರ ವಿವರಣೆ, ತತ್ವಪದಗಳ ಅಂತರಂಗವನ್ನು ಇಲ್ಲಿ ಲೇಖಕರು ಚೆನ್ನಾಗಿ ತಮ್ಮದೇ ಶೈಲಿಯಲ್ಲಿ ಹಿಡಿದಿಟ್ಟಿದ್ದಾರೆ.

"ಕಷ್ಟ ಸುಖವು ದೇವರ ಲೀಲೆಯು
ಹುಟ್ಟಿದ ಮೇಲೇಕೆ ಮರುಗುವುದು
ಮಾತೆಯ ಗರ್ಭದೊಳಿಂದ ಹೊರಬಂದ ಕಾಲಕ್ಕೆ
ಪ್ರೀತಿ ಕವಚವನಾರು ತೋಡಿಸಿದರು
ಏತಕೀ ದು:ಖವು ಲೋಕನಾಥನು ಇರಲು
ಸೋತು ಸೊರಗದೆ ನೀನು ಸುಖಿಯಾಗಿರು"[೧].

"ಮಾನವ ಜಲ್ಮಕೆ ಶೀಲವು ಬೇಕು
ಶಿವನೊಲುಮೆಗೆ ಇದನು ಸಾಧಿಸಬೇಕು
ಇದುವೆ ಮಾನವ ಗಳಿಸುವ ಸೋತ್ತು
ರುಚಿಶುಚಿಗಾಗಿದೆ ಇದು ಸಂಪತ್ತು
ಶುದ್ಧಿಗೆ ವೃದ್ಧಿಗೆ ಭಾಗ್ಯೋದಯಕೆ
ಸತ್ಯಕೆ ಶ್ರೇಯಕೆ ಇದುವೆ ಬೇಕು"[೨].

ಹೀಗೆ ಪ್ರಾರ್ಥನೆ, ಶೀಲ, ಶರೀರ, ಸಮಾಜ ದರ್ಶನ, ಮಹತಿ, ಮಂಗಲ ವಿಷಯಗಳಿಗೆ ಸಂಬಂಧಪಟ್ಟ ಅನೇಕ ತತ್ವಪದಗಳು, ಮತ್ತು ಅವುಗಳ ವಿಶ್ಲೇಷಣೆಯನ್ನು ಅರ್ಥಪೂರ್ಣವಾಗಿ ಈ ಕೃತಿಯ ೭ ಲೇಖನದಲ್ಲಿ ದಾಖಲಿಸಿದ್ದಾರೆ.

ಹೈದ್ರಾಬಾದ ಕರ್ನಾಟಕದಲ್ಲಿ ನಿಜಾಮರ ಆಳ್ವಿಕೆಯಲ್ಲಿ ರಜಕಾರರು ನಡೆಸಿದ ರಾಕ್ಷಸಿ ದೌರ್ಜನ್ಯಗಳಾದ ಕೊಲೆ, ಸುಲಿಗೆ, ಅತ್ಯಾಚಾರ, ಬೇಕೆನಿಸಿದಮನೆಗಳಿಗೆ ನುಗ್ಗಿ ಕುರಿ-ಕೋಳಿಗಳನ್ನು ಹೊತ್ತೊಯ್ಯುವುದನ್ನು, ಮನೆಯಲ್ಲಿರುವ ನಗೆ-ನಾಣ್ಯಗಳನ್ನು ಲೂಟಿ ಮಾಡುವುದನ್ನು, ಹೀಗೆ ಹೈದ್ರಾಬಾದ ಕರ್ನಾಟಕದ ತುಂಬೆಲ್ಲಾ ನಡೆದ ವಿಮೋಚನಾ ಹೋರಾಟದ ಇಂತಹ ಘಟನೆಗಳನ್ನು ಹಾಡಿನ ಮೂಲಕ ಇಲ್ಲಿನ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

೧.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮರ ಜಾನಪದ-೨೦೦೮, ಪು-೦೪.

೨.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮರ ಜಾನಪದ-೨೦೦೮, ಪು-೬೯.

"ಶ್ರೀ ಗುರು ಗೋರಖನಾಥ
ವೈರಾಗ ಶಾಲಿವಂತ ಭಕ್ತರಿಗೆಒಲಿಯೋ ಸನ್ಯಸ್ಥ //ಕೋಲೆಣ್ಣ ಕೊಲ//
ಹೈದರಾಬಾದಿನ ಬೀದರ ಜಿಲ್ಲಾ
ರಝಾಕಾರ ಪುಂಡರೆಲ್ಲ ದಂಡೆತ್ತಿ
ಬಂದಾರೋ ಗೋರಟಿಮ್ಯಾಲಾ //ಕೋಲೆಣ್ಣಾ ಕೋಲ//

ಗೋರಟಿ ಸುದ್ದಿಯನ್ನು ಕೇಳಿರಿ ನೀವಿನ್ನು
ತಿಳಿದ ಮಟ್ಟಿಗೆ ಹೇಳುವೆ ನಾನು //ಕೋಲೆಣ್ಣಾ ಕೋಲ//
ಗೋರಟಿ ಗ್ರಾಮವಾಸ, ಧನಲಕ್ಷ್ಮಿಯ ವಾಸ
ಇದರ ಮೇಲೆ ತುರುಕರ ಮನಸ //ಕೋಲೆಣ್ಣಾ ಕೋಲ//

ಹದಿನೆಂಟು ನೂರಾ ಎಪ್ಪತ್ತು ಶಾಲಿವಾಹನ ಶತಾಬ್ದಿಯ ಕ್ರಾಂತಿ
ಯಯಿತ್ತೋ ಗೋರಟಿಯಲ್ಲಿ //ಕೋಲೆಣ್ಣಾ ಕೋಲ//"[೧].

ಇಂಥ ಹಾಡುಗಳ ಮೂಲಕ ರಜಾಕಾರರ ರಾಕ್ಷಸಿ ದೌರ್ಜನ್ಯಗಳ ಚಿತ್ರಣ ಮನತಟ್ಟುವಂತೆ ಈ ಕೃತಿಯಲ್ಲಿ ಮೂಡಿಸಿದ್ದಾರೆ. ಕೊನೆಯ ಲೇಖನದಲ್ಲಿ ಕಲಬುರ್ಗಿ ಜಿಲ್ಲಾ ಜಾನಪದ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಡಾ. ಪಾಟೀಲ ಮಾಡಿದ ಭಾಷಣವು ಸೇರ್ಪಡೆಗೊಂಡು ಈ ಕೃತಿಗೆ ಹೊಸ ಮರಗು ಬಂದಿದೆ.

ಇಂಥ ಮಹತ್ವಪೂರ್ಣ ಸಂಶೋಧನಾತ್ಮಕ, ವಿಮರ್ಶಾತ್ಮಕ ಲೇಖನಗಳನ್ನೊಳಗೊಂಡ 'ಅಮರ ಜಾನಪದ' ಹಲವು ಪ್ರಶಸ್ತಿ, ಪುರಸ್ಕಾರಗಳಿಗೆ ಪಾತ್ರವಾಗಿದೆ. ಅವುಗಳಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮ್ಮ ಗಿರಿಗೌಡ ದತ್ತಿ ಪ್ರಶಸ್ತಿ, ಕೇರಳ ರಾಜ್ಯದ ಕಾಸರಗೋಡಿನ ಸಾಹಿತ್ಯ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುರಸ್ಕಾರ ಹೀಗೆ ಹಲವು ಪ್ರಶಸ್ತಿ, ಪುರಸ್ಕಾರಗಳನ್ನು ತನ್ನ ಮುಡಿಗೇರಿಸಿಕೊಂಡಿದೆ, ಒಟ್ಟಿನಲ್ಲಿ 'ಅಮರ ಜಾನಪದ' ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ಹೊಸ ಚಿಂತನೆಗೆ ಆಯಾಮವನ್ನೇ ನೀಡಿರುವ ಕೃತಿಯಾಗಿದೆ.

೧.ಡಾ. ಬಸವರಾಜ ಪೋಲಿಸ್ ಪಾಟೀಲ–ಅಮರ ಜಾನಪದ–೨೦೦೪ ಪು–೬೫.

ಅಮೂಲ್ಯ ಜಾನಪದ:

ಇದು ಜಾನಪದವನ್ನು ಕುರಿತ ವಿಶಿಷ್ಟವಾದ ಚಿಂತನೆಯಿಂದ ಕೂಡಿದ ಲೇಖನಗಳನ್ನೊಳಗೊಂಡ ಕೃತಿಯಾಗಿದೆ. ಒಟ್ಟು ಏಳು ಲೇಖನಗಳನ್ನೊಳಗೊಂಡ ಈ ಪ್ರಸಕ್ತ ಜಾನಪದ ಸಾಹಿತ್ಯದ ವಿವಿಧ ಮಗ್ಗಲುಗಳ ಚಿಂತನೆಯನ್ನು ಅಂತರ್ಗತವಾಗಿಸಿಕೊಂಡಿದೆ. 'ಜನಪದದಲ್ಲಿ ವೀರಶೈವ ಸಂಸ್ಕೃತಿ' ಎಂಬ ಲೇಖನದೊಂದಿಗೆ ತನ್ನ ಅಂತರಂಗವನ್ನು ತೆರೆದುಕೊಳ್ಳುತ್ತದೆ.

ಬಸವಣ್ಣನವರು ಪ್ರತಿಪಾದಿಸಿದ ತತ್ವಗಳನ್ನು ವೀರಶೈವರು ಸಂಪೂರ್ಣವಾಗಿ ಒಪ್ಪಿಕೊಂಡಿದ್ದರಿಂದಾಗಿ ಅದು ವೀರಶೈವ ಸಂಸ್ಕೃತಿಯಾಗಿ ರೂಪಗೊಂಡಿತು. ಇಂತಹ ಸಂಸ್ಕೃತಿಯೊಂದು ನಮ್ಮ ಜನಪದರಲ್ಲಿ ಯಾವ ರೀತಿಯಲ್ಲಿ ಆಚರಣೆಯಲ್ಲಿದೆ ಹಾಗೂ ಜನಪದರು ಈ ಸಂಸ್ಕೃತಿಯನ್ನು ಒಪ್ಪಿಕೊಂಡ ಬಗೆಯನ್ನು ಕುರಿತು ಸ್ಪಷ್ಟತೆಯನ್ನು ಇಲ್ಲಿನ ಲೇಖನದಲ್ಲಿ ಕಾಣಬಹುದು.

"ಶರಣೆಂಬೆ ಶಿವನಿಗೆ ಶರಣೆಂಬೆ ಗುರುವಿಗೆ
ಶರಣೆಂಬೆ ಶಿವನ ಮಡದಿ । ಗೌರಮಗೆ
ಶರಣೆಂದು ಕಲ್ಲು ಹಿಡಿದೇನು॥"[೧].

"ಕಷ್ಟ ಸುಖವು ದೇವರ ಲೀಲೆಯು
ಹುಟ್ಟಿದ ಮೇಲೇಕೆ ಮರುಗುವುದು ।
ಮಾತೆಯ ಗರ್ಭದೊಳಿಂದ ಹೊರಬಂದ ಕಾಲಕ್ಕೆ
ಪ್ರೀತಿ ಕವಚವನಾರು ತೊಡಿಸಿದರು।
ಏತಕೀ ದು:ಖವು ಲೋಕನಾಥನು ಇರಲು।
ಸೋತು ಸೊರಗದೆ ನೀನು ಸುಖವಾಗಿರು"[೨].

ಇಂಥ ಅನೇಕ ತತ್ವಪದಗಳ ಮೂಲಕ ಜನಪದ ಮತ್ತು ವೀರಶೈವ ಸಂಸ್ಕೃತಿಗಳೆರಡು ಆಚರಣೆ ಮತ್ತು ತತ್ವಗಳಲ್ಲಿ ಸೌಮ್ಯತೆಯನ್ನು ಹೊಂದಿವೆ ಎಂಬ ಅಂಶಗಳನ್ನು ಲೇಖಕರು ಹೊರಹಾಕಿದ್ದಾರೆ.

ಪುರೋಹಿತಶಾಹಿ ವ್ಯವಸ್ಥೆಯಲ್ಲಿ ತಳಸಮುದಾಯದವರೆಂದು, ಅಂತ್ಯಜರೆಂದು ಕರೆಯಲ್ಪಟ್ಟ ದಲಿತರು ಜನಪದರ ಜೀವನದಲ್ಲಿ

೧.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮೂಲ್ಯ ಜಾನಪದ-೨೦೦೬, ಪು-೫.
೨.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮೂಲ್ಯ ಜಾನಪದ-೨೦೦೬, ಪು-೯.

ಮಹತ್ತರವಾದ ಪಾತ್ರವನ್ನು ವಹಿಸುತ್ತಾರೆ. ಅಂತಹ ವಿಚಾರಗಳನ್ನುಕುರಿತೇ ಇಲ್ಲಿ ಲೇಖಕರು ಜನಪದ ಸಾಹಿತ್ಯ ಮತ್ತು ದಲಿತರು ಎಂದು, ಜನಪದ ಸಾಹಿತ್ಯದಲ್ಲಿ ವ್ಯಕ್ತವಾದ ಸಾಮರಸ್ಯದ ಜೀವನ ವಿಧಾನವನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

ಜನಪದ ಸಾಹಿತ್ಯದಲ್ಲಿ ಗೀತ ಪ್ರಕಾರ, ಮಹತ್ವವಾದುದು. ಅದರಲ್ಲೂ ಕಲ್ಗಿ-ತುರಾಯಿ ತುಂಬಾ ಜನಮನ್ನಣೆ ಪಡೆದ ಪ್ರಕಾರವಾಗಿದೆ. ಈ ಕಲ್ಗಿ-ತುರಾಯಿಯ ಶಿಲ್ಪಿ, ಹಾಡುವ ವಿಧಾನ ಮತ್ತು ಅದರ ಒಟ್ಟು ಸ್ವರೂಪವನ್ನು ಸಮಗ್ರವಾಗಿ ವಿವರಿಸಿದ್ದಾರೆ.

ಸ್ತುತಿ:

"ಕುಂದಗೊರಳ ಪುತ್ತರ । ನಿನಗೆ ವಂದಿಸುವೆ ಬಾರೊ ।
ಲಂಬೋಧರ ಲವಲವಕಿಲೆ । ಮುದ್ದು ಮುಕವ ತೋರೊ। ॥ಗೀ ಗೀ॥
ಚಂದ ಒಪ್ಯಾವ ಚರೆದನ ಹಾರ । ಕಂಠದಲ್ಲಿ ಕರಿಯ ಸರ
ಗಮಧಕಸ್ತೂರಿ ಕರಕಿ ಪತ್ರಿ । ಕರದಿ ಏರಿಸುವೆ ಬಾರೋ
ತೆತ್ತೀಸ ಕೋಟಿ ದೇವತರ ।ಹಿಡಿದರು ಛತ್ರಚಾಮರ।
ಚತುರ ಭುಜ ಚೌಸ‌ಟಿ ವಿದ್ಯೆಕ ।ಅಧಿಕ ನೀನೆ ಬಾರೋ। ॥ಗೀ ಗೀ॥"[೧].

ಹೀಗೆ ಹಾಡಿನ ಆರಂಭದಲ್ಲಿ ಆಯಾ ಪಕ್ಷದವರು ತಮ್ಮ ತಮ್ಮ ಇಷ್ಟ ದೈವಗಳ ಸ್ತುತಿ ಮಾಡುತ್ತಾರೆ.

ಖ್ಯಾಲಿ:

"ಗಡಗಿ ತೊಳೆದು ಅಡಗಿ ಮಾಡವ್ವ
ಒಡಿಯಗ ನೀಡವ್ವ ॥ಜೀ ಜೀ॥
ತೊಗಲ ಗಡಗಿಗಿ ಒಂಬತ್ತು ಹುಗಲವ್ವ
ತುಲಗದೆದಿದು ತಗಲ್ಯಾದವ್ವ
ಕಾರಣಗಡಿಗಿಕರುವುದವ್ವಾ ॥ಜೀ ಜೀ॥
ಇಡು ತ್ರಿಗುಣೆಂಬ ಒಲಿಮ್ಯಾಲವ್ವ
ನಿರ್ಗುಣ ಎಂಬ ನಿರ್ವಾಕವ್ವ
ಧರ್ಮ ಎಂಬ ಧ್ಯಾನದ ಗಂಜಿಯ ಕಾಸಿ
ಪರಮ ಪೂಜಾರಿಗೆ ಉಣಿಸೆ ಮಲ್ಲವ್ವ" ॥ಜೀ ಜೀ॥[೨].

ಈ ಖ್ಯಾತಿಗಳು ಕೊನೆಯ ಚರಣದಲ್ಲಿ ಕವಿಯ ಅಂಕಿತ, ಊರು ಮುಂತಾದ ಕವಿಗೆ ಸಂಬಂಧಿಸಿದ ಮಾಹಿತಿ ನೀಡುತ್ತವೆ.

೧.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮೂಲ್ಯ ಜಾನಪದ-೨೦೦೬, ಪು-೨೭.
೨.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮೂಲ್ಯ ಜಾನಪದ-೨೦೦೬, ಪು-೨೮.

ಜನಪದರ ಲಾವಣಿಯಲ್ಲಿ ಪ್ರಮುಖವಾಗಿರುವ ಕಲ್ಗಿ–ತುರಾಯಿ ನಮ್ಮ ಜನಪದ ಸಮುದಾಯದಲ್ಲಿ ಒಂದು ಕಾಲಕ್ಕೆ ಅತ್ಯಂತ ಪ್ರಸಿದ್ಧವಾಗಿದ್ದಂತಹುದು. ಆದರೆ ಇಂದು ಆಧುನೀಕರಣದ ಪ್ರಭಾವದಿಂದಾಗಿ ನಮ್ಮಿಂದ ದೂರ ಸರಿದಿದೆ. ಈ ದೃಷ್ಟಿಯಿಂದಾಗಿ ಈ ಲೇಖನ ಮಹತ್ವವೆನಿಸುತ್ತದೆ. ಕ್ಷೇತ್ರ ಕಾರ್ಯದಿಂದ ಕಲಬುರ್ಗಿ ಜಿಲ್ಲೆಯ ಆಚರಣೆಗಳಲ್ಲಿ ಒಂದಾದ 'ಸಿಡಿ' ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿನ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. 'ಸಿಡಿ' ಆಚರಣೆಯ ಹುಟ್ಟು, ಆಡುವ ವಿಧಾನಗಳ ಕುರಿತಾಗಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ನೀಡಿದ್ದಾರೆ.

"ಬಂಡಿ ಬಂದಾವ ಬಂಡಿ ಅದಕ ಬಂಗಾರ ಕೊಂಡಿ
ಸಾಧೂರಾಡ್ಯಾರ ಸರಬಂಡಿ । ಘತ್ತರಗಿ
ಭಾಗಮ್ಮ ಗಾಡ್ಯಾರ ಸಿಡಿಬಂಡ್ಯೋ"[೧].

ಇದು ಘತ್ತರಗಿಯ ಸಿಡಿಬಂಡಿ ಕುರಿತು ಹೇಳುವ ಒಂದು ಜನಪದ ಹಾಡು.

'ಈ ಕೃತಿಯಲ್ಲಿ ಬರುವ 'ಜನಪದ ಸಣ್ಣಾಟಗಳ ಭಾಷೆಯನ್ನು ಕುರಿತ ಲೇಖನ ಲೇಖಕರ ಆಳವಾದ ಅಧ್ಯಯನದ ಪ್ರಜ್ಞೆಗೆ ಸಾಕ್ಷಿಯಾಗಿದೆ. ದಿನನಿತ್ಯ ಆಡು ಮಾತಿನಲ್ಲಿ ಬಳಕೆಯಾಗುವ ಪಡೆನುಡಿ, ನಾಣ್ನುಡಿ, ಬೈಗುಳ ಮೊದಲಾದ ಜನಪದ ಅಲಂಕಾರಿಕವಾದವುಗಳು ಸಣ್ಣಾಟಗಳಲ್ಲಿ ಹೇರಳವಾಗಿ ಕಾಣಬಹುದಾಗಿದೆ. ಇಂತಹ ಭಾಷಾ ವೈಶಿಷ್ಟ್ಯತೆಯನ್ನು ಕುರಿತು ಲೇಖಕರು ಬಹಳ ಗಂಭೀರವಾಗಿ ಚರ್ಚಿಸಿದ್ದಾರೆ.

"ಗೊಲ್ಲತಿ: ದೂತೆ, ನೀವ್ಹಾಂಗ ಹೆಪ್ಪ ಮುರಿತೀರಿ?
ಭಾಗವತ: ನಾವು ಹೆಪ್ಪ ಮುರಿಬೇಕಾದ, ಆಜುಬಾಜು ಮನಿಯವರಿಗಿ ಮೊದಲ ತಾಕೀತ ಮಾಡಿರ್ತೀವಿ
ಗೊಲ್ಲತಿ: ದೂತೆ, ಏನಂತ?"[೨].

೧.ಡಾ. ಬಸವರಾಜ ಪೋಲಿಸ್ ಪಾಟೀಲ–ಅಮೂಲ್ಯ ಜಾನಪದ–೨೦೦೬, ಪು–೪೯.

೨.ಡಾ. ಬಸವರಾಜ ಪೋಲಿಸ್ ಪಾಟೀಲ–ಅಮೂಲ್ಯ ಜಾನಪದ–೨೦೦೬, ಪು–೫೪.

“ಸತ್ಯವತಿ: ಎಲ್ಲ ಗಂಡಸರು ಸುಳ್ಳು ಹೇಳುತ್ತಾರೆ

ತೀರುನೀಲಕಂಠ:ಸುಳ್ಳು ಹೇಳುವುದಕ್ಕೆ ಅಂಥಾದ್ದೇನು ಅವರಿಗೆ ಬಂದಿದೆ?ಹೆಂಗಸ್ಸು ತನ್ನ ಗಂಡನ ಅಂಜಿಕೆಗಾಗಿ ಏನಾದರೂ ಸುಳ್ಳು ಹೇಳುವರು”[೧].

ಹೀಗೆ ‘ಪಾರಿಜಾತ’, ‘ಶರಣರಾಟ’, ‘ತಿರುನೀಲಕಂಠ’ ಸಣ್ಣಾಟಗಳ ಭಾಷಾ ವೈಶಿಷ್ಟ್ಯತೆಯನ್ನು ಚರ್ಚಿಸಿದ್ದಾರೆ.

“ವಜ್ಜಿ, ಬೇಸಿ, ಕಂಟಾ, ದೀನಸ, ವಾಸನಿ, ತುಟ್ಟಿ, ಬಣವಿ,

ಗರದಿ, ದರು, ಅಬರು, ಭೋಣಿಗಿ, ಜೀನಿ”[೨].

ಸಣ್ಣಾಟಗಳಲ್ಲಿ ಬಳಸುವ ಇಂಥ ಪದಗಳ ಪಟ್ಟಿಯನ್ನೆ ಇಲ್ಲಿನಲೇಖನದಲ್ಲಿ ನೀಡಿದ್ದಾರೆ.

“ಹದ ನೋಡಿ ಹರಗು ಬೆದಿ ನೋಡಿ ಬಿತ್ತು” ಎನ್ನುವ ಬೋಧ ಪ್ರಧಾನವಾದ ಗಾದೆಯನ್ನು ಕುರಿತು ಲೇಖಕರು ಸುಧೀರ್ಘವಾಗಿ ವಿವರಿಸಿದ್ದಾರೆ. ಈ ಗಾದೆ ಮೇಲ್ನೋಟಕ್ಕೆ ಕೃಷಿಗೆ ಸಂಬಂಧಿಸಿದಂತೆ ಕಂಡರೂ ಇದರ ಅಂತರ್ಯವನ್ನು ಅಗೆದು ನೋಡಿದಾಗ ಹಲವು ಅಂಶಗಳು ಅಡಗಿರುವುದನ್ನು ಕಾಣುತ್ತೇವೆ.

ಈ ಕೃತಿಯ ಕೊನೆಯಲ್ಲಿ ‘ಅಪ್ರಕಟಿತ ಸಣ್ಣಾಟಗಳ ಮೌಲ್ಯಗಳು’ ಎಂಬ ಶೀರ್ಷಿಕೆಯಡಿಯಲ್ಲಿ ನಂದಗೋಪಾಲ, ನೀಲಕಂಠರಾಜ, ಗುಣವಂತಿ- ಗುಣಲೋಪ, ಮದನ ಮಂಜರಿ, ಆಧಮತಿ, ಪುರುಷಭಾಗ್ಯ, ನನ್ನ ಭೂಮಿ, ತಾರಾಮಲಿ, ಹೀಗೆ ಅನೇಕ ಸಣ್ಣಾಟಗಳ ಮೌಲ್ಯಗಳನ್ನು ಕುರಿತು ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಈ ಕೃತಿಯ ಎಲ್ಲಾ ಲೇಖಗಳು ಅತ್ಯಂತ ಮಹತ್ವಪೂರ್ಣ ಮತ್ತು ವಿಶಿಷ್ಟವಾದವುಗಳಾಗಿವೆ. ಈ ಕೃತಿ ಹೆಸರಿಗೆ ತಕ್ಕಂತೆ ಅಮೂಲ್ಯವಾದ ಕೃತಿಯಾಗಿದೆ.

೧.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮೂಲ್ಯ ಜಾನಪದ-೨೦೦೬, ಪು-೬೨.

೨.ಡಾ. ಬಸವರಾಜ ಪೋಲಿಸ್ ಪಾಟೀಲ-ಅಮೂಲ್ಯ ಜಾನಪದ-೨೦೦೬, ಪು-೫೫.

ಸಂಪಾದನಾ ಕೃತಿಗಳು:

ಗ್ರಂಥ ಸಂಪಾದನಾ ಸಾಹಿತ್ಯವೊಂದು ಸಂಕೀರ್ಣ ವಸ್ತು ವಿಷಯಗಳನ್ನೊಳಗೊಂಡ ಪ್ರಕಾರವೆನಿಸಿದೆ. ಇಲ್ಲಿ ಸಂಪಾದಕನು ವಿವಿಧ ದೃಷ್ಟಿ ಧೋರಣೆಗಳನ್ನು ಇಟ್ಟುಕೊಂಡು ಸಂಪಾದನೆ ಕೆಲಸದಲ್ಲಿ ತೊಡಗಿರುತ್ತಾರೆ. ಇದು, ಒಂದು ರೀತಿಯಲ್ಲಿ ಸಾಹಿತಿಯೊಬ್ಬನ ಒಲವು ನಿಲುವುಗಳು ಏನು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಅಂತೆಯೇ ಡಾ. ಬಸವರಾಜ ಪೋಇಸ್ ಪಾಟೀಲರ ಒಲವು – ನಿಲುವುಗಳು ಯಾವುವು ಎಂಬುದು ಅವರ ಸಂಪಾದನಾ ಕೃತಿಗಳು ತಿಳಿಸುತ್ತವೆ. ಡಾ. ಪಾಟೀಲರು ಜನಪದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಾಡಿರುವ ಕೆಲಸ ಅಪಾರವಾಗಿದೆ. ಇವರು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉತ್ತಮ ಕೃತಿಗಳನ್ನು ಸಂಪಾದಿಸಿ ಕೊಟ್ಟಿದ್ದಾನೆ.

- ಬಿಡುಗಡೆ
- ಜ್ಞಾನಗಂಗಾ
- ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ
- ನಡುಗನ್ನಡ ಸಾಹಿತ್ಯ ಸಂಗ್ರಹ
- ಜಾನಪದ ಸಾಹಿತ್ಯ: ಶರಣರು.

ಬಿಡುಗಡೆ:

ಇದು ಗುಲಬರ್ಗಾ ಜಿಲ್ಲೆಯ ವಿಮೋಚನಾ ಹೋರಾಟದ ವೀರಗಾಥೆಯನ್ನು ಪ್ರತಿಬಿಂಬಿಸುವ ಗ್ರಂಥವಾಗಿದೆ. ಡಾ. ಬಸವರಾಜ ಪೋಲಿಸ್ ಪಾಟೀಲರು, ಡಾ. ಗವಿಸಿದ್ದಪ್ಪ ಎಚ್. ಪಾಟೀಲ ಅವರೊಂದಿಗೆ ಸೇರಿ ಸಂಪಾದಿಸಿರುವ ವಿವಿಧ ಲೇಖನಗಳ ಕೃತಿಯಾಗಿದೆ. ಹೈದ್ರಾಬಾದ ಕರ್ನಾಟಕ ವಿಮೋಚನೆಗೆ ಸಂಬಂಧಿಸಿದ ಮಹತ್ವದ ಲೇಖನಗಳ ಸಂಕಲನ ಇದಾಗಿದೆ.

"ಈಗಾಗಲೇ ಮುಂಡರಗಿ ನಾಡು ಸ್ವಾತಂತ್ರ್ಯ ಸಂಗ್ರಾಮ, ವಿಮೋಚನೆ ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಕೃತಿ ಬಂದಿವೆ. ವ್ಯಕ್ತಿಗಳ ಕುರಿತಾದ ಪುಸ್ತಕವೂ ಬಂದಿದೆ. ಗುಲಬರ್ಗಾ ಜಿಲ್ಲೆಯ ಸಮಗ್ರ

ವಿಮೋಚನಾ ಹೋರಾಟದ ಸ್ಮೃತಿ ಹೊರಬಂದಿಲ್ಲವೆಂದು, ಹೀಗಾಗಿ ೬ ಅಧ್ಯಾಯಗಳುಳ್ಳ ೩೦೦ ಪುಟಗಳ ಸ್ಮೃತಿ ಹೊರ ತಂದಿದ್ದಾರೆ"[1].

ಹೈದ್ರಾಬಾದ ಕರ್ನಾಟಕ ಪ್ರದೇಶದ ವಿಮೋಚನೆಯನ್ನು ಕುರಿತು ನಡೆದ ಹೋರಾಟದ ಕ್ರಾಂತಿ ಇದರಲ್ಲಿ ದಾಖಲಾಗಿದೆ ಇದೊಂದು ಉತ್ತಮ ಸಾಂದರ್ಭಿಕ ಗ್ರಂಥವಾಗಿ ಹೊರಹೊಮ್ಮಿದೆ.

ಹೈದ್ರಾಬಾದ ಸಂಸ್ಥಾನದ ಇತಿಹಾಸ, ವಿಮೋಚನೆ ಚಳುವಳಿಯ ಪರಂಪರೆ ದಾಖಲಿಸುವ ಲೇಖನಗಳು ದಾಖಲೆಯನ್ನು ನೀಡುವ ಆಧಾರವಾಗುವ ಲೇಖನಗಳು ವೈವಿಧ್ಯಮಯವಾಗಿ ಹೊರಬಂದಿವೆ.

ಕಲಬುರ್ಗಿ ಜಿಲ್ಲೆಯ ಕುರಿತಾದ ವಿಮೋಚನಾ ಹೋರಾಟ, ಅದರ ಸಮಾಜದ ಕೊಡುಗೆ ಮುಂತಾದ ಲೇಖನಗಳು ಗಮನ ಸೆಳೆಯುತ್ತವೆ. ಒಂದನೇ ಅಧ್ಯಾಯದಲ್ಲಿ ಹೈದ್ರಾಬಾದ ಕರ್ನಾಟಕದ ಪರಿಸರದ ಮೇಲೆ ಬೆಳಕು ಚೆಲ್ಲಿದ್ದಾರೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಐತಿಹಾಸಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವದ ಕುರಿತು ವಿವರಿಸಿದ್ದಾರೆ. ಅಲ್ಲದೇ ಕಲಬುರ್ಗಿ ಜಿಲ್ಲೆಯ ಸಾಂಸ್ಕೃತಿಕ ಕೇಂದ್ರಗಳ ವಿಶೇಷತೆಯನ್ನು ಎತ್ತಿ ತೋರಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಕಲಬುರ್ಗಿ ಜಿಲ್ಲೆಯ ಹೋರಾಟದ ಕುರಿತು ವಿವರಿಸಿದ್ದಾರೆ. ಹೈದ್ರಾಬಾದ ವಿಮೋಚನಾ ಹೋರಾಟದಲ್ಲಿ ಕಲಬುರ್ಗಿ ಜಿಲ್ಲೆಯ ಗಡಿ ಶಿಬಿರಗಳು ಮತ್ತು ಶಿಬಿರಾಧಿಗಳ ಪಾತ್ರ ಮಹತ್ವದ್ದೂ ಪ್ರಮುಖವಾಗಿತ್ತು ಎಂಬುದನ್ನು ಡಾ. ಪೋಲೀಸ ಪಾಟೀಲರು ಅಚ್ಚುಕಟ್ಟಾಗಿ ವಿವರಿಸಿದ್ದಾರೆ. ಮೂರನೇ ಅಧ್ಯಾಯದಲ್ಲಿ ಹಲವಾರು ವಿಮೋಚನಾ ಹೋರಾಟ ಕೈಗೊಂಡ ಮಹನೀಯರ ತ್ಯಾಗ, ಬಲಿದಾನ, ಸಾಹಸಗಳ ವೀರಗಾಥೆ, ವ್ಯಕ್ತಪಡಿಸಿದ್ದಾರೆ. ವಿವಿಧ ಸಂಘ - ಸಂಸ್ಥೆಗಳು, ಪತ್ರಿಕೋದ್ಯಮ, ಸಮಾಜಗಳು, ಹಾಗೂ ಅಂದಿನ ಮಹಿಳೆಯರೂ ಕೂಡ ಯಾವ ರೀತಿ ವಿಮೋಚನಾ ಹೋರಾಟದಲ್ಲಿ ಪಾಲ್ಗೊಂಡಿದ್ದರು ಎಂಬ ವಿವರಗಳನ್ನು ನಾಲ್ಕನೆ ಅಧ್ಯಾಯದಲ್ಲಿ ಕಾಣಬಹುದು. ಅಧ್ಯಾಯ ಐದರಲ್ಲಿ ಪ್ರಮುಖ ಹೋರಾಟಗಾರರ ಸಾಧನೆ - ಜೀವನ ವಿವರಗಳನ್ನು ದಾಖಲಿಸಲಾಗಿದೆ. ದೇಶಭಕ್ತಿ ಜಾಗೃತಗೊಳಿಸುವಂಥ ವಿಮೋಚನಾ ಹೋರಾಟದ ಕುರಿತು ಕನ್ನಡ ನಾಡಿನ ಅನೇಕ ಕವಿಗಳು ಬರೆದ ಕವನಗಳನ್ನು ಅಧ್ಯಾಯ ೬ ರಲ್ಲಿ ಸುಂದರವಾಗಿ ದಾಖಲಿಸಿದ್ದಾರೆ.

---

೧. ಡಾ. ಗುರುಸಿದ್ದಪ್ಪ ಪಿಹೆಚ್. ಪಾಟೀಲ-ಬೆಳ್ಳಿ ಬಾಂಧವ್ಯ-೨೦೦೮, ಪು-೮

ಬಿಡುಗಡೆ ಹೊಂದಿದ ಸಾಧಕ- ಬಾಧಕಗಳನ್ನು ಹೋರಾಟದ ವಿವಿಧ ಮುಖಗಳನ್ನು ಲೇಖಕರು ವಿವಿಧ ನೆಲೆಗಳಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. ಇಂಥದೊಂದು ಮಹತ್ವದ ಗ್ರಂಥ ಸಂಪಾದಿಸಿದ ಡಾ. ಬಸವರಾಜ ಪೋಲಿಸ್ ಪಾಟೀಲರ ಕಾರ್ಯ ಎಲ್ಲರೂ ಮೆಚ್ಚುವಂತಾಗಿದೆ.

ಜ್ಞಾನಗಂಗಾ:

ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಮುಖ ಅಂಗ "ಕನ್ನಡ ಅಧ್ಯಯನ" ಸಂಸ್ಥೆಯಾಗಿದೆ. '೩೩' ವರ್ಷಗಳಿಂದ ಕನ್ನಡ ವಿಭಾಗ ಪ್ರಾರಂಭವಾಗಿದೆ. ಆದರೆ ಈ ವಿಭಾಗದಿಂದ ಒಂದು ಕೃತಿಯು ವಿದ್ಯಾರ್ಥಿಗಳನ್ನು ಕುರಿತಾಗಿ ಬಂದಿರಲಿಲ್ಲ. ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಸ್ಮರಣ ಸಂಚಿಕೆ, ಕೃತಿಶೋಧಗಳು ಹೊರಬಂದಿವೆ. ಆದರೆ ವಿದ್ಯಾರ್ಥಿಗಳ ಪ್ರತಿಭಾ ಸಂಚಿಕೆ ಬರಲಿಲ್ಲ. ಇದನ್ನು ಗಮನಿಸಿ ೨೦೦೩ ರಲ್ಲಿ ಅಂದಿನ ವರ್ಷ ಕನ್ನಡ ಸಾಹಿತ್ಯ ಸಂಘದ ಕಾರ್ಯಾಧ್ಯಕ್ಷರಾಗಿ ಡಾ. ಬಸವರಾಜ ಪೋಲಿಸ್ ಪಾಟೀಲರು ಕಾರ್ಯ ನಿರ್ವಹಿಸಿದರು. ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಹೊರಹಾಕಲು ಸಂಚಿಕೆ ತರಬೇಕೆಂದು ಉದ್ದೇಶಿಸಿದರು. ಇದರಂತೆ ಡಾ. ಖ.ಬಿ. ನಾಯಕರ ಪ್ರಧಾ ಸಂಪಾದಕತ್ವದಲ್ಲಿ ಪೋಲಿಸ್ ಪಾಟೀಲರು ಸಂಪಾದಿಸಿದ ಕೃತಿಯೇ ಈ 'ಜ್ಞಾನಗಂಗಾ' ಸಂಚಿಕೆ.

'ಜ್ಞಾನಗಂಗಾ' ಕೃತಿ ನಾಲ್ಕು ಭಾಗಗಳನ್ನು ಒಳಗೊಂಡಿದೆ. ಕನ್ನಡ ಅಧ್ಯಯನ ಸಂಸ್ಥೆ, ಸ್ನಾತಕೋತ್ತರ ಕೇಂದ್ರ, ಪ್ರಾಧ್ಯಾಪಕರ ಕೃತಿ ಸಮೀಕ್ಷೆ, ಸಂಶೋಧನಾ ವಿದ್ಯಾರ್ಥಿಗಳ ಪ್ರಕರಣೆಗಳು, ಕನ್ನಡ ಸಾಹಿತ್ಯ ಸಂಘ ಬೆಳೆದು ಬಂದ ಪರಂಪರೆ, ಹಸ್ತಪ್ರತಿ, ಜಾನಪದ ವಿಭಾಗದ ಯೋಜನೆಗಳು ಸಂಪೂರ್ಣ ಸಂಸ್ಥೆಯ ಸಮಗ್ರ ನೋಟವನ್ನು ಆಯಾ ವಿದ್ಯಾರ್ಥಿಗಳು ಶ್ರಮವಹಿಸಿ ಬರೆದಿದ್ದಾರೆ. ಇವೇ ಲೇಖನಗಳು ಸಂಸ್ಥೆಯ ಇತಿಹಾಸ ಪರಂಪರೆ ಪ್ರತಿ ಬಿಂಬಿಸಿ ದಾಖಲಾಗುವ ಲೇಖನಗಳಾಗಿವೆ.

ಭಾಗ ಎರಡರಲ್ಲಿ ವಿದ್ಯಾರ್ಥಿಗಳಿಗೆ ದಕ್ಕಿದ ಆಲೋಚನೆ, ಚಿಂತನೆಗಳು, ತಮ್ಮ ಅಭ್ಯಾಸದ ಹಿನ್ನೆಲೆಯಲ್ಲಿ ಎಂಟು ವೈವಿದ್ಯ ಲೇಖನಗಳನ್ನು ರಚಿಸಿದ್ದಾರೆ. ಭಾಗ ಮೂರರಲ್ಲಿ ಏಳು ವಿದ್ಯಾರ್ಥಿಕತೆಗಳಿವೆ. ಸಾಮಾನ್ಯ ಹಾಗೂ ಸಾಮಾಜಿಕ ಕಡೆ ಮುಖಮಾಡಿದ ಕಥೆಗಳಿವೆ. ವಸ್ತು, ಭಾಷೆ, ತಂತ್ರಗಳಿಂದ ಕಥೆ ಸೋಲುತ್ತವೆ.

ಒಮ್ಮೆಯಾದರು ಓದಲು ಕಥೆಗಳು ಖುಷಿ ನೀಡುತ್ತವೆ. ಭಾಗ ನಾಲ್ಕರಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಬೆಳಕಿಗೆ ತರುವಂಥ "ಪರಿಸರ, 'ಭಾವನೆ', "ಸಂಕ್ರಾಂತಿ", "ಪರೀಕ್ಷೆ" ಮುಂತಾದ ಇಪ್ಪತ್ತೈದು ಕವಿಗಳ ಕವನಗಳಿವೆ.

ಪರೀಕ್ಷೆ

(ನರಸಪ್ಪ ಎಂ. ಚಿತ್ತಾಪುರ)
ಎಂ.ಎ. ಅಂತಿಮ

"ಗರ್ಭದಲ್ಲಿರುವಾಗಲೇ ಪರೀಕ್ಷೆ
ಖಾಸಗಿ ಶಾಲೆಗೆ ಸೇರಿಸಲು ಪರೀಕ್ಷೆ
ಉತ್ತೀರ್ಣ ಅನುತ್ತೀರ್ಣನಾಗಲು ಪರೀಕ್ಷೆ
ನೌಕರಿ ಚಾಕರಿಗೂ ಪರೀಕ್ಷೆ
ಮದುವೆಯ ವೇಳೆ ವಧು-ವರರಿಗೂ ಪರೀಕ್ಷೆ
ಹೌದಾ-ಇಲ್ಲ, ಇಲ್ಲ-ಹೌದಾಗಲೂ ಪರೀಕ್ಷೆ
ಸತ್ತರು ತಪ್ಪದು ಶವ ಪರೀಕ್ಷೆ"[೧].

ಹೀಗೆ ಕುವೆಂಪು, ನನ್ನಾಕೆ, ಭಾವನೆ, ಬಾಮರಳಿ ಮುಂತಾದ ಕವನಗಳ ಮುಖಾಂತರ ವಿದ್ಯಾರ್ಥಿಗಳ ಪ್ರತಿಭೆಯನ್ನು ಈ 'ಜ್ಞಾನಗಂಗಾ' ಸಂಚಿಕೆಯಲ್ಲಿ ದಾಖಲಿಸಿದ್ದಾರೆ.

ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ:

ನಾಗತಿಹಳ್ಳಿ ಚಂದ್ರಶೇಖರ ಅವರ ಸಾಹಿತ್ಯ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ದಿನಾಂಕ: ೧-೮-೨೦೦೪ ರಂದು ಗುಲಬರ್ಗಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಕಲ್ಯಾಣ ಮಂಟಪದಲ್ಲಿ ನಡೆಯಿತು. ಗುಲಬರ್ಗಾದ 'ಅಮರ ಪ್ರಕಾಶನ' ಸಂಸ್ಥೆ ಈ ವಿಚಾರ ಸಂಕಿರಣವನ್ನು ಆಯೋಜಿಸಿತು. ಈ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನವೇ ಈ "ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ" ಎನ್ನುವ ಕೃತಿ.

೧.ಡಾ. ಬಸವರಾಜ ಪೋಲಿಸ್ ಪಾಟೀಲ-ಜ್ಞಾನಗಂಗಾ-೨೦೦೪, ಪು-೧೧೭.

ಈ ಕೃತಿಯ ಮೊದಲನೆ ಲೇಖನದಲ್ಲಿ ನಾಗತಿಹಳ್ಳಿ ಚಂದ್ರಶೇಖರರ ಜೀವನ ಸಾಧನೆಗಳ ವಿವರಗಳನ್ನು ಡಾ. ಪೋಲಿಸ್ ಪಾಟೀಲರು ಪರಿಚಯಿಸಿದ್ದಾರೆ. ನಾಗತಿಹಳ್ಳಿಯುವರ ಸಾಹಿತ್ಯ ಸಾಧನೆಯ ವಿವರ ಈ ಲೇಖನದಲ್ಲಿ ಕಾಣಬಹುದು. ಇವರು ಬರೆದ ಕಥಾ ಸಂಕಲನಗಳು, ಕಾದಂಬರಿಗಳು ಹಾಗೂ ನಾಗತಿಹಳ್ಳಿಯುವರು ನಿರ್ದೇಶಿಸಿದ ಚಲನಚಿತ್ರಗಳ ಬಗ್ಗೆ ಮಾಹಿತಿಯನ್ನು ಈ ಮೊದಲನೆ ಲೇಖನದಲ್ಲಿ ಪಾಟೀಲರು ಅಚ್ಚುಕಟ್ಟಾಗಿ ಪರಿಚಯಿಸಿದ್ದಾರೆ.

ನಾಗತಿಹಳ್ಳಿ ಚಂದ್ರಶೇಖರ ಕಥೆಗಳಲ್ಲಿ ವೈಚಾರಿಕತೆ ಅವರಲ್ಲಿ ಹೇಗೆ ಕಾಣಿಸುತ್ತದೆ. ಅವುಗಳ ಬಗೆಗಳನ್ನು ಚಿತ್ರಶೇಖರ ಕಂಠಿ ವಿವರಿಸಿದ್ದಾರೆ ಹಾಗೂ ನಾಗತಿಯುವರಕಥೆಗಳಲ್ಲಿ ಸ್ತೀಸಂವೇದನೆಗಳ ಆಶಯುಗಳನ್ನು ಡಾ. ಅಮೃತಾ ಕಟಕೆಯುವರು ಈ ಕೃತಿಯ ಮೂರನೇ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. ನಾಗತಿಹಳ್ಳಿಯುವರ ಕುತೂಹಲಭರಿತ ಕಾದಂಬರಿಗಳಾದ "ಬಾನಲ್ಲೆ ಮಧುಚಂದ್ರಕೆ", "ವಲಸೆ ಹಕ್ಕಿಯ ಹಾಡು", ಗಳ ಬಗ್ಗೆ ವಿವರಣೆಯುನ್ನು ನಾಲ್ಕನೆಯ ಅಧ್ಯಾಯುದಲ್ಲಿ ಕಾಣಬಹುದು. ಪ್ರವಾಸ ಸಾಹಿತ್ಯದ ವೈಶಿಷ್ಟ್ಯತೆಗಳ ಕುರಿತು ಡಾ. ಜಯದೇವಿ ಪ್ರತಿಪಾದಿಸಿದ್ದಾರೆ. ಅಲ್ಲದೇ ನಾಗತಿಹಳ್ಳಿಯವರ ಅಂಕಣ ಸಾಹಿತ್ಯ, ಇವರ ಕಥೆಗಳಲ್ಲಿ ಬರುವ ಹೆಂಗರುಳಿನ ಆಶಯಗಳು ಈ ಕೃತಿಯ ವಿವಿಧ ಲೇಖನಗಳಲ್ಲಿ ಅಡಕವಾಗಿವೆ.

ನಾಗತಿಹಳ್ಳಿಯುವರು ಸಾಹಿತಿ, ನಿರ್ದೇಶಕ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿ ಮಾಡಿದ ಸಾಧನೆಗಳ ಮಾಹಿತಿಯನ್ನು ಹನ್ನೊಂದು ಮತ್ತು ಹನ್ನೆರಡನೆ ಲೇಖನದಲ್ಲಿ ದಾಖಲಿಸಿದ್ದಾರೆ.

ಹೀಗೆ ನಾಗತಿಹಳ್ಳಿಯುವರ ಜೀವನ ಮತ್ತು ಸಾಧನೆಯ ವಿವರಗಳನ್ನು ಪೋಲಿಸ್ ಪಾಟೀಲರು, ಶರಣಪ್ಪ ಆನೆಹೊಸೂರು ಅವರೊಂದಿಗೆ ಸೇರಿ ಸಂಪಾದಿಸಿ ಒಂದು ಒಳ್ಳೆಯ ಕೃತಿಯನ್ನು ಓದುಗರಿಗೆ ನೀಡಿದ್ದಾರೆ.

ನಡುಗನ್ನಡ ಸಾಹಿತ್ಯ ಸಂಗ್ರಹ:

ಗುಲಬರ್ಗಾ ವಿಶ್ವವಿದ್ಯಾಲಯುದ ಪದವಿ ತರಗತಿಗಳಿಗೆ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೊಳಿಸಿದ ನಂತರ, ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯ ತಜ್ಞರಿಂದ ಆಯಾ ವರ್ಗಗಳಿಗಾಗಿ ಪಠ್ಯಗಳನ್ನು ಸಂಪಾದಿಸಿಕೊಡುವ ಕಾರ್ಯ ಸೂಚಿಸಲಾಯಿತು. ಈ ಕಾರಣಕ್ಕಾಗಿ ಡಾ.

ಬಸವರಾಜ ಪೋಲಿಸ್ ಪಾಟೀಲರು, ಡಾ. ಶಿವಗಂಗಾ ರುಮ್ಮಾ ಅವರೊಂದಿಗೆ ಸೇರಿ ಬಿ.ಎಸ್‌ಸಿ. ತೃತೀಯ ಸೆಮಿಸ್ಟರ್‌ದ ವಿದ್ಯಾರ್ಥಿಗಳಿಗೋಸ್ಕರವಾಗಿ ಈ "ನಡುಗನ್ನಡ ಸಾಹಿತ್ಯ ಸಂಗ್ರಹ" ಎನ್ನುವ ಪುಸ್ತಕವನ್ನು ಸಂಪಾದಿಸಿದ್ದಾರೆ. ತಜ್ಞರಿಂದ ಪರಿಶೀಲನೆಯಾದ ನಂತರ ಈ ಪಠ್ಯವನ್ನು ಗುಲಬರ್ಗಾ ವಿಶ್ವವಿದ್ಯಾಲಯ ಪ್ರಸಾರಾಂಗವು ಪ್ರಕಟಿಸಿ ಹೊರತಂದಿದೆ. ಬೆಂಗಳೂರಿನ ಇಳಾ ಮುದ್ರಣವು ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ "ಡಾ. ಬಿ.ಜಿ. ಮೂಲಿಮನಿ" ಯವರು ಈ ಪುಸ್ತಕಕ್ಕೆ ಮುನ್ನುಡಿ ಬರೆದಿದ್ದಾರೆ. ಹಾಗೂ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ "ಡಾ. ಟಿ.ಎಂ. ಭಾಸ್ಕರ್" ಅವರು ನಿರ್ದೇಶಕರ ನುಡಿಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ವಚನ ಸಾಹಿತ್ಯ, ತ್ರಿಪದಿ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯ ಹೊಸಗನ್ನಡ ಸಾಹಿತ್ಯದ ಮೂರು ಪ್ರಮುಖ ಪ್ರಕಾರಗಳು, ಜನಸಾಮಾನ್ಯರ ದೃಷ್ಟಿ-ಸೃಷ್ಟಿಗಳೇ ಇವುಗಳಿಗೆಲ್ಲ ಮುಖ್ಯ ಪ್ರೇರಕಗಳು, ಭಾಷೆಯಲ್ಲಿ ಸರಳತನ, ಛಂದಸ್ಸಿನಲ್ಲಿ ವಿನೂತನ ಈ ಪ್ರಕಾರಗಳ ವೈಶಿಷ್ಟ್ಯಗಳು ಇಂಥ ವೈಶಿಷ್ಟ್ಯಪೂರ್ಣವಾದ "ಹೊಸಗನ್ನಡ ಸಾಹಿತ್ಯ ಸುಗ್ರಹ" ಎನ್ನುವ ಪಠ್ಯವನ್ನು ಗುಲಬರ್ಗಾ ವಿಶ್ವವಿದ್ಯಾಲಯ ಬಿ.ಎಸ್‌ಸಿ. ತೃತೀಯ ಸೆಮಿಸ್ಟರ್‌ಗೆ ನೇಮಕ ಮಾಡಲಾಗಿದೆ"[೧].

ವಚನ, ತ್ರಿಪದಿ ಮತ್ತು ಕೀರ್ತನ ಸಾಹಿತ್ಯ ಕುರಿತಾದ ಈ ಸಂಕಲನ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ವಾಚಕರಿಗೆ ತುಂಬ ಉಪಯುಕ್ತವಾಗಬಲ್ಲ ಪುಸ್ತಕ.

ಡಾ. ಬಸವರಾಜ ಪೋಲಿಸ್ ಪಾಟೀಲರು ಈ ನಡುಗನ್ನಡ ಸಾಹಿತ್ಯ ಸಂಗ್ರಹ ಪುಸ್ತಕ ಪ್ರಸ್ತಾವನೆಯಲ್ಲಿ ವಚನ, ಕೀರ್ತನೆ, ತ್ರಿಪದಿಗಳ ಅರ್ಥ, ಸ್ವರೂಪ, ಲಕ್ಷಣ ಮತ್ತು ಇವುಗಳ ವಸ್ತು, ಭಾಷೆ, ವಿಡಂಬನೆ ಹಾಗೂ ವಚನ, ಕೀರ್ತನೆಗಳು ಇಂದಿನ ಸಮಾಜಕ್ಕೂ ಯಾವ ರೀತಿ ಪ್ರಸ್ತುವಾಗಿ ನಿಲ್ಲುತ್ತವೆ ಎಂಬ ಅನೇಕ ಅಂಶಗಳನ್ನು ದಾಖಲಿಸಿದ್ದಾರೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ನಡುಗನ್ನಡ ಸಾಹಿತ್ಯ ಸಂಗ್ರಹ- ಸಂಪಾದಕ ನುಡಿಯಿಂದ.

ಡಾ. ಪಾಟೀಲರು ಈ ಪುಸ್ತಕವನ್ನು ಮೂರು ಭಾಗಗಳಲ್ಲಿ ಪರಿಚಯಿಸಿಕೊಟ್ಟಿದ್ದಾರೆ. ಭಾಗ ಒಂದರಲ್ಲಿ ವಚನಗಳು, ಭಾಗ ಎರಡರಲ್ಲಿ ಕೀರ್ತನೆಗಳು, ಭಾಗ ಮೂರರಲ್ಲಿ ವಚನಗಳು, ಭಾಗ ಎರಡರಲ್ಲಿ ಕೀರ್ತನೆಗಳು, ಭಾಗ ಮೂರರಲ್ಲಿ ತ್ರಿಪದಿಗಳನ್ನು ದಾಖಲಿಸಿದ್ದಾರೆ.

ಶರಣರವಾಣಿ, ಲಿಂಗಸಮಾನತೆ, ಕರ್ಮಸಿದ್ಧಾಂತ, ನಡೆ-ನುಡಿ, ಕಾಯಕ ಮುಂತಾದ ಹದಿನಾರು ಶೀರ್ಷಿಕೆಗಳಡಿಯಲ್ಲಿ ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಅಲ್ಲಮ, ಹಡಪದ ಅಪ್ಪಣ್ಣ ಮೊದಲಾದ ಶಿವಶರಣರ ವಚನಗಳನ್ನು ದಾಖಲಿಸಿದ್ದಾರೆ.

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನುದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎನಗೆ ನಮ್ಮ ಕೂಡಲಸಂಗಮದೇವರ ನೆನವುದೆ ಚಿಂತೆ"[೧].

– ಬಸವಣ್ಣ

"ಅನ್ನವನಿಕ್ಕಿ ನನ್ನಿಯ ನುಡಿದು
ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದಡೆ
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಜವು ಸಾಧ್ಯವಾಗದು
ಗುಹೇಶ್ವರರಿಂದ ಶರಣಂಗೆ ಆವ ಫಲವೂ ಇಲ್ಲ"[೨].

– ಅಲ್ಲಮ

ದಾಸರು ಬರೆದಂಥ ದೇವತಾ ಸ್ತುತಿ, ಕೃಷ್ಣಲೀಲೆ, ಭಕ್ತಿಭಾವ, ಆತ್ಮ ನಿವೇದನೆ, ಲೋಕನೀತಿ ವಿಡಂಬನೆ, ಕುರಿತಾದ ಅನೇಕ ಕೀರ್ತನೆಗಳು ಈ ಪುಸ್ತಕದ ಭಾಗ ಎರಡರಲ್ಲಿ ಪಾಟೀಲರು ಅಚ್ಚುಕಟ್ಟಾಗಿ ದಾಖಲಿಸಿದ್ದಾರೆ.

"ಕರದಲಿ ಜಪಮಣಿ ಬಾಯಲಿ ಮಂತ್ರವು
ಅರಿವೆಯ ಮುಸುಕನು ಮೋರೆಗೆ ಹಾಕಿ
ಪರಸತಿಯರ ರೂಪ ಮನದಲಿ ಗುಣಿಸುತ
ಪರಮ ವೈರಾಗ್ಯಶಾಲಿಯೆನಿಸುವುದು"[೩].

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ನಡುಗನ್ನಡ ಸಾಹಿತ್ಯ ಸಂಗ್ರಹ-೨೦೦೭ ಪುಟ-೧೪.
೨. ಡಾ. ಬಸವರಾಜ ಪೋಲಿಸ್ ಪಾಟೀಲ-ನಡುಗನ್ನಡ ಸಾಹಿತ್ಯ ಸಂಗ್ರಹ-೨೦೦೭ ಪುಟ-೫೦.
೩. ಡಾ. ಬಸವರಾಜ ಪೋಲಿಸ್ ಪಾಟೀಲ-ನಡುಗನ್ನಡ ಸಾಹಿತ್ಯ ಸಂಗ್ರಹ-೨೦೦೭ ಪುಟ-೯೪.

ಈ ನಡುಗನ್ನಡ ಸಾಹಿತ್ಯ ಸಂಗ್ರಹ ಪುಸ್ತಕದ ಭಾಗ ಮೂರರಲ್ಲಿ ಸರ್ವಜ್ಞನ ಬರೆದ ಪ್ರಾರ್ಥನೆ, ಜ್ಞಾನ, ಹೆಣ್ಣು, ಲೋಕನೀತಿ, ದಾಂಪತ್ಯ, ಮೊದಲಾದ ವಿಷಯ ಕುರಿತಾದ ತ್ರಿಪದಿಗಳು ದಾಖಲಿಸಿದ್ದಾರೆ.

"ಹೆಣ್ಣಿನಿಂದಲೆ ಇಹವು । ಹೆಣ್ಣಿನಿಂದಲೆ ಪರವು
ಹೆಣ್ಣಿನಿಂದಲೆ ಸಕಲ ಸಂಪದವು । ಹೆಣ್ಣೊಲ್ಲ
ದಣ್ಣಗಳು ಯಾರು? ಸರ್ವಜ್ಞ॥"[೧].

ಡಾ. ಪಾಟೀಲರು ಈ ಪುಸ್ತಕದ ಅನುಬಂಧದಲ್ಲಿ ಶಿವಶರಣರ, ದಾಸರ ಪರಿಚಯ ಹಾಗೂ ಕಠಿಣ ಪದಕೋಶ ಸಂಪಾದಿಸಿ ಕೊಟ್ಟಿದ್ದಾರೆ. ಹೀಗೆ ಈ "ನಡುಗನ್ನಡ ಸಾಹಿತ್ಯ ಸಂಗ್ರಹ" ಪುಸ್ತಕವು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ವಚನ, ತ್ರಿಪದಿ, ಕೀರ್ತನೆಗಳನ್ನು ಅಧ್ಯಯನ ಮಾಡಬಯಸುವ ಪ್ರತಿಯೊಬ್ಬರಿಗೂ ಉಪಯುಕ್ತವಾಗುವ ಪುಸ್ತಕವಾಗಿ ಸಂಪಾದಿತವಾಗಿದೆ.

ಜನಪದ ಸಾಹಿತ್ಯ: ಶರಣರು:

ಡಾ. ಬಸವರಾಜ ಪೋಲಿಸ್ ಪಾಟೀಲರು ಸಂಪಾದಿಸಿದ ಈ "ಜನಪದ ಸಾಹಿತ್ಯ: ಶರಣರು" ಎಂಬ ಕೃತಿಯ ಜನಪದ ಸಾಹಿತ್ಯ ಮತ್ತು ಶರಣರನ್ನು ಕುರಿತು ಹೊಸ ದೃಷ್ಟಿಕೋನ ಇಟ್ಟುಕೊಂಡು ನೋಡಿದ ಸಂಗ್ರಹವಾಗಿದೆ. ಜನಪದ ಸಾಹಿತ್ಯದಲ್ಲಿ ಪ್ರಕಟವಾಗಿರುವ ಶರಣರನ್ನು ಕುರಿತ ಹೊಸ ಚಿಂತನಾ ಕ್ರಮ ಈ ಕೃತಿಯಲ್ಲಿದೆ. ಅವರು ಇಲ್ಲಿ ಆಯ್ದುಕೊಂಡ ಲೇಖನಗಳನ್ನು ಗಮನಿಸಿದಾಗ ಅವರಲ್ಲಿರುವ ಜನಪರ ಕಾಳಜಿ ಸ್ಪಷ್ಟವಾಗುತ್ತದೆ.

ಈ ಕೃತಿಯಲ್ಲಿ ಒಟ್ಟು ಹದಿನೈದು ಲೇಖನಗಳಿದ್ದು, ಅವು ಅನೇಕ ಒಳನೋಟಗಳಿಂದ ಕೂಡಿಕೊಂಡಿವೆ. ಮೊದಲನೇ ಲೇಖನದಲ್ಲಿ ಪೋಲಿಸ್ ಪಾಟೀಲರು ಜನಪದ ಸಾಹಿತ್ಯ ಮತ್ತು ವಚನ ಸಾಹಿತ್ಯಗಳು ಯಾವ ರೀತಿ ಸಾಮ್ಯತೆ ಹೊಂದಿವೆ ಎಂಬ ಅಂಶಗಳನ್ನು ಎತ್ತಿತೋರಿಸಿದ್ದಾರೆ. ಶರಣರ ಆಶಯ ಅಭಿವ್ಯಕ್ತಿಯೂ ಜನಸಾಮಾನ್ಯರ ಬದುಕನ್ನೇ ಕುರಿತದ್ದಾಗಿರುತ್ತದೆ ಎಂದು ಹೇಳುವಲ್ಲಿ ಕೆಲವು ವಚನಗಳನ್ನು ಉದಾಹರಣೆಯಾಗಿ ನೀಡಿದ್ದಾರೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ನಡುಗನ್ನಡ ಸಾಹಿತ್ಯ ಸಂಗ್ರಹ-೨೦೦೭ ಪುಟ-೧೦೪.

"ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಸೂಸುವ ಗಾಳಿ ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೆಂಬೆ ಕಾಣಾ ರಾಮನಾಥ"[೧].

ಜೇಡರ ದಾಸಿಮಯ್ಯ

"ಹಾಲುಂಡ ತವರಿಗೆ ಏನೆಂದು ಹಾಡಲಿ
ಹೊಳೆದಂಡೆಲಿರುವ ಕರಕಿಯ ಕುಡಿಹಂಗ
ಹಬ್ಬಲಿ ಅವರ ರಸ ಬಳ್ಳಿ"[೨].

ಹೀಗೆ ಉಪಕಾರ ಸ್ಮರಣೆಯ ವಿಷಯದಲ್ಲಿ ಜನಪದರು ಮತ್ತು ಶರಣರದು ಸಮಾನ ದೃಷ್ಟಿಕೋನವಿದೆ ಎಂದು ಹೇಳುವಲ್ಲಿ ಪಾಟೀಲರು ಇಂಥ ಕೆಲವು ವಚನ ಮತ್ತು ಜನಪದ ತ್ರಿಪದಗಳನ್ನು ಈ ಮೊದಲನೆ ಲೇಖನದಲ್ಲಿ ದಾಖಲಿಸಿದ್ದಾರೆ.

ಈ ಕೃತಿಯ ಇತರ ಲೇಖನಗಳು "ಜಾನಪದದಲ್ಲಿ ಶರಣರ ಪ್ರತಿಮೆಗಳು", "ಜಾನಪದ ಹಬ್ಬಗಳಲ್ಲಿ ಶಿವಶರಣರು", "ಪ್ರಭುದೇವರ ಯಕ್ಷಗಾನ", "ಬಸವಣ್ಣನವರ ಕುರಿತ ಜನಪದರ ಭಕ್ತಿ-ಭಾವ", ನೀಲಾಂಬಿಕೆ-ಗಂಗಾಂಬಿಕೆ ಮತ್ತು ಜನಪದ ಸಂಪ್ರದಾಯಗಳು ಇಂಥ ಹಲವು ವಿಷಯಗಳು ದಾಖಲಾಗಿವೆ.

"ಮಲ್ಲಿಗಿ ಇರುವಾಗ ಮುಳ್ಯಾಕೆ ಮುಡಿಯುವೆ
ಕಲ್ಯಾಣದಾಗ ಬಸವಯ್ಯ । ಇರುವಾಗ
ಕಲ್ಲಿಗ್ಯಾಕ ಕೈಯ ಮುಗಿಯುವೆ।"[೩].

ಈ ಬಗೆಯ ಭಕ್ತಿಭಾವ ತುಂಬಿದ ನೂರಾರು ಹಾಡುಗಳನ್ನು ತಮಗೆ ಅರಿವಿಲ್ಲದೆ ಬಸವಯ್ಯರನ್ನು ಕುರಿತು ರಚಿಸಿ, ಹಾಡಿ ಪುಣ್ಯಕಟ್ಟಿಕೊಂಡವರು ನಮ್ಮ ಶುದ್ಧ ಜನಪದರು.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜನಪದ ಸಾಹಿತ್ಯ: ಶರಣರು-೨೦೦೮ ಪುಟ-೬.
೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜನಪದ ಸಾಹಿತ್ಯ: ಶರಣರು-೨೦೦೮ ಪುಟ-೫.
೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜನಪದ ಸಾಹಿತ್ಯ: ಶರಣರು-೨೦೦೮ ಪುಟ-೪೫.

ಈ ಕೃತಿಯ ಆರನೇ ಲೇಖನದಲ್ಲಿ ಮುಖ್ಯವಾಗಿ ನೀಲಾಂಬಿಕೆ, ಗಂಗಾಂಬಿಕೆಯರು ನಮ್ಮ ಕನ್ನಡ ನಾಡಿನ ಜನಪದರ ಬದುಕಿನಲ್ಲಿ ಪಡೆದ ಸ್ಥಾನ. ಜನಪದರು ಅವರನ್ನು ಸ್ವೀಕರಿಸಿದ ಬಗೆ ಕುರಿತು ಚರ್ಚಿಸಲಾಗಿದೆ.

"ಕಲ್ಯಾಣದಲ್ಲಿ ಭಕ್ತರಿಗೆ ನೀಲಾಂಬಿಕೆ ಮಾಡಿದ್ದು ಅನ್ನದಾನ
ನಮ್ಮ ತಂದೆಯುವರು ನಮ್ಮವರಿಗೆ ಮಾಡಿದ್ದು ಕನ್ಯಾದಾನ"[1].

ಇಂಥ ಅನೇಕ ಒಡಪುಗಳನ್ನು ಹೇಳುವಾಗ ಜನಪದ ಹೆಣ್ಣು ಮಕ್ಕಳು ಈ ಇಬ್ಬರು ಶಿವರಣೆಯರ ಭಾವ ಚಿತ್ರಿಸಿಕೊಳ್ಳುವುದು ಕಾಣಬಹುದು. ಇಷ್ಟೇ ಅಲ್ಲದೇ ಈ ಕೃತಿಯ ಉಳಿದ ಲೇಖನಗಳಲ್ಲಿ ವ್ಯಕ್ತವಾದ ವಿಷಯಗಳೆಂದರೆ, "ಅಕ್ಕ ಮಹಾದೇವಿ ವಚನಗಳಲ್ಲಿ ಜಾನಪದೀಯ ಅಂಶಗಳು", "ಜನಪದ ಸಾಹಿತ್ಯದಲ್ಲಿ ಸಿದ್ಧರಾಮ", "ಅಂಬಿಗರ ಚೌಡಯ್ಯ ಮತ್ತು ಜನಪದ ನುಡಿಗಟ್ಟುಗಳು", "ಬಹುರೂಪಿ ಚೌಡಯ್ಯ ಮತ್ತು ಜನಪದ ಕಲೆಗಳು", ಸಮಗಾರ ಹರಳಯ್ಯ ಮತ್ತು ಜನಪದ ವೃತ್ತಿ ಕುರಿತಾದ-ಅಂಶಗಳನ್ನು ಪಾಟೀಲರು ಅಚ್ಚುಕಟ್ಟಾಗಿ ದಾಖಲಿಸಿದ್ದಾರೆ.

ಒಟ್ಟಿನಲ್ಲಿ ಡಾ. ಪಾಟೀಲರು ೨೦೦೮ ರಲ್ಲಿ ಸಂಪಾದಿಸಿದ ಈ "ಜನಪದ ಸಾಹಿತ್ಯ: ಶರಣರು" ಎಂಬ ಕೃತಿಯಲ್ಲಿ ಜನಪದರ, ಮತ್ತು ಶರಣರ ಸಮಾನ ದೃಷ್ಟಿಕೋನ, ಮತ್ತು ಜನಪದ ಸಾಹಿತ್ಯ ಹಾಗೂ ವಚನ ಸಾಹಿತ್ಯದ ನಡುವಿನ ಅವಿನಾಭವ ಸಂಬಂಧ. ಹೀಗೆ ಅನೇಕ ವಿಷಯಗಳನ್ನು ವಿವಿಧ ಲೇಖಕರ ಲೇಖನಗಳ ಮುಖಾಂತರ ತಿಳಿಸಲು ಪ್ರಯತ್ನಿಸಿದ್ದಾರೆ. ಜನಪದರ ಹೃದಯವಂತಿಕೆ, ಶರಣರ ವೈಚಾರಿಕತೆ ಈ ಲೇಖನಗಳಲ್ಲಿ ಕೂಡಿಕೊಂಡಿರುವುದನ್ನು ಗಮನಿಸಬಹುದು.

ಹೀಗೆ ಡಾ. ಬಸವರಾಜ ಪೋಲಿಸ್ ಪಾಟೀಲ ಆಸಕ್ತಿ ಹಾಗೂ ಒಂದು ಕ್ಷೇತ್ರದಲ್ಲಿನ ದುಡಿಮೆಗೊಂಡ ಫಲವಾಗಿ ಹತ್ತು ಹಲವು ಆಶಯಗಳನ್ನು ಬಿತ್ತರಗೊಳಿಸುವ ಕಾರ್ಯ ಕೈಗೊಂಡಿದ್ದಾರೆ. ಅವರು ಸಂಪಾದಿಸಿದ ಈ ಎಲ್ಲಾ ಕೃತಿಗಳು ಒಂದಿಲ್ಲೊಂದು ಹಂತದಲ್ಲಿ ಆಕರಗ್ರಂಥವಾಗಿ ವಿದ್ವಾಂಸರ ಗಮನ ಸೆಳೆದ ಕೃತಿಗಳಾಗಿವೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಜನಪದ ಸಾಹಿತ್ಯ: ಶರಣರು-೨೦೦೮ ಪುಟ-೪೮.

ಜೀವನ ಚರಿತ್ರೆ:

ಜೀವನ ಚರಿತ್ರೆ ಎಂದರೆ "ನಿರ್ದಿಷ್ಟ ವ್ಯಕ್ತಿಗಳ ಬದುಕಿನ ಚರಿತ್ರೆ" ಎಂದು ೧೬೮೩ ರಲ್ಲಿ ಟ್ರೈಡನ ಹೇಳಿದ್ದಾರೆ. ಆಕ್ಸ್‌ಫರ್ಡ್ ಡಿಕ್ಸನರಿಯಲ್ಲಿ "ವ್ಯಕ್ತಿಗಳ ಬದುಕಿನ ಸಾಹಿತ್ಯಾತ್ಮಕ ಚಾರಿತ್ರಿಕ ಕಥನವೇ ಜೀವನ ಚರಿತ್ರೆ", ಎಂದು ಹೇಳಿದೆ. ಜೀವನ ಚರಿತ್ರೆಯು ಮೂರು ಅವಶ್ಯಕ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಅವು "ಇತಿಹಾಸ" "ವ್ಯಕ್ತಿ, ಮತ್ತು "ಸಾಹಿತ್ಯ" ಅದು ಸತ್ಯ ನಿಷ್ಠ ವರದಿಯಾಗಿರಲೇಬೇಕು. ಜೀವನ ಚರಿತ್ರೆಯು ಆ ವ್ಯಕ್ತಿಯ ಬಾಹ್ಯ ಮತ್ತು ಆಂತರಿಕ ಎರಡರ ಸಮಗ್ರತೆಯನ್ನು ಸತ್ಯನಿಷ್ಠೆಯಿಂದ ಚಿತ್ರಿಸುತ್ತದೆ. ಜೀವನ ಚರಿತ್ರೆ ಎಂದರೆ ಪ್ರಶಂಸೆಯು ಅಲ್ಲ, ಭರ್ತ್ಸನೆಯು ಅಲ್ಲ, ಅದು ತಾನು ಆರಿಸಿಕೊಂಡ ವ್ಯಕ್ತಿಯ ಪ್ರಾಮಾಣೀಕ ಚಿತ್ರವಾಗಿರಬೇಕು.

ಡಾ. ಪಾಟೀಲರು ಬರೆದ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಕುರಿತು ಈ ಕೆಳಗೆ ವಿಶ್ಲೇಷಿಸಲಾಗಿದೆ.

- ಕಲಬುರ್ಗಿಯ ಶ್ರೀ ಶರಣಬಸವೇಶ್ವರ
- ಶಿಕ್ಷಣ ಶಿಲ್ಪಿ ಮಹಾದೇವಪ್ಪಾ ರಾಂಪುರೆ
- ಸಂಸ್ಕೃತಿಶೀಲರು

ಕಲಬುರ್ಗಿಯ ಶ್ರೀ ಶರಣಬಸವೇಶ್ವರ:

ಡಾ. ಪಾಟೀಲರ ಸಾಹಿತ್ಯ ರಚನೆ ಆರಂಭವಾದದ್ದೆ ಈ ಕೃತಿಯಿಂದ. ಇದು ಅವರು ರಚಿಸಿದ ಮೊಟ್ಟ ಮೊದಲ ಕೃತಿ. ಕಾಯಕ ಜೀವಿ, ಪವಾಡ ಪುರುಷ, ಮಹಾದಾಸೋಹಿಯಾದ, ಕಲಬುರ್ಗಿಯ ಶ್ರೀ ಶರಣಬಸವೇಶ್ವರರ ಜೀವನ ಕುರಿತು ಡಾ. ಪಾಟೀಲರು ಅಚ್ಚುಕಟ್ಟಾಗಿ ಈ ಕೃತಿಯಲ್ಲಿ ಮೂಡಿಸಿದ್ದಾನೆ. ಶ್ರೀ ಶರಣಬಸವೇಶ್ವರರ ಸಮಗ್ರ ಜೀವನ, ಅವರು ನಡೆಸಿದ ಪವಾಡಗಳು, ಕಾಯಕನಿಷ್ಠೆ, ದಾಸೋಹ ಭಾವನೆ ಇಂಥ ಅನೇಕ ಮೌಲ್ಯಯುತ ಅಂಶಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿಯೊಬ್ಬನು, "ಜನಪದ ಸಾಹಿತ್ಯದಲ್ಲಿ ಮಹಾದಾಸೋಹ ಶ್ರೀ ಶರಣಬಸವೇಶ್ವರ" ಎನ್ನುವ ವಿಷಯದ ಬಗ್ಗೆ ಸಂಶೋಧನಾ ಅಧ್ಯಯನವನ್ನು ಡಾ. ಪಾಟೀಲರ

ಮಾರ್ಗದರ್ಶನದಲ್ಲೆ ಕೈಗೊಂಡಿದ್ದಾನೆ. ಮುಂದಿನ ದಿನಗಳಲ್ಲಿ ಇದನ್ನು ಒಂದು ಮಹಾಕಾವ್ಯವಾಗಿಸುವುದು ಡಾ. ಪಾಟೀಲರ ಪ್ರಯತ್ನವಾಗಿದೆ.

ಶಿಕ್ಷಣ ಶಿಲ್ಪಿ ಮಹಾದೇವಪ್ಪಾ ರಾಂಪುರೆ:

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅಕ್ಷರಕ್ರಾಂತಿಯ ಹರಿಕಾರರಾಗಿ ಅಪೂರ್ವ ಕೆಲಸ ಮಾಡಿದ ಮಹಾದೇವಪ್ಪಾ ರಾಂಪುರೆಯವರ ಜೀವನ ಚರಿತ್ರೆಯನ್ನು ಪಾಟೀಲರು ಅಚ್ಚುಕಟ್ಟಾಗಿ ಈ ಕೃತಿಯಲ್ಲಿ ಮೂಡಿಸಿದ್ದಾರೆ. ರಾಂಪುರೆಯವರು ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ತಾಂತ್ರಿಕ, ವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ಥಾಪಿಸುವುದುರ ಮೂಲಕ ವೈಜ್ಞಾನಿಕ ಮನೋಭಾವನೆಯನ್ನು ಜನರಲ್ಲಿ ಸ್ಥಿರಿಸಲು ಕಾರಣರಾಗಿದ್ದಾರೆ. ಇಂಥ ಮಹಾನ್ ಶಿಕ್ಷಣ ಪ್ರೇಮಿ, ಸಮಾಜ ಪ್ರೇಮಿಯ ಜೀವನ ಹಾಗೂ ಸಾಧನೆಯ ಸಮಗ್ರ ವಿವರಗಳು ಈ ಕೃತಿಯಲ್ಲಿ ಅಡಕವಾಗಿವೆ. ರಾಂಪುರೆಯವರ ಬಹುಮುಖ ಪ್ರತಿಭೆಯ ವೈವಿದ್ಯಮಯ ಜೀವನ ಚರಿತ್ರೆಯನ್ನು ಪಾಟೀಲರು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ಈ ಕೃತಿಯಲ್ಲಿ ಪಾಟೀಲರು ೭ ಅಧ್ಯಾಯಗಳ ಮೂಲಕ ರಾಂಪುರೆಯವರ ಜೀವನದ ಸಮಗ್ರ ಚಿತ್ರಣವನ್ನು ಓದುಗರ ಮುಂದೆ ಇಟ್ಟಿದ್ದಾರೆ. ಆರಂಭದ ಅಧ್ಯಾಯದಲ್ಲಿ ಹೈದ್ರಾಬಾದ ಕರ್ನಾಟಕದ ಐತಿಹಾಸಿಕ, ಸಾಹಿತ್ಯಿಕ ಮತ್ತು ಭೌಗೋಳಿಕ ಹಿನ್ನೆಲೆಯಲ್ಲಿ ಚಿತ್ರಣ ನೀಡಿದ್ದಾರೆ. ನಂತರ ಅಧ್ಯಾಯ ೨ ರಲ್ಲಿ ಕುಂಬಾರಿಯಿಂದ ಕಲಬುರ್ಗಿಗೆ ಬಂದ ರಾಂಪುರೆಯವರ ಜನನ, ಶಿಕ್ಷಣ, ಅವರ ರಾಜಕೀಯ ಗುರುವಾದ ಎಂ.ಎನ್. ರಾಯ್ ಅವರ ಪ್ರಭಾವ ಹಾಗೂ ರಾಂಪುರೆಯವರ ಕರ್ಮಸ್ಥಳವಾದ ಕಲಬುರ್ಗಿಯ ಕುರಿತಾಗಿ ಸಮಗ್ರ ವಿವರಗಳನ್ನು ಪಾಟೀಲರು ಮನಮುಟ್ಟುವಂತೆ ದಾಖಲಿಸಿದ್ದಾರೆ.

ಸೋಲಿಲ್ಲದ ಸರದಾರ ಎನ್ನುವ ೩ ನೇ ಅಧ್ಯಾಯದಲ್ಲಿ ರಾಂಪುರೆಯವರ ಸಂಪೂರ್ಣ ರಾಜಕೀಯ ಜೀವನ, ರಾಜಕೀಯ ಪ್ರವೇಶ, ಲೋಕಸಭಾ ಸದಸ್ಯರಾಗಿ ಮಾಡಿದ ಸಾಧನೆಗಳು ಹಾಗೂ ರಾಂಪುರೆಯವರ ಸೋಲಿನಲ್ಲೂ ಕಂಡ ಗೆಲುವಿನ ತೃಪ್ತಿ ಈ ಎಲ್ಲಾ ಅಂಶಗಳನ್ನು ಪಾಟೀಲರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಅಧ್ಯಾಯ ೪ ರಲ್ಲಿ ಎಚ್.ಕೆ.ಇ. ಸಂಸ್ಥೆಯ , ಉದಯ ಬೆಳವಣಿಗೆ ಹಾಗೂ ಈ ಸಂಸ್ಥೆಯ ಅಧೀನದಲ್ಲಿ ಆರಂಭವಾದ ತಾಂತ್ರಿಕ, ಕಾನೂನು,

ವೈದ್ಯಕೀಯ, ಮಹಿಳಾ ವಿದ್ಯಾಲಯಗಳು ಮಾಡಿದ ಸಾಧನೆಯ ಸಮಗ್ರ ಮಾಹಿತಿಯನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ರಾಂಪುರೆಯವರ ಬದುಕಿನ ಸಂತೃಪ್ತಿ ಕುರಿತು ೫ ನೇ ಅಧ್ಯಾಯದಲ್ಲಿ ಅವರ ದಿನಚರಿ, ಕೌಟುಂಬಿಕ ಬದುಕು, ವಂಶಾವಳಿ ಹಾಗೂ ರಾಂಪುರೆಯವರ ವ್ಯಕ್ತಿತ್ವದ ಕುರಿತಾಗಿ ಎಲ್ಲಾ ಅಂಶಗಳನ್ನು ಫೋಟೋ ಸಮೇತವಾಗಿ ಸುಂದರವಾಗಿ ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಈ ಕೃತಿಯ ಕೊನೆಯ ಭಾಗವಾದ ಅನುಬಂಧದಲ್ಲಿ ರಾಂಪುರೆಯವರ ಕುರಿತು ರಚನೆಯಾದ ಕೆಲವು ಹಾಡುಗಳನ್ನು ಅಭಿಪ್ರಾಯಗಳನ್ನು ಹಾಗೂ ಅವರು ರಚಿಸಿದ ಸಂಸ್ಥೆಗಳ ಕುರಿತು ಅನೇಕ ಅಂಶಗಳನ್ನು ಅಚ್ಚುಕಟ್ಟಾಗಿ ಹಿಡಿದಿಟ್ಟಿದ್ದಾರೆ.

"ಒಟ್ಟಾರೆಯಾಗಿ ಮಹಾದೇವಪ್ಪ ರಾಂಪುರೆಯವರ ಹುಟ್ಟು, ವಿದ್ಯಾಭ್ಯಾಸ, ಮಹಾರಾಷ್ಟ್ರ ಕುಂಬಾರಿಯಿಂದ ಕಲಬುರ್ಗಿಗೆ ವಲಸೆ ಬರವಿಕೆ, ರಾಜಕೀಯ ಪ್ರವೇಶ, ವಿದೇಶಿ ಪ್ರವಾಸ, ಶಿಕ್ಷಣ ಕ್ಷೇತ್ರದ ಪ್ರವೇಶ ಈ ಮುಂತಾದ ಅಂಶಗಳ ಜೊತೆಗೆ ಅವರ ಕೌಟುಂಬಿಕ ಬದುಕನ್ನು ಕುರಿತು ಡಾ. ಪಾಟೀಲರು ತುಂಬ ಸಂಕ್ಷಿಪ್ತವಾಗಿ ಸರಳವಾಗಿ, ಹಾಗೂ ಅರ್ಥಪೂರ್ಣವಾಗಿ ವಿವರಿಸಿದ್ದಾರೆ"[೧].

ಸಂಸ್ಕೃತಿ ಶೀಲರು:

ಡಾ. ಪಾಟೀಲರು, ದೇಶಕ್ಕಾಗಿ ದೇಹ ಸವೆಸಿದ ಮಹನೀಯರ ಜೀವನ ಚರಿತ್ರೆಯನ್ನು ಮನೋಜ್ಞವಾದ ರೀತಿಯಲ್ಲಿ 'ಸಂಸ್ಕೃತಿಶೀಲರು" ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಕೃತಿಯು ಮಹತ್ವಪೂರ್ಣ ವೈಶಿಷ್ಟ್ಯಪೂರ್ಣವಾದ ಕೃತಿಯಾಗಿ ಹೊರಹೊಮ್ಮಿದೆ. ನಾಡಿನ ಸಂಸ್ಕೃತಿಶೀಲರಲ್ಲಿ ೫ ಮುತ್ತುರತ್ನಗಳೆನಿಸಿದ 'ಹರ್ಡೇಕರ ಮಂಜಪ್ಪ', 'ಡಾ. ಎಸ್. ರಾಧಾಕೃಷ್ಣನ್', 'ಮಾಸಿ', 'ಸರದಾರ ಶರಣಗೌಡ ಇನಾಮದಾರ್', 'ಮಹಾದೇವಪ್ಪ ರಾಂಪುರೆ' ಯವರ ಜೀವನ, ಬದುಕಿನ ರೀತಿಯನ್ನು ಈ ಕಿರುಹೊತ್ತಿಗೆಯಲ್ಲಿ ಅಚ್ಚುಕಟ್ಟಾಗಿ ಅವರ ಜೀವನ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

೧.ಡಾ. ಗವಿಸಿದ್ದಪ್ಪ ಎಚ್. ಪಾಟೀಲ-ಬೆಳ್ಳಿ ದಾಂಪತ್ಯ-೨೦೦೮, ಪು-೬೯.

"ಈ ಮಹಾನ್ ವ್ಯಕ್ತಿಗಳು ಬದುಕಿದ ಸರಳವಾದ ಜೀವನ, ಅವರಲ್ಲಿ ಒಡಮೂಡಿದ ಹೋರಾಟದ ದಿಟ್ಟ ನಿಲುವು, ಶಿಕ್ಷಣ ಪ್ರೇಮ, ಸ್ವಾತಂತ್ರ್ಯದ ಹಂಬಲ, ಸಾಹಿತ್ಯದ ಪರಿಮಳ, ತತ್ವಶಾಸ್ತ್ರದ ಹಿರಿಮೆ, ಹೀಗೆ ಹತ್ತು ಹಲವು ವಿಭಿನ್ನವಾದ ಮೌಲ್ಯಗಳನ್ನು ಡಾ. ಪಾಟೀಲರು ಸಂಸ್ಕೃತಿಶೀಲರು ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ"[9].

ವ್ಯಕ್ತಿ ಚಿತ್ರಗಳು:

ಯಾವುದೇ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಮಹಾನ್ ವ್ಯಕ್ತಿಗಳ ಜೀವನ ಮತ್ತು ಸಾಧನೆಯ ವಿವರಗಳನ್ನು ತಿಳಿಸಿಕೊಂಡುವಂಥವುಗಳೆ ವ್ಯಕ್ತಿ ಚಿತ್ರಗಳು. ಡಾ. ಪಾಟೀಲರು ಬರೆದ ವ್ಯಕ್ತಿ ಚಿತ್ರಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

- ಮಾಸ್ತಿ ವೇಂಕಟೇಶ ಅಯ್ಯಂಗಾರ.
- ಮಹಾದೇವಪ್ಪಾ ರಾಂಪುರೆ
- ಹರಡೇಕರ ಮಂಜಪ್ಪಾ

ಮಾಸ್ತಿ ವೇಂಕಟೇಶ ಅಯ್ಯಂಗಾರ:

"ಕನ್ನಡದ ಆಸ್ತಿ ಮಾಸ್ತಿ"ಯಾಗಿದ್ದಯಾರೆ. 'ಶ್ರೀನಿವಾಸ' ಕಾವ್ಯನಾಮದಿಂದ ಖ್ಯಾತರಾದ ಮಾಸ್ತಿ ವೇಂಕಟೇಶ ಅಯ್ಯಂಗಾರ ಕನ್ನಡ ಸಾಹಿತ್ಯದ ದಿಗ್ಗಜರಲ್ಲೊಬ್ಬರು. ಇವರ ಜೀವನದ ವಿವರಗಳನ್ನು ಡಾ. ಪಾಟೀಲರು ಅಚ್ಚುಕಟ್ಟಾಗಿ ಈ ಪುಸ್ತಕದಲ್ಲಿ ಮೂಡಿದಿದ್ದಾರೆ. ಕಡು ಬಡತನದಲ್ಲಿಯೇ ಬೆಳೆದ ಮಾಸ್ತಿಯವರು ಸ್ನಾತಕೋತ್ತರ ಪದವಿಯನ್ನು ಪಡೆದ ನಂತರ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ನಾಡಿಗೆ ಕೀರ್ತಿ ತರುತ್ತಾರೆ. ಬಾಲ್ಯದಿಂದ ಹಿಡಿದು ಸಿವಿಲ್ ಪರೀಕ್ಷೆ ಪಾಸಾಗಿ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕವಾಗುವವರೆಗಿನ ಅವರ ಕಷ್ಟದ ಜೀವನವನ್ನು ಇಲ್ಲಿ ಸೊಗಸಾಗಿ ಕಟ್ಟಿಕೊಡಲಾಗಿದೆ. ಇವರ ಕೌಟುಂಬಿಕ ಜೀವನ ಮತ್ತು ಸೇವಾಜೀವನದ ಕುರಿತು ಮಾಹಿತಿಯನ್ನು ಈ ಕೃತಿಯಲ್ಲಿ ನೀಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ "ಸಣ್ಣ ಕಥೆಗಳ ಜನಕ" ಎಂದು ಖ್ಯಾತರಾದ ಮಾಸ್ತಿಯವರು ಹಲವಾರು ' ನಾಟಕಗಳನ್ನು, ಕಾವ್ಯಗಳನ್ನು, ವಿಮರ್ಶೆಯನ್ನು ಅನುವಾದ ಸಾಹಿತ್ಯ, ಆತ್ಮಕಥೆ, ಜೀವನ

ಚರಿತ್ರೆಯನ್ನು ಕಟ್ಟಿಕೊಟ್ಟಂತವರು. ಕರ್ನಾಟಕ ಏಕೀಕರಣದಲ್ಲಿ ಪಾಲ್ಗೊಂಡು ಭಾಷಾವಾರು ಪ್ರಾಂತರಚನೆ ವಿರೋಧಿಸಿ ಭಾಷಣ ಮಾಡಿದವರನ್ನು ಏಕೀಕರಣ ವಿರೋಧಿಸಿದವರನ್ನು ಟೀಕಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಅಪಾರವಾದಜ ಸೇವೆಯನ್ನು ಸಲ್ಲಿಸಿದ್ದಾರೆ. ತಾವು ಸಲ್ಲಿಸಿದ ನಾಗರಿಕ ಸೇವೆಗಾಗಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಗೈದ ಸಾಧನೆಗಾಗಿ ಹಲವಾರು ಪ್ರಶಸ್ತಿಗಳು ಇವರ ಮುಡಿಗೇರಿದವು. ಒಟ್ಟಾರೆಯಾಗಿ ಮಾಸ್ತಿಯವರ ಜೀವನ ಚರಿತ್ರೆಯನ್ನು ಇಲ್ಲಿ ಪಾಟೀಲರು ಬಾಲ್ಯ, ಯೌವ್ವನ, ಉದ್ಯೋಗ, ದಾಂಪತ್ಯ, ಸಾಹಿತ್ಯ ಹೀಗೆ ಹಂತ ಹಂತವಾಗಿ ಕಟ್ಟಿಕೊಟ್ಟಿದ್ದಾರೆ''.

ಮಹಾದೇವಪ್ಪಾ ರಾಂಪುರೆ:

ಹೈದ್ರಾಬಾದ ಕರ್ನಾಟಕ ಭಾಗದ ಜನರಿಗೆ ಅಕ್ಷರ ಜ್ಞಾನದ ಸಿಹಿ ಉಣಿಸಿದ ಮಹಾದೇವಪ್ಪಾ ರಾಂಪುರೆಯವರ ಜೀವನವನ್ನು ಕುರಿತು ಪೋಲಿಸ್ ಪಾಟೀಲರು ಮನೋಜ್ಞವಾಗಿ ಇಲ್ಲಿ ಚಿತ್ರಿಸಿದ್ದಾರೆ. ರಾಂಪುರೆಯವರ ಬಾಲ್ಯ ಜೀವನ, ಕೌಟುಂಬಿಕ ಜೀವನ, ರಾಜಕೀಯ ಜೀವನ, ಶೈಕ್ಷಣಿಕ ಜೀವನದ ಕುರಿತಾಗಿ ಮಹತ್ವದ ಅಂಶಗಳನ್ನುಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ರಾಂಪುರೆಯವರು ಕಟ್ಟಿಬೆಳೆಸಿದ ಸಂಸ್ಥೆ, ರಾಜಕೀಯದಲ್ಲಿ ಅವರ ಸೋಲು, ಗೆಲುವಿನ ಕುರಿತಾಗಿ ಸಂಪೂರ್ಣ ಮಾಹಿತಿಯನ್ನು ಪಾಟೀಲರು ಈ ಕೃತಿಯಲ್ಲಿ ನೀಡಲು ಪ್ರಯತ್ನಿಸಿದ್ದಾರೆ. ಹೀಗೆ ಈ ಮಹಾದೇವಪ್ಪಾ ರಾಂಪುರೆಯವರ ಜೀವನ ಕಾರ್ಯಗಳ ಸಮ್ಯಗ್ ಕಥನವನ್ನು ಡಾ. ಬಸವರಾಜ ಪೋಲಿಸ್ ಪಾಟೀಲ ಅವರು ಸೊಗಸಾಗಿ ನಿರೂಪಿಸಿರುವರು.

ಹರ್ಡೇಕರ ಮಂಜಪ್ಪ:

ಡಾ. ಪಾಟೀಲರು ಮಂಜಪ್ಪನವರ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟಂತಹ ರೀತಿಯನ್ನು ನೋಡಿದಾಗ ಇಲ್ಲಿ ಹರ್ಡೇಕರ ಮಂಜಪ್ಪನವರು ತಮ್ಮ ಬಾಲ್ಯದ ಜೀವನದಿಂದ ಹಿಡಿದು ತಮ್ಮ ಕೊನೆಯ ಉಸಿರಿರುವವರೆಗೂ ಸಾಗಿಸಿದ ಹೋರಾಟದ ಜೀವನ ಪ್ರಸ್ತುತ ಸಮಾಜದ ವಿಚಾರವಂತ ಜೀವಿಗಳಿಗೆ ಕೈಗನ್ನಡಿಯಾಗಿದೆ. ಮಂಜಪ್ಪನವರ ಜನನ– ಬಾಲ್ಯ, ಶಿಕ್ಷಣ ಅವರ ಬ್ರಹ್ಮಚರ್ಯ ಜೀವನ, ಮಂಜಪ್ಪನವರ ಮೇಲೆ ಗಾಂಧೀಜಿಯ ಪ್ರಭಾವಗಳನ್ನು ಕುರಿತು ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ.

ಹಾಗೂ ಮಂಜಪ್ಪನವರು ಮಾಡಿದ ಹಳ್ಳಿಗಳ ಸಂಚಾರ, ಆಲಮಟ್ಟಿಯಲ್ಲಿ ಮಾಡಿದ ಆಶ್ರಮ, ಸ್ತ್ರೀ ನೀತಿ ಹಾಗೂ ಮಂಜಪ್ಪನವರ ಕೆಲ ಸೂಕ್ತಿಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಅಭಿನಂದನ ಕೃತಿಗಳು:

ಸಾಮಾಜಿಕ, ಧಾರ್ಮಿಕ, ಸಾಹಿತ್ತಿಕ ಮುಂತಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆ ಸಲ್ಲಿಸಿ ಹೆಸರುವಾಸಿಯಾದ ವ್ಯಕ್ತಿಗಳಿಗೆ ಗೌರವ ಸಲ್ಲಿಸಲಾಗುತ್ತದೆ. ಈ ಅಭಿನಂದನೆ ಸಭೆ, ಸಮಾರಂಭದ ಮೂಲಕವಾಗಿಯೋ ಇಲ್ಲವೆ ಗ್ರಂಥರೂಪದಲ್ಲಿಯೋ ಸಲ್ಲಿಸಲಾಗುವುದು. ಗ್ರಂಥ ಮುಖೇನ ಸಲ್ಲಿಸುವ ಗೌರವಕ್ಕೆ ಅಭಿನಂದನ ಗ್ರಂಥ ಎನ್ನುತ್ತೇವೆ. ಡಾ. ಪಾಟೀಲರು ರಚಿಸಿದಂತಹ ಅಭಿನಂದನ ಗ್ರಂಥಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

- ಭಾಷಾ ಸಂಗಮ.
- ಸಮದರ್ಶಿ
- ಹೇಮ ಸಂಗಮ.

ಭಾಷಾ ಸಂಗಮ:

ಭಾಷಾ ವಿಜ್ಞಾನ ಕ್ಷೇತ್ರದ ವಿದ್ವನ್ಮಣಿಗಳು, ಅಪಾರ ಪ್ರತಿಭೆ, ಪಾಂಡಿತ್ಯಗಳಿಂದ ಕೂಡಿದ ಶ್ರೇಷ್ಠರು ಆದ ಡಾ. ಸಂಗಮೇಶ ಸವದತ್ತಿಮಠ ಅವರ ಷಷ್ಠ್ಯಬ್ಧ ಅಭಿನಂದನ ಕೃತಿಯೆ ಈ ಭಾಷಾಸಂಗ. ಸಾವಿರ ಪುಟಗಳ ಈ ಗ್ರಂಥವನ್ನು ಶ್ರಮವಹಿಸಿ ಸಂಪಾದಿಸಿದ ಸಂಪಾದಕ ಡಾ. ಬಸವರಾಜ ಪೋಲಿಸ್ ಪಾಟೀಲರ ದೃಷ್ಟಿ ಧೋರಣೆ ಇದರಿಂದ ತಿಳಿಯಬಹುದಾಗಿದೆ.

ಡಾ. ಸಂಗಮೇಶ ಸವದತ್ತಿಮಠ ಅವರ ವಿದ್ವತ್ಪೂರ್ಣ ಸೇವೆಯನ್ನು ಗಮನಿಸಿ, ಅವರ ಆತ್ಮೀಯ ಸ್ನೇಹಿತ, ವಿದ್ಯಾರ್ಥಿಗಳು, ಬಂಧು-ಬಾಂಧವರು ಅಭಿಮಾನಿಗಳೆಲ್ಲ ಸೇರಿ ಅಭಿನಂದಿಸಲು ನಿರ್ಧರಿಸಿ ಅವರ ಷಷ್ಠ್ಯಬ್ದಿಯ ಸಂದರ್ಭದಲ್ಲಿ ಈ ಅಭಿನಂದನಾ ಸಂಪುಟ ಹೊರಬಂದಿದೆ. ಈ ಬಾಷಾ ಸಂಗಮ ಸಂಪುಟಕ್ಕೆ ಅನೇಕ ಲೇಖಕರು ಶ್ರಮವಹಿಸಿದ ವಿದ್ವತ್ಪೂರ್ಣ ಲೇಖನಗಳನ್ನು ಬರೆದುಕೊಟ್ಟಿದ್ದಾರೆ.

ಈ ಸಂಪುಟ ಎಂಟು ಭಾಗಗಳಲ್ಲಿ ಹರಡಿಕೊಂಡಿದೆ. ಅವು ಹೀಗಿವೆ.

ಮೊದಲನೆಯ ಭಾಗ	:	ಭಾಷಾ ವಿಜ್ಞಾನ ತಾತ್ವಿಕ ಸಿದ್ಧಾಂ
ಎರಡನೆಯ ಭಾಗ	:	ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ವಿದ್ವಾಂಸರ ಕೊಡುಗೆ.
ಮೂರನೆಯ ಭಾಗ	:	ವಾಗರ್ಥ ಛಂದಸ್ಸು.
ನಾಲ್ಕನೆಯ ಭಾಗ	:	ಸಾಹಿತ್ಯ–ಸಂಸ್ಕೃತಿ–ಧರ್ಮ.
ಐದನೆಯ ಭಾಗ	:	ಡಾ. ಸಂಗಮೇಶ ಸವದತ್ತಿಮಠ ಅವರಕೃತಿ ಮೌಲ್ಯ.
ಆರನೆಯ ಭಾಗ	:	ಡಾ. ಸಂಗಮೇಶ ಸವದತ್ತಿಮಠ ಅವರನ್ನು ನಾನು ಕಂಡಂತೆ.
ಏಳನೆಯ ಭಾಗ	:	ನನ್ನ ನಾನು ಕಂಡಂತೆ.
ಎಂಟನೆಯ ಭಾಗ	:	ಡಾ. ಸಂಗಮೇಶ ಸವದತ್ತಿಮಠ ಅವರ ಸಾಧನೆಯ ಸಮೀಕ್ಷೆ.

ಹೀಗೆ ಅನೇಕ ಲೇಖನಗಳು ಮತ್ತು ಆಕರ್ಷಕ ಭಾವಚಿತ್ರಗಳನ್ನು ಸೇರಿ ಕೃತಿ ಬೃಹದಾಕಾರವಾಗಿ, ವರ್ಣರಂಜಿತ ಮುಖಪುಟದೊಂದಿಗೆ ಹೊರಬಂದಿದೆ.

ಈ ಭಾಷಾ ಸಂಗಮ ಕೃತಿಯಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರು, ಭಾಷಾ ವಿಜ್ಞಾನ, ತಾತ್ವಿಕ ಸೈದ್ಧಾಂತಿಕ ಕುರಿತಾದ ಇಪ್ಪತ್ತು ಲೇಖನಗಳನ್ನು ಒಂದೆಡೆಗೆ ಸೇರಿಸಿದ್ದಾರೆ. ಭಾಷೆಯನ್ನು ಸವಾಲುಗಳು, ಸಮಾಜ, ವರ್ಣನಾತ್ಮಕ, ಐತಿಹಾಸಿಕ, ತೌಲನಿಕ, ಸಾಮಾಜಿಕ, ಕ್ಷೇತ್ರ, ಉಪಭಾಷೆ, ಮಕ್ಕಳಭಾಷೆಗೆ ಸಂಬಂಧಿಸಿದ ಅನೇಕ ಲೇಖನಗಳನ್ನು ನೋಡಬಹುದು.

'ಮಕ್ಕಳ ಭಾಷೆ' ಎಂದರೆ ತಕ್ಷಣ ನೆನಪಾಗುವುದು ಮಕ್ಕಳು ಪುನರುಚ್ಛರಣೆ, ತೊದಲ್ನುಡಿ, ತಪ್ಪುನುಡಿ, ರಾಗಾತ್ಮಕತೆ ಇವೆ ಮೊದಲಾದವು. ಇವು ಯಾರಿಗೆ ತಾನೆ ಆನಂದವನ್ನು ನೀಡಲಾರವು? ಹೀಗೆ ಮಗುವಿನ ಮಹತ್ವ ಕುರಿತಾದ ಕನ್ನಡ ಜನಪದ ತ್ರಿಪದಿಯೊಂದು ಈ ವಿವರಣೆಯನ್ನು ಸ್ಪಷ್ಟಪಡಿಸಿ ಎತ್ತಿ ಹಿಡಿಯುತ್ತದೆ.

“ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳ ಹೊರಗ | ಆಡಿದರ
ಬೀಸಣಕಿ ಗಾಳಿ ಸುಳಿದಾವ|”[೧].

ಇಲ್ಲಿ ಮಗುವಿನ ಉಲ್ಲಾಸಮಯತೆಯನ್ನು ಅದು ಉಲ್ಲಾಸಮಯತೆಯನ್ನು ಗಮನಿಸಬಹುದು.

ಹೀಗೆ ಮಕ್ಕಳ ಭಾಷೆಯ ಜೊತೆಗೆ ಕಲಿಕೆ, ಅನ್ಯಭಾಷಾ ಪದ್ಧತಿ, ಮಾತು ಬರಹ, ಕನ್ನಡ-ಹಿಂದಿ, ದ್ರಾವಿಡ, ಶೈಲಿ, ಖುಕಾರ, ಜನಾಂಗಿಕ ಭಾಷೆ ಮುಂತಾದ ಇಪ್ಪತ್ತು ಲೇಖನಗಳನ್ನು ಆಯಾ ಲೇಖಕರು ಸಮರ್ಥವಾಗಿ ದಾಖಲಿಸಿದ್ದಾರೆ.

ಭಾಷಾ ಶಾಸ್ತ್ರಕ್ಕೆ ಕನ್ನಡ ನಾಡಿನ ಪ್ರಮುಖ ಮೂವತ್ತೂರು ಭಾಷಾ ವಿಜ್ಞಾನಿಗಳ ಸಮಗ್ರ-ಅಧ್ಯಯನ ಜೀವನ ವಿವರಗಳನ್ನು ಆ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳ ನೋಟಗಳನ್ನು, ಡಾ. ಬಸವರಾಜ ಪೋಲಿಸ್ ಪಾಟೀಲರು ವಿಮರ್ಶಾತ್ಮಕವಾಗಿ ಸಮೀಕ್ಷಾತ್ಮಕವಾಗಿ ಈ ಕೃತಿಯಲ್ಲಿ ಸಂಪಾದಿಸಿದ್ದಾರೆ. ಭಾಗ ಮೂರರ ವಾಗಾರ್ಥ-ಛಂದಸ್ಸುಗಳನ್ನೊಳಗೊಂಡ ಭಾಗದಲ್ಲಿ ಐದು ವಿಶೇಷ ಲೇಖನಗಳಿವೆ. ಎರಡು ಛಂದೋವೈಶಿಷ್ಟ್ಯಗಳು ಡಾ. ಟಿ.ವಿ. ವೇಂಕಟಾಚಲಶಾಸ್ತ್ರಿ, ಮಹಾಲಿಂಗ, ಡಾ. ಎಂ. ಚಿದಾನಂದಮೂರ್ತಿ, ಸಿಪಿಕೆ ಅವರ ಶಬ್ದಾರ್ಥ ಸ್ವರೂಪ. ಅಣ್ಣನ ಶಬ್ದ ಕುರಿತ ಸಾ.ಶಿ. ಮರುಳಯ್ಯ, ಛಂದಾ ಚಂದಾ ಶ್ರೀ ನಿಜಗುಣಸ್ವಾಮಿಗಳ ಲೇಖನಗಳು ಸಂಶೋಧನೆಯ ವಿಶಿಷ್ಟ ಲೇಖನಗಳಿವೆ.

ಈ ‘ಭಾಷಾ ಸಂಗಮ’ ಕೃತಿಯ ನಾಲ್ಕನೆಯ ಭಾಗದಲ್ಲಿ ಸಾಹಿತ್ಯ-ಸಂಸ್ಕೃತಿ-ಧರ್ಮ ಕುರಿತಾದ ಇಪ್ಪತ್ತಾರು ಸಂಕೀರ್ಣ ಬರಹಗಳ ವೈವಿಧ್ಯತೆಗಳನ್ನು ಪಾಟೀಲರು ದಾಖಲಿಸಿದ್ದಾರೆ.

“ಗೋತ್ರ ನಾಮವ ಬೆಸಗೊಂಡರೆ
ಮಾತನಾಡದೆ ಸುಮ್ಮನಿದ್ದಿರಿದೇನಯ್ಯ?
ತಲೆಯ ಕುತ್ತಿ, ನೆಲನ ಬರೆಯುತ್ತಿದ್ದಿರಿದೇನಯ್ಯ
ಗೋತ್ರನಾಮ ಮಾದಾರ ಚೆನ್ನಯ್ಯ
ಡೋಹರ ಕಕ್ಕಯ್ಯನೆಂಬುದು ಏನು? ಕೂಡಲ ಸಂಗಮದೇವ”[೨].

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಭಾಷಾ ಸಂಗಮ-೨೦೦೩, ಪು ೬೩೬.

೨. ಡಾ. ಬಸವರಾಜ ಪೋಲಿಸ್ ಪಾಟೀಲ-ಭಾಷಾ ಸಂಗಮ-೨೦೦೩. ಪು-೫೩೧-೫೩೨.

ಈ ಬಗೆಯ ವಚನಗಳು ವಚನ ಸಾಹಿತ್ಯದಲ್ಲಿ ಬರುವುದನ್ನು ಗಮನಿಸಿದಾಗ ಹೊಸ ಸಂಸ್ಕೃತಿಯೊಂದರ ನಿರ್ಮಾಣಕ್ಕೆ ಶರಣರು ಶ್ರೀಕಾರ ಹಾಕಿದರೆಂಬುದು ಉದಿತವಾಗುತ್ತದೆ.

ಹೀಗೆ ಸಂಸ್ಕೃತಿ-ಧರ್ಮದ ಕುರಿತಾದ ಲೇಖನಗಳಲ್ಲಿ ಅನೇಕ ವಚನಗಳು ಹಾಗೂ ಅವುಗಳ ವಿಶ್ಲೇಷಣೆಗಳು ದಾಖಲಾಗಿವೆ.

ಭಾಗ ಐದರಲ್ಲಿ ಡಾ. ಸಂಗಮೇಶ ಸವದತ್ತಿಮಠದ ಭಾಷಾ ವಿಜ್ಞಾನ, ದ್ರಾವಿಡ ಭಾಷಾ ವಿಜ್ಞಾನ, ಸಂಶೋಧನೆ, ನಾಟಕ, ವಿಮರ್ಶೆ, ಜೀವನ ಚರಿತ್ರೆ, ಸಂಪಾದನೆ, ಜಾನಪದ, ಜೀವನ ಚರಿತ್ರೆ ಪ್ರಬಂಧಗಳು ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಗೈದ ಕೃತಿಗಳ ಸಮೀಕ್ಷೆ ಇದರಲ್ಲಿ ಸೇರಿದೆ. ಇಪ್ಪತ್ತು ಲೇಖನಗಳ ಮೂಲಕ ಅವರ ಅರವತ್ತು ಕೃತಿಗಳ ಸಮೀಕ್ಷೆ, ಕೃತಿಗಳ ಮೌಲ್ಯಗಳನ್ನು ವಿವೇಚಿಸಲಾಗಿದೆ.

ಭಾಗ ಆರರಲ್ಲಿ ಡಾ. ಸಂಗಮೇಶ ಸವದತ್ತಿಮಠ ಅವರನ್ನು ಗುರುಗಳೂ, ಶಿಷ್ಯರೂ, ಸಹೋದ್ಯೋಗಿಗಳು, ಆತ್ಮೀಯರು, ಗೆಳೆಯರು, ಹೆಂಡತಿ, ಮಕ್ಕಳು ಕಂಡಂತೆ ಭಾವಪೂರ್ಣವಾಗಿ ದಾಖಲಿಸಿದ್ದಾರೆ.

"ಅರವತ್ತು ಸಂವತ್ಸರಗಳನ್ನು ದಾಟಿ
ಅರವತ್ತು ಕೃತಿಗಳನ್ನು ರಚಿಸಿ
ನಿವೃತ್ತಿಗೆ ಪಾದಾರ್ಪಣೆ ಮಾಡಿದ
ಶ್ರೀ ಸಂಗಮೇಶ್ವರರೇ ನಿಮಗೆ ಶುಭೋದಯವಾಗಲಿ
ಮಹಾತಪಸ್ವಿ ಪ್ರಣವ ಸ್ವರೂಪಿ ಶ್ರೀ ಮಹಾಂತಜ್ಜನವರ
ಮುರಗೋಡದಲ್ಲಿ ಹುಟ್ಟಿ, ನರಗುಂದದಲ್ಲಿ ಬೆಳೆದು,
ಕಲಬುರ್ಗಿಯ ಶರಣರ ಪದತಲದಲ್ಲಿ ಪ್ರತಿಭೆಯನು ಮೆರೆದ
ಶ್ರೀ ಸಂಗಮೇಶ್ವರರೇ ನಿಮಗೆ ಶುಭವಾಗಲಿ|"[೧].

ಈ ಮೇಲಿನ ಪದ್ಯದ ಸಾಲುಗಳ ಮುಖಾಂತ "ಶ್ರೀಮತಿ ಕಮಲಮ್ಮ ವ್ಹಿ. ಸಾಲಿಮಠ ಅವರು ಡಾ. ಸಂಗಮೇಶ ಸವದತ್ತಿಮಠರಿಗೆ ಶುಭ ಹಾರೈಸಿದ್ದಾರೆ. ಇಂಥ ಅನೇಕ ಅಂಶಗಳನ್ನು ಪಾಟೀಲರು ಈ ಭಾಷಾಸಂಗಮ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ.

---

೧. ಡಾ. ಬಸವರಾಜ ಪೋಲಿಸ್ ಪಾಟೀಲ-ಭಾಷಾ ಸಂಗಮ-೨೦೦೩. ಪುಟ-೩೬೬.

ಭಾಗ ಏಳರಲ್ಲಿ ಸವದತ್ತಿಮಠ ನನ್ನ ನಾ ಕಂಡಂತೆ ಲೇಖನದಲ್ಲಿ ಅವರ ಬದುಕಿನ ಹಿನ್ನೋಟಗಳನ್ನು ಮೇಲುಕು ಹಾಕಿದ್ದಾರೆ. ಭಾಗ ಎಂಟರಲ್ಲಿ ಸವದತ್ತಿ ಮಠದ ಸಾಧನೆ ಸಮೀಕ್ಷೆಯ ಹೆಜ್ಜೆ ಗುರುತುಗಳನ್ನು ಹೊರಹಾಕಿದ್ದಾರೆ. ಈ ಒಂದು ಭಾಷಾ ಸಂಗಮ ಅಭಿನಂದನ ಗ್ರಂಥ ಭಾಷಾ ವಿಜ್ಞಾನ – ಭಾಷಾ ವಿದ್ವಾಂಸರು, ಛಂದಸ್ಸು ವ್ಯಾಕರಣಗಳ ಕುರಿತಾದ ಸಮಗ್ರವಾದ ಲೇಖನಗಳನ್ನು ಆಯಾ ಕ್ಷೇತ್ರದಲ್ಲಿ ಪರಿಣತರಿಂದ ವಿದ್ವಾಂಸರಿಂದ ಬರೆಯಿಸಿದ್ದಾರೆ. ಡಾ. ಸವದತ್ತಿಮಠರ ಜೀವನ ಸಾಧನೆಗಳ ಮೆಲುಕು ಹಾಕುವವರಿಗೆ ಇದೊಂದು ಬೈಬಲ್ ಆಗಿದೆ. ಭಾಷಾ ವಿಜ್ಞಾನದ ಕ್ಷೇತ್ರಕ್ಕೆ ಅಭಿನಂದನ ಗ್ರಂಥ ಎನ್‌ಸೈಕ್ಲೋಪೀಡಿಯಾವಾಗಿದೆ. ಇದೊಂದು ಗ್ರಂಥವನ್ನು ಡಾ. ಬಸವರಾಜ ಪೋಲಿಸ್ ಪಾಟೀಲರು ಸಂಪಾದಿಸಿ ಮಹತ್ವದ ಕೃತಿ ಈ ನಾಡಿಗೆ ಅರ್ಪಿಸಿದ್ದಾರೆ. ಅಭಿನಂದನ ಗ್ರಂಥಗಳಿಗೆ ಮಾದರಿ ಗ್ರಂಥವಾಗಿದೆ.

ಸಮದರ್ಶಿ:

ಡಾ. ಬಿ.ಬಿ. ನಾಯಕರು ಐವತ್ತು ವಸಂತಗಳನ್ನು ಕಂಡ ಸಂದರ್ಭದಲ್ಲಿ ಅವರ ಜೀವನ, ಸಾಧನೆ ಮತ್ತು ಸಾಹಿತ್ಯಿಕ ಕೃತಿಗಳ ಮೌಲ್ಯಗಳನ್ನು ಕುರಿತು ಈ ಕೃತಿಯನ್ನು ಹೊರತಂದಿದ್ದಾರೆ. ನಾಡಿನ ಪ್ರಮುಖ ಜಾಗತೀಕರಣ, ಬುಡಕಟ್ಟು, ಸಂಕೀರ್ಣ ಲೇಖನಗಳ ಭಾಗಗಳನ್ನು ಹೊಂದಿವೆ. ಆ ಮೂಲಕ ಡಾ. ನಾಯಕರನ್ನ ಕಂಡಂತೆ, ಅವರ ಕೃತಿಗಳ ಸಮೀಕ್ಷೆ ಎರಡು ಭಾಗ ಸೇರಿ ೫ ಭಾಗಗಳು ಇದರಲ್ಲಿ ಸೇರ್ಪಡೆಗೊಂಡ ೬೦೦ ಪುಟಗಳ ಗ್ರಂಥ ಇದಾಗಿದೆ. ಜಾನಪದ ಬುಡಕಟ್ಟು – ಜಾಗತೀಕರಣ ಕುರಿತಾದ ಚಿಂತನೆ – ಮಂಥನೆಯ ಲೇಕನಗಳು ಆಕರ ಗ್ರಂಥವಾಗಿ ಹೊರಬಂದಿದೆ. ಈ ಅಭಿನಂದನಾ ಗ್ರಂಥವನ್ನು ಡಾ. ಗವಿಸಿದ್ದಪ್ಪ ಎಚ್. ಪಾಟೀಲರ ಜೊತೆಕೂಡಿ ಡಾ. ಬಸವರಾಜ ಪೋಲಿಸ್ ಪಾಟೀಲರು ಹೊರತಂದಿದ್ದಾರೆ.

ಹೇಮ ಸಂಗಮ:

ಶ್ರೀ ಸಂಗಪ್ಪ ಸಾವನ್ನ ಮತ್ತು ಶ್ರೀಮತಿ ಹೇಮಾವತಿ ಸಾವನ್ನ ದಂಪತಿಗಳ ಕುರಿತು ಇನ್ನೂ ರಚನಾ ಹಂತದಲ್ಲಿರುವ ಕೃತಿಯೆ 'ಹೇಮ ಸಂಗ', ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲೂಕಿನ ಗಡಿಕೇಶ್ವರ ಗ್ರಾಮದ ನಿವಾಸಿಗಳಾದ ಈ ದಂಪತಿಗಳು ಶಿಕ್ಷಣ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರ. ದಂಪತಿಗಳಿಬ್ಬರೂ ಶಿಕ್ಷಕರಾಗಿ ವೃತ್ತಿ ಜೀವನವನ್ನಾರಂಭಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಅವರ ಬಾಳನ್ನು ಬೆಳೆಗಿದ್ದಾರೆ. ಇಂಥ ಆದರ್ಶ ದಂಪತಿಗಳು ತಮ್ಮ ಸಾರ್ಥಕ ಬದುಕಿನ ೭೯ ವಸಂತಗಳನ್ನು ಪೂರೈಸಿದ್ದರ ನಿಮಿತ್ತವಾಗಿ ಇವರ ಜೀವನ ಮತ್ತು ಸಾಧನೆಗಳನ್ನು ಕುರಿತಾಗಿ ಡಾ. ಪಾಟೀಲರು ಈ ಕೃತಿಯನ್ನು ರಚಿಸುತ್ತಿದ್ದಾರೆ.

ಅಧ್ಯಾಯ – ೫

ಕರ್ನಾಟಕ ಜಾನಪದ ಕ್ಷೇತ್ರಕ್ಕೆ
ಡಾ. ಬಸವರಾಜ ಪೋಲಿಸ್
ಪಾಟೀಲರ ಕೊಡುಗೆ

ಸಂಶೋಧಕ

ವಿಮರ್ಶಕ

ಪ್ರಕಾಶಕ

ಅಧ್ಯಾಯ–೫

ಕರ್ನಾಟಕ ಜಾನಪದ ಕ್ಷೇತ್ರಕ್ಕೆ ಡಾ. ಬಸವರಾಜ ಪೋಲಿಸ್ ಪಾಟೀಲರ ಕೊಡುಗೆ

ಸಂಶೋಧಕ:

ಸುಮಾರು ೩ ದಶಕಗಳ ಹಿಂದೆ, ಆಗಿನ ಕರ್ನಾಟಕ ವಿಶ್ವವಿದ್ಯಾಲಯುದ ಗುಲಬರ್ಗಾ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರು ಒಬ್ಬ ಸಭ್ಯ, ಸುಸಂಸ್ಕೃತ ವಿದ್ಯಾರ್ಥಿಯಾಗಿದ್ದರು. ಅಫಜಲಪುರ ತಾಲೂಕಿನ ದಿಕ್ಸಂಗಾ (ಬಿ) ಗ್ರಾಮದ ತರುಣನಾಗಿದ್ದ ಬಸವರಾಜರು ಗ್ರಾಮೀಣ ಜಾನಪದ ಪರಿಸರದಲ್ಲಿ ಬೆಳೆದುಬಂದವರು.

ಉತ್ತರ ಕರ್ನಾಟಕದ ಆಗಿನ ಏಳು ಜಿಲ್ಲೆಗಳ ಜಾನಪದ ಕತೆ ಮತ್ತು ಹಾಡುಗಳ ಸಂಗ್ರಹ ಸಂಪಾದನೆಗಳ ಯೋಜನೆಯನ್ನು ಆಗಿನ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಬಿ.ಬಿ. ಹೆಂಡಿ ಅವರ ನೇತೃತ್ವದಲ್ಲಿ ಹಮ್ಮಿಕೊಂಡಾಗ ಡಾ. ಬಸವರಾಜರು ಸಹಾಯಕ ಸಂಶೋಧಕರಾಗಿ ಸೇವೆ ಸಲ್ಲಿಸಿದರು. ತಮ್ಮ ನಿರಂತರ ದುಡಿಮೆ, ಅದಮ್ಯ ಉತ್ಸಾಹ, ಆಸಕ್ತಿಯ ವಿಷಯ, ಹಿತಕರ ವಾತಾವರಣಗಳಿಂದಾಗಿ ಡಾ. ಪಾಟೀಲರು ಉತ್ತಮ ಕಾರ್ಯ ಮಾಡಿ ತಮ್ಮ ಕ್ರಿಯಾಶೀಲತೆಯನ್ನು ಬಹುಬೇಗ ತೋರಿಸಿಕೊಟ್ಟರು. ಸಂಶೋಧನ ಯೋಜನೆಯ ಕಾರ್ಯದೊಂದಿಗೆ ಹೈದ್ರಾಬಾದ ಕರ್ನಾಟಕ ಜಾನಪದ ಸಾಹಿತ್ಯಕುರಿತೇ ಪಿಎಚ್.ಡಿ. ಪದವಿಗಾಗಿ ಸಂಶೋಧನ ಕೈಗೊಂಡು ಪೂರ್ಣಗೊಳಿಸಿದರು.

ಇವರು ಎಂ.ಎ. ಮುಗಿಸಿಕೊಂಡಾದ ಮೇಲೆ ಸಂಶೋಧನಾ ವಿದ್ಯಾರ್ಥಿಯಾಗಿ ಹೈದ್ರಾಬಾದ ಕರ್ನಾಟಕದ ಜಾನಪದ ಅಧ್ಯಯನ ಮಾಡುತ್ತ ಕೊಪ್ಪಳ ಜಿಲ್ಲೆಯಲ್ಲಿ ಕ್ಷೇತ್ರ ಕಾರ್ಯ ಮಾಡಿದ ಪ್ರಥಮ ಜಾನಪದ ಸಂಶೋಧಕರಾಗಿದ್ದಾ.

ಜಾನಪದ ಕ್ಷೇತ್ರವನ್ನು ಆಯ್ದುಕೊಂಡು ಸುಮಾರು ಇಪ್ಪತ್ತು ವರ್ಷ ಈ ಕ್ಷೇತ್ರದಲ್ಲಿ ದುಡಿದಿದ್ದಾರೆ. ಇನ್ನೂ ದುಡಿಯುತ್ತಲೆ ಇದ್ದಾರೆ. ಉತ್ತರ ಕರ್ನಾಟಕದ ಜನಪದ ಅಧ್ಯಯನ ಅದರಲ್ಲೂ ಹೈದ್ರಾಬಾದ ಕರ್ನಾಟಕ ಯೋಜನೆಗೆ ತೊಡಗಿ ಹಗಲಿರುಳು ಶ್ರಮಿಸಿದ್ದಾರೆ. ಅನೇಕ ಕಡೆಯಿಂದ ಹಸ್ತಪ್ರತಿಗಳನ್ನು ಹೆಗಲ ಮೇಲೆ ಹೊತ್ತು ತಂದಿದ್ದಾರೆ. ಈ ಹಸ್ತಪ್ರತಿಗಳಿಂದ ೩ ಸಾವಿರ ಕಥೆಗಳು, ೩ ಸಾವಿರ ಹಾಡುಗಳು

ಸಂಗ್ರಹವಾಗಿವೆ. ಹೈದ್ರಾಬಾದ ಕರ್ನಾಟಕದ ಕೇಂದ್ರ ಸ್ಥಳಗಳನ್ನು ಗುರುತಿಸಿ ಅವುಗಳ ಬಗ್ಗೆ ನಿರರ್ಗಗಳವಾಗಿ ಮಾತನಾಡುತ್ತಾರೆ. ಸಂಶೋಧನೆಯ ಮೂಲಕ ಈ ಭಾಗದ ಸಣ್ಣಾಟಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ಹಾಗೂ ಸಾಕಷ್ಟು ದೊಡ್ಡಾಟಗಳನ್ನು ಸಂಗ್ರಹಿಸಿದ್ದಾರೆ.

ಇವರು ತಮ್ಮ ಸಂಶೋಧನಾ ಪ್ರಬಂಧವಾದ "ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ"ದ ಮೂಲಕ ಈ ಭಾಗದ ಜಾನಪದದ ಮಹತ್ವವನ್ನು ಜಾನಪದ ಲೋಕಕ್ಕೆ ಪರಿಚಯಿಸಿಕೊಟ್ಟಿದ್ದಾರೆ. ಉತ್ತರ ಕರ್ನಾಟಕದ ವಿವಿಧ ಗ್ರಾಮಗಳಿಗೆ ಹೋಗಿ ಕ್ಷೇತ್ರಕಾರ್ಯ ಕೈಗೊಂಡು ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅಮೂಲಾಗ್ರವಾಗಿ ಸಂಗ್ರಹಿಸಿದ್ದಾರೆ. ಈ ಭಾಗದ ಜನಪದ ಕವಿಗಳನ್ನು ಕಲಾವಿದರನ್ನು ಗುರುತಿಸಿ ಅವರಿಂದ ಸಾವಿರಾರು ಜನಪದ ಕಥೆಗಳನ್ನು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅಲ್ಲದೇ ಅವುಗಳನ್ನು ಹಲವು ಮಗ್ಗುಲಗಳಿಂದ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ತಮ್ಮ ೨೫ ವರ್ಷಗಳ ಸುಧೀರ್ಘ ಅವಧಿಯಲ್ಲಿ ಸುಮಾರು ೪೦ ಕ್ಕೂ ಮಿಕ್ಕಿ ಸಂಶೋಧನಾತ್ಮಕ ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಈ ಭಾಗದ ಸಂಪ್ರದಾಯದ ಹಾಡು, ಬಯಲಾಟ, ಲಾವಣಿ, ಜನಪದ ಕಥೆ, ಒಗಟು, ಒಡಬು, ಐತಿಹ್ಯ, ಕಲೆ, ಗ್ರಾಮ ದೇವತೆಗಳನ್ನು ಗುರುತಿಸಿದ್ದಾರೆ. ತತ್ವಪದ ಹಂತಿಪದ ಭಾಷೆಯ ಮೇಲೆ ಪ್ರಭಾವಗೊಂಡ ಅನೇಕ ನೂರಾರು ಕಲೆ ಸಾಹಿತ್ಯಗಳನ್ನು ಹೆಕ್ಕಿ ತೆಗೆದಿದ್ದಾರೆ. ರಾಯಚೂರು ಜಿಲ್ಲೆಯ ಕವಿ ಕಲಾವಿದರು ಕಲಾಮೇಳಗಳನ್ನು ಗುರುತಿಸಿದ್ದಾರೆ.

ಜಾನಪದಕ್ಕೆ ಸಂಬಂದಿಸಿದಂತೆ ಜಾನಪದ ಭಾರತಿ, ಜಾನಪದ ಸಿರಿ, ಜಾನಪದ ಸೌರಭ, ಸಂವೇದನೆ, ಜಾನಪದ ವ್ಯಾಸಂಗ, ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು, ಹೈದ್ರಾಬಾದ ಕರ್ನಾಟಕದ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಲ್ಲದೇ ಕಲಬುರ್ಗಿ ಶ್ರೀ ಶರಣಬಸವೇಶ್ವರರು, ಬಿಡುಗಡೆ, ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪುರೆ, ಎಸ್. ರಾಧಾಕೃಷ್ಣನ್, ಮಾಸ್ತಿ ಮುಂತಾದವರ ಕುರಿತು ಜೀವನ ಚರಿತ್ರೆ, ವ್ಯಕ್ತಿ ಚಿತ್ರಗಳ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಕೃತಿಗಳಲ್ಲಿ ಸಿಂಹಪಾಲು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದವುಗಳಾಗಿವೆ. ಡಾ. ಪಾಟೀಲರ ಕೃತಿಗಳಿಗೆ ಹಲವಾರು ಪ್ರಶಸ್ತಿ ಕರ್ನಾಟಕದ ಸಮಗ್ರ ಸಣ್ಣಾಟಗಳನ್ನು ಸಂಗ್ರಹಿಸಿ ವಿಶ್ಲೇಷಣೆ ನಡೆಸಿದ್ದು, ಹೈದ್ರಾಬಾದ ಕರ್ನಾಟಕದ ಜನಪದ ಕಲೆಗಳನ್ನು ಗುರುತಿಸಿದ್ದು, ಇವರ ಮಹತ್ವದ ಕಾರ್ಯವಾಗಿದೆ. ಜನಪದ ಸಾಹಿತ್ಯ, ಸಂಸ್ಕೃತಿಯಲ್ಲಿ ಇವರು

ಸಲ್ಲಿಸಿದ ಮೌಲಿಕ ಸೇವೆಯನ್ನು ಪರಿಗಣಿಸಿ ೨೦೦೩ ರಲ್ಲಿ ಇವರಿಗೆ ಅಫಜಲಪುರದಲ್ಲಿ ನಡೆದ ಗುಲಬರ್ಗಾ ಜಿಲ್ಲಾ ಜನಪದ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆ ಲಭಿಸಿತ್ತು.

ಡಾ. ಪಾಟೀಲರು ಸಂಗ್ರಹಿಸಿದ ಜಾನಪದ ಸಾಹಿತ್ಯ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹಸ್ತಪ್ರತಿ ಸಂಗ್ರಹಿಸಿ ಇಡಲಾಗಿದೆ. ಗೀ ಗೀ ಕಾವ್ಯಗಳು, ಲಾವಣಿ, ಸಂಪ್ರದಾಯದ ಹಾಡುಗಳು, ಕಲೆಗಳು, ಸಣ್ಣಾಟಗಳು ಎಲ್ಲವುಗಳನ್ನು ಸಂಶೋಧನಾ ಮೂಲಕ ಹೊರ ಹಾಕಿದ್ದಾರೆ.

ವಿಮರ್ಶಕ:

ಉತ್ತರ ಕರ್ನಾಟಕ ಭಾಗದ ಜಾನಪದ ಕಥೆ, ಹಾಡು, ಸಂಪ್ರದಾಯ, ಕಲೆಗಳ ಸ್ವರೂಪ, ಲಕ್ಷಣ, ವಸ್ತುವೈವಿದ್ಯ ಹಾಗೂ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತು ಪಾಟೀಲರು ಸುಧೀರ್ಘವಾಗಿ ಮತ್ತು ಆಧಾರ, ಪ್ರಮಾಣಗಳ ಸಮೇತವಾಗಿ ವಿಶ್ಲೇಷಿಸಿದ್ದಾರೆ.

ಜನಪದ ಕಥೆಗಳ ಮುಖಾಂತರ ಜನಪದರ ಜೀವನದ ಏಳು-ಬೀಳುಗಳು, ಬದುಕಿನ ವಿಧಾನ, ಗುಣಮೌಲ್ಯ, ಆಚಾರ-ವಿಚಾರಗಳಂತಹ ಮೌಲ್ಯಗಳನ್ನು ಕುರಿತು ತಮ್ಮ ಲೇಖನಗಳಲ್ಲಿ ಮತ್ತು ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ.

ಉತ್ತರ ಕರ್ನಾಟಕದ ಭಾಗಗಳಲ್ಲಿ ಪ್ರಮುಖ ಪಾತ್ರ ವಹಿಸಿರುವ ಹರದೇಶಿ-ನಾಗೇಶಿ ಹಾಡಿನ ಸ್ವರೂಪ, ಲಕ್ಷಣ, ಕನ್ನಡದಲ್ಲಿ ಇದು ಬೆಳೆದುಬಂದ ಬಗೆ ಮುಂತಾದ ಪ್ರಮುಖ ಅಂಶಗಳನ್ನು ಹೊರಹಾಕಿ ಚರ್ಚಿಸಿದ್ದಾರೆ. ಈ ಹಾಡುಗಳಿಗೆ ಕಲ್ಗಿ-ತುರಾಯಿ, ಗೀ ಗೀ ಪದ, ಡಪ್ಪಿನ ಹಾಡುಗಳೆಂತಲೂ ಕರೆಯುತ್ತಾರೆ ಹಾಗೂ ಸವಾಲ್-ಜವಾಬ್‌ಗಳೆಂತಲೂ ಕರೆಯುತ್ತಾರೆ ಎಂಬ ಅಂಶವನ್ನು ತಮ್ಮ ಲೇಖನಗಳಲ್ಲಿ ದಾಖಲಿಸಿ ಈ ಉತ್ತರ ಕರ್ನಾಟಕ ಭಾಗದ ಜಾನಪದದ ಮಹತ್ವವನ್ನು ಎತ್ತಿ ತೋರಿಸಿದರು.

ಹರದೇಶಿ-ನಾಗೇಶಿ ಹಾಡುಗಾರರ ಪಟ್ಟಿ, ಹಾಡು ಕಟ್ಟಿದವರ ಪಟ್ಟಿ, ಹರದೇಶಿ-ನಾಗೇಶಿಯ ವೈಶಿಷ್ಟ್ಯತೆಗಳನ್ನು ಹಲವಾರು ಸಾಕ್ಷಾಧಾರಗಳ ಮೂಲಕ ಚರ್ಚಿಸಿ ಇಂಥ ಹೊಸದೊಂದು ಪ್ರಕಾರವನ್ನು ಬೆಳಕಿಗೆ ತಂದಿದ್ದಾರೆ.

ಹೈದ್ರಾಬಾದ ಕರ್ನಾಟಕ ಭಾಗದ ಅದರಲ್ಲೂ ವಿಶೇಷವಾಗಿ ಕಲಬುರ್ಗಿ ಜಿಲ್ಲೆಯ ಜನಪದರ ವಿಶಿಷ್ಟ ಸಂಪ್ರದಾಯ ಮತ್ತು

ಆಚರಣೆಗಳನ್ನು ಬೆಳಕಿಗೆ ತಂದರು. ಕಲಬುರ್ಗಿ ಜಿಲ್ಲೆಯ ಆಚರಣೆಗಳಾದ "ಸಿಡಿ ಆಡುವುದು, ಚುಂಚುರ ಮಾವುರ ತಾಯಿಗೆ ಸೇವೆ ಸಲ್ಲಿಸುವುದು, ಚಟಿಗಿ ಒಡೆಯುವುದು, ಹೇಳಿಕೆ ಹೇಳುವುದು, ಥಂಡಿ ಮಾಡುವುದು, ಕರಿ ಹರಿಯುವುದು, ಅಗ್ಗಿ ತುಳಿಯುವುದು, ಬುಟ್ಟಿಜಾತ್ರೆ ಮಾಡುವುದು"[೧].ಇಂಥ ಆಚರಣೆ, ಮತ್ತು ಸಂಪ್ರದಾಯಗಳ ಕುರಿತು ಸಂಶೋಧನೆ ಕೈಗೊಂಡು ಅಧ್ಯಯನ ನಡೆಸಿ ಇವುಗಳ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಕಲಬುರ್ಗಿ, ಬೀದರ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ನಡೆಯುವ ಸಣ್ಣಾಟಗಳೇ ಹೈದ್ರಾಬಾದ ಕರ್ನಾಟಕಕ್ಕೆ ಇವರು ಕೊಟ್ಟ ಕಾಣಿಕೆಗಳಾಗಿವೆ. ಈ ಭಾಗದ ಪದ್ಯಸಾಹಿತ್ಯದಲ್ಲಿ ಗೀ ಗೀ ಹಾಡುಗಳು, ಹಂತಿ ಹಾಡು, ಭಜನಾ ಹಾಡು, ಭಜನಾ ಮೇಳಗಳು, ಡೊಳ್ಳಿನ ಹಾಡು, ಮೋಹರಂ ಹಾಡುಗಳ ಕುರಿತು ತಮ್ಮ ಕೃತಿಯಲ್ಲಿ ಸುಧೀರ್ಘವಾಗಿ ವಿಶ್ಲೇಷಿಸುವ ಮೂಲಕ ಹೈದ್ರಾಬಾದ ಕರ್ನಾಟಕದಲ್ಲಿ ಅಡಕವಾಗಿರುವ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿ ತೋರಿಸಿದ್ದಾರೆ.

ಈ ಭಾಗದ ಜನಪದ ಸಣ್ಣಾಟಗಳ ಭಾಷೆಯ ಕುರಿತು ಗಂಭೀರವಾಗಿ ಚರ್ಚಿಸುವ ಮೂಲಕ ಈ ಭಾಗದ ಜನರ ಆಡುಮಾತಿನಲ್ಲಿ ಬರುವ ಪಡೆನುಡಿ, ನಾಣ್ನುಡಿ, ಬೈಗುಳ ಮೊದಲಾದವುಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಡಾ. ಪಾಟೀಲರು ಬೇರೆ ಯಾವ ಕ್ಷೇತ್ರಕ್ಕೂ ಹೋಗದೆ ಹಗಲಿರುಳು ಜಾನಪದಕ್ಕೆ ಮೀಸಲಾದ ವ್ಯಕ್ತಿಯಾಗಿ, ಈ ಭಾಗದಲ್ಲಿ ಅಲಕ್ಷಿತಗೊಂಡ ಜನಪದ ಸಾಹಿತ್ಯವನ್ನು ಬೆಳಕಿಗೆ ತಂದರು.

ಪ್ರಕಾಶಕ:

ಹೈದ್ರಾಬಾದ ಕರ್ನಾಟಕ ಪ್ರದೇಶದ ಕೆಲವು ಪ್ರಮುಖ ಪ್ರಕಾಶನ ಸಾಲಿನಲ್ಲಿ ಗುಲಬರ್ಗಾದ ಅಮರ ಪ್ರಕಾಶನ ಒಂದು. ಇದನ್ನು ಆರಂಭಿಸಿದವರು ಡಾ. ಪಾಟೀಲರು ಇವರ ಧರ್ಮಪತ್ನಿಯಾದ ಶ್ರೀಮತಿ ಶಶಿಕಲಾ ಪಾಟೀಲರು 'ಅಮರ ಪ್ರಕಾಶನ'ದ ಮೂಲಕ ಪ್ರಕಾಶಕಿಯಾಗಿದ್ದಾರೆ. ಈ ಪ್ರಕಾಶನದ ಮೊದಲ ಕೃತಿ ಡಾ. ಬಸವರಾಜ ಪೋಲಿಸ್ ಪಾಟೀಲರ 'ಜಾನಪದ ಭಾರತಿ' ೧೯೮೫ ರಲ್ಲಿ

೧.ಡಾ. ಗವಿಸಿದ್ದಪ್ಪ ಎಚ್. ಪಾಟೀಲ–ಬೆಳ್ಳಿ ದಾಂಪತ್ಯ–ಅಮರ ಪ್ರಕಾಶನ–೨೦೦೮, ಪು–೬೬.

ಪ್ರಕಟಗೊಂಡಿತು. ಮೊದಲು ಈ ಪ್ರಕಾಶನಕ್ಕೆ ವಿದ್ಯಾಸಾಗರ ಪ್ರಕಾಶನ ಎಂಬ ಹೆಸರಿತ್ತು. ನಂತರ ಇದು ಅಮರ ಪ್ರಕಾಶನವಾಯಿತು.

ಈ ಭಾಗದಲ್ಲಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶದಿಂದ ಡಾ. ಪಾಟೀಲರು ತಮ್ಮ ಕೃತಿಗಳ ಜೊತೆಗೆ ಇಲ್ಲಿನ ಅನೇಕ ಪ್ರತಿಭಾನ್ವಿತ, ಯುವ ಬರಹಗಾರರನ್ನು ಪ್ರೋತ್ಸಾಹಿಸಿ ಅವರ ಕೃತಿಗಳನ್ನು ಪ್ರಕಟಿಸುವ ಯೋಜನೆಗಳನ್ನು ಹಾಕಿಕೊಂಡರು. ಅಲ್ಲದೇ ಕೆಲ ವಿದ್ವಾಂಸರ ಕೃತಿಗಳನ್ನು ಪ್ರಕಟಪಡಿಸಿದರು. ಈ ಪ್ರಕಾಶನದಿಂದ ಈಗಾಗಲೇ ೨೫ ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡಿವೆ. ಇದರಲ್ಲಿನ ಹಲವು ಲೇಖಕರ ಕೃತಿಗಳಿಗೆ ಪ್ರಶಸ್ತಿ-ಪುರಸ್ಕಾರಗಳು ದೊರೆತಿವೆ.

"ಅಮರ ಪ್ರಕಾಶನ ಸಂಸ್ಥೆ ಪುಸ್ತಕ ಪ್ರಕಟಣೆಯ ಜೊತೆಗೆ ಅನೇಕ ವಿಚಾರ ಸಂಕಿರಣಗಳನ್ನು ನಡೆಸಿಕೊಟ್ಟಿದೆ. ಅದರಲ್ಲಿ 'ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ ಮತ್ತು ಸಿನಿಮಾ' ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣಗಳನ್ನು ನಡೆಸಿಕೊಟ್ಟಿದೆ. ಹಲವು ಸಾಹಿತಿಗಳಿಂದ, ವಿದ್ವಾಂಸರಿಂದ ಪ್ರಬಂಧ ಮಂಡಣೆಯಾಗಿದೆ. ಸಂವಾದ ಗೋಷ್ಠಿ ನಡೆದಿದೆ"[೧].

ಹೈದ್ರಾಬಾದ ಕರ್ನಾಟಕದಂತಹ ಪ್ರದೇಶದಲ್ಲಿ ಪ್ರಕಾಶನ ಸ್ಥಾಪಿಸಿ ಬೆಳೆಸುವುದು ಸಾಮಾನ್ಯ ಕೆಲಸವಲ್ಲ. ಡಾ. ಪಾಟೀಲರು ಇಂಥ ಸಾಹಸದ ಕೆಲಸಕ್ಕೆ ಕೈಹಾಕಿ ಯಶಸ್ವಿಯಾಗಿ ಮುಂದೆ ಸಾಗುತ್ತಿದ್ದಾರೆ. ಈ ಭಾಗದ ಜನರಲ್ಲಿ ಕನ್ನಡ ಭಾಷಾಭಿಮಾನ ಮತ್ತು ಪುಸ್ತಕ ಸಂಸ್ಕೃತಿ ಬೆಳೆಸುವ ಉದ್ದೇಶದಿಂದ ಅಮರ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿದರು. ೧೯೮೫ ರಿಂದ ಇಲ್ಲಿಯವರೆಗೆ ಅನೇಕ ಪುಸ್ತಕಗಳು ಈ ಪ್ರಕಾಶನದಿಂದ ಪ್ರಕಟವಾಗಿವೆ. ಇದರಲ್ಲಿ ಈ ಪ್ರಕಾಶನದ ಪ್ರಕಾಶಕರಾದ ಶ್ರೀಮತಿ ಶಶಿಕಲಾ ಬಸವರಾಜ ಪೋಲಿಸ್ ಪಾಟೀಲರ ಸೇವೆ ಕೂಡಾ ಅಮೋಘವಾದುದು.

ಆರಂಭದಿಂದಲೂ ಜಾನಪದದ ಆಕರ್ಷಣೆಗೆ ಒಳಗಾಗಿದ್ದ ಡಾ. ಬಸವರಾಜ ಪೋಲಿಸ್ ಪಾಟೀಲರು ಕರ್ನಾಟಕ ಜಾನಪದಕ್ಕೆ ಕೊಟ್ಟ ಕೊಡುಗೆ ಉಲ್ಲೇಖನಾರ್ಹ. ಇವರು ಅನೇಕ ರಾಜ್ಯ, ವಿಭಾಗ, ಜಿಲ್ಲಾ ತಾಲೂಕಾ, ಸಮ್ಮೇಳನ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಪ್ರಬಂಧ

೧.ಡಾ. ಬಸವರಾಜ ಪೋಲಿಸ್ ಪಾಟೀಲ-ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ-ಅಮರ ಪ್ರಕಾಶನ-೨೦೦೬, ಮೊದಲ ಮಾತು ಭಾಗದಿಂದ.

ಮಂಡಿಸಿದ್ದಾರೆ. ಆಕಾಶವಾಣಿ ಬೆಂಗಳೂರು, ಕಲಬುರ್ಗಿ, ರಾಯಚೂರು ಕೇಂದ್ರಗಳಿಂದ ಭಾಷಣ, ಸಂದರ್ಶನ, ಚಿಂತನ ಪ್ರಸಾರ ಹೊಂದಿವೆ. ಪುಸ್ತಕ ಅಕಾಡೆಮಿ ಸದಸ್ಯರಾಗಿ, ಕ.ಸಾ.ಪ. ಬೆಂಗಳೂರು ಅಜೀವ ಸದಸ್ಯರಾಗಿ ಗುಲಬರ್ಗಾ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಹಕಾರ ಸಂಘದ ಸಂಸ್ಥಾಪಕ ಸದಸ್ಯರಾಗಿ, ಬಸವತತ್ವ ಪ್ರಚಾರ ಸಮಿತಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇಂಥ ಅನೇಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಡಾ. ಬಸವರಾಜ ಪೋಲಿಸ್ ಪಾಟೀಲರು ಹೈದ್ರಾಬಾದ ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ್ದಾರೆ. ಮತ್ತು ಇನ್ನೂ ಕ್ರಿಯಾಶೀಲರಾಗಿ ಜಾನಪದ ಕ್ಷೇತ್ರಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತಲೇ ಇದ್ದಾರೆ.

ಅಧ್ಯಾಯ – ೬

ಸಮಾರೋಪ

ಅಧ್ಯಾಯ–೬

ಸಮಾರೋಪ

ಜಾನಪದ ಆಕರ್ಷಕವಾದ ಅಧ್ಯಯನದ ವಿಷಯವಾಗಿದೆ. ಇದರ ವೈವಿಧ್ಯ ವಿನೂತನತೆ, ವ್ಯಾಪಕತೆ ಎಲ್ಲಾ ವರ್ಗದ ಜನರನ್ನೂ ಸೆಳೆಯುತ್ತದೆ. ಮಾನವೀಯ ಮೌಲ್ಯಗಳನ್ನು ಅರಿಯಲು ಸಮಾಜದ ಬಗೆಗೆ ತಿಳಿಯಲು, ನಿರ್ಲಕ್ಷ್ಯ ಜನಾಂಗದಬದುಕನ್ನು ಅರ್ಥಮಾಡಿಕೊಳ್ಳಲು, ಸಂಸ್ಕೃತಿಯ ಪರಿಪೂರ್ಣ ಮಾಹಿತಿ ಪಡೆಯಲು, ಶೋಷಿತ ಜನಸಮುದಾಯದ ದನಿಯನ್ನು ಗುರುತಿಸಲು ಜಾನಪದ ನೆರವಾಗುತ್ತದೆ. ಜಾನಪದವನ್ನು ಬಳಸಿಕೊಳ್ಳುವವರ ಮನೋಧರ್ಮದ ಉದಾತ್ತತೆಯ ಮೇಲೆ ಜಾನಪದದ ಮಹತ್ವ ಅಡಗಿರುತ್ತದೆ. ನಾಗರಿಕ ಜೀವನ ನಿಸ್ಸಾರವಾದಾಗ ಜಾನಪದ ಅದನ್ನು ಸಾರವಾಗಿ ಪರಿವರ್ತಿಸಿ ಹೊಸ ಹುರುಪು ತುಂಬಲು ನೆರವಾಗುತ್ತದೆ.

ಜಾನಪದದಲ್ಲಿ ಬಹು ಮುಖ್ಯವಾದ ಪ್ರಕಾರ ಜನಪದ ಸಾಹಿತ್ಯ, ಜಾನಪದದ ಇತರಪ್ರಕಾರಗಳ ಅಧ್ಯಯನ ಪ್ರಾರಂಭವಾಗುವ ಮೊದಲೇ ಜನಪದ ಸಾಹಿತ್ಯ ಬೆಳಕಿಗೆ ಬಂತು. ಜನಪದ ಸಾಹಿತ್ಯವೇ ಜಾನಪದದ ಅಧ್ಯಯನಕ್ಕೆ ನಾಂದಿ ಎನ್ನಬಹುದು. ಜಗತ್ತಿನ ಎಲ್ಲ ಕಡೆ ಜನಪದ ಸಾಹಿತ್ಯ ಜನರ ಆಸಕ್ತಿಯನ್ನು ಸೆಳೆದಿದೆ.

ಸಾಹಿತ್ಯದ ಅಭ್ಯಾಸದಲ್ಲಂತೂ ಜಾನಪದದ ಅಗತ್ಯ ಬಹಳವಾಗಿದೆ. ನಮ್ಮ ಮಹಾಕಾವ್ಯಗಳಲ್ಲಿ ಜಾನಪದ ಅಂಶವಿರುವುದು ತಿಳಿದ ವಿಷಯವೇ ಆಗಿದೆ. ಶಿಷ್ಟ ಸಾಹಿತ್ಯ ಸತ್ವಹೀನವಾದಾಗ ಜಾನಪದದಿಂದ ಸ್ಫೂರ್ತಿ ಪಡೆದಿರುವುದಕ್ಕೆ ಉದಾಹರಣೆಗಳಿವೆ. ಚರಿತ್ರೆಯ ಪುನರ್ ಸೃಷ್ಟಿಯಲ್ಲಿ ಜಾನಪದ ಕೊಡುಗೆಯೂ ನೆರವಾಗುತ್ತದೆ. ಮಾನವ ಶಾಸ್ತ್ರಜ್ಞ "ಬೊಯಾಸ್" "ಜಾನಪದವು ಸಂಸ್ಕೃತಿಯ ಪ್ರತಿಬಿಂಬ" ಎಂದಿದ್ದಾರೆ. ಯಾವುದೇ ಜನಾಂಗದ ಸಂಸ್ಕೃತಿ ಅಧ್ಯಯನದಲ್ಲಿ ಜಾನಪದದ್ದು ಪ್ರಮುಖ ಪಾತ್ರವಾಗಿರುತ್ತದೆ.

ನವೋದಯ ಚಳುವಳಿಯೊಂದಿಗೆ ಜನಪದ ಸಾಹಿತ್ಯವನ್ನು ಕುರಿತು ತೀವ್ರ ಆಸಕ್ತಿ ಬೆಳೆಯಿತು. ಅನೇಕ ವಿದ್ವಾಂಸರು ಸಾಹಿತ್ಯಿಕ ದೃಷ್ಟಿಯಿಂದ ಜಾನಪದ ಅಧ್ಯಯನಕ್ಕೆ ತೊಡಗಿದರು.

ಕಲಬುರ್ಗಿ ಜಿಲ್ಲೆಯ ಜಾನಪದ ವಿದ್ವಾಂಸರಾದ ಡಾ. ಪೋಲಿಸ ಪಾಟೀಲರು ಜಾನಪದ ಸಾಹಿತ್ಯದ ಕ್ಷೇತ್ರದಲ್ಲಿ ಅಪಾರ ಸೇವೆಗೈದಿದ್ದಾರೆ. ಇವರ ಬದುಕು – ಬರಹ ಒಂದೆ ಆಗಿದೆ. ಐವತ್ತು ವರ್ಷಗಳನ್ನು ದಾಟಿದರೂ ಇವರ ಚಟುವಟಿಕೆ ಓಡಾಟ, ಜನಪದದ ಕೆಲಸಕ್ಕಾಗಿ ಮಧ್ಯರಾತ್ರಿಗೆ ಎದ್ದುಹೋಗುವ ಇವರ ಜನಪದ ಕಾಳಜಿ, ಎಂಥವರನ್ನು ದಂಗು ಬಡಿಸುತ್ತದೆ, ಸುಮಾರು ಇಪ್ಪತ್ತೈದು ವರ್ಷ ಜಾನಪದ ಕ್ಷೇತ್ರಕ್ಕಾಗಿ ಕೆಲಸ ಮಾಡಿದ್ದಾರೆ. ಇನ್ನೂ ಮಾಡುತ್ತಲೇ ಇದ್ದಾರೆ.

ಉತ್ತರ ಕರ್ನಾಟಕದ ಅದರಲ್ಲೂ ಹೈದ್ರಾಬಾದ ಕರ್ನಾಟಕದ ವಿವಿಧ ಗ್ರಾಮಗಳಿಗೆ ಹೋಗಿ ಕ್ಷೇತ್ರ, ಕಾರ್ಯ ಕೈಗೊಂಡು ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅಮೂಲಾಗ್ರವಾಗಿ ಸಂಗ್ರಹಿಸಿದ್ದಾರೆ. ಈ ಭಾಗದ ಜನಪದ ಕವಿಗಳನ್ನು, ಕಲಾವಿದರನ್ನು ಗುರುತಿಸಿ ಅವರಿಂದ ಸಾವಿರಾರು ಜನಪದ ಕಥೆಗಳನ್ನು, ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅಲ್ಲದೇ ಅವುಗಳನ್ನು ಹಲವು ಮಗ್ಗಲುಗಳಿಂದ ಅಧ್ಯಯನಕ್ಕೆ ಒಳಪಡಿಸಿದ್ದಾರೆ.

೪೦ ಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳನ್ನು, ಕೃತಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಜಾನಪದ ಸಿರಿ, ಜಾನಪದ ಭಾರತಿ, ಜಾನಪದ ಸೌರಭ, ಸಂವೇದನ, ಜಾನಪದ ವ್ಯಾಸಂಗ, ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು, ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ, ಜಾನಪದ ಚಿಂತನ, ಅಮರ ಜಾನಪದ ಮುಂತಾದ ಜಾನಪದಕ್ಕೆ ಸಂಬಂಧಿಸಿದ ಪ್ರಮುಖ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಲ್ಲದೇ ಕಲಬುರ್ಗಿ ಶ್ರೀ ಶರಣಬಸವೇಶ್ವರರು, ಬಿಡುಗಡೆ, ಶಿಕ್ಷಣ ಶಿಲ್ಪಿ, ಮಹಾದೇವಪ್ಪ ರಾಂಪುರೆ, ಎಸ್. ರಾಧಾಕೃಷ್ಣನ್, ಮಾಸ್ತಿ ಮುಂತಾದ ಜೀವನ ಚರಿತ್ರೆಗೆ ಸಂಬಂಧಿಸಿದ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಕೃತಿಗಳಲ್ಲಿ ಸಿಂಹಪಾಲು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಕೃತಿಗಳಿವೆ.

ಉತ್ತರ ಕರ್ನಾಟಕದ ಜಾನಪದದ ಅನನ್ಯತೆಯೂದ ಹರದೇಶಿ–ನಾಗೇಶಿ ಹಾಡಿನ ಸಂಪ್ರದಾಯ, ಸ್ವರೂಪ, ಲಕ್ಷಣ, ವಸ್ತು ವೈವಿಧ್ಯ

ಹಾಗೂ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತು ಸುದೀರ್ಘವಾಗಿ ಆಧಾರ ಸಮೇತವಾಗಿ ವಿಶ್ಲೇಷಿಸಿರುವುದು ಇವರ ಜಾನಪದ ಅಧ್ಯಯನದ ವ್ಯಾಪ್ತಿಯನ್ನು ಸೂಚಿಸುತ್ತದೆ. ಕಲಬುರ್ಗಿ ಜಿಲ್ಲೆಯ ವಿಶಿಷ್ಟ ಜನಪದ ಆಚರಣೆಗಳಾದ ಸಿಡಿ ಆಡುವುದು, ಚುಂಚುರ ಮಾಪುರ ತಾಯಿಗೆ ಸೇವೆ ಸಲ್ಲಿಸುವುದು ಮುಂತಾದ ವಿಷಯಗಳನ್ನು ತಮ್ಮ ಲೇಖನದಲ್ಲಿ ದಾಖಲಿಸಿ ಅವುಗಳ ಮಹತ್ವವನ್ನು ಶೋಧಿಸಿರುವುದು ಡಾ. ಪಾಟೀಲರ ಜಾನಪದ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಜಾನಪದ ಸಂಪಾದನೆ ಸಂಗ್ರಹ – ಸಂಶೋಧನೆಯಲ್ಲಿ ವಿಶೇಷ ಒಲವುಳ್ಳವರಾಗಿದ್ದಾರೆ. ಉತ್ತರ ಕರ್ನಾಟಕ ಭಾಗದ ಕಲೆ ಸಾಹಿತ್ಯವನ್ನು ಗುರುತಿಸುವ ಮೂಲಕ ಈ ಪ್ರದೇಶದ ವೈಶಿಷ್ಟ್ಯತೆಯನ್ನು ಎತ್ತಿ ತೋರಿಸಿದರು. ಈ ಪ್ರದೇಶದಲ್ಲಿದ್ದ ಜಾನಪದ ಸಂಪತ್ತು ಅರಿತುಕೊಂಡು ಇತರರಿಗೆ ಸಂಶೋಧನೆ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಇವರು ಸಂಗ್ರಹಿಸಿದ ಜಾನಪದ ಸಾಹಿತ್ಯವನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹಸ್ತಪ್ರತಿ ಸಂಗ್ರಹಿಸಿ ಇಡಲಾಗಿದೆ. ಲಾವಣಿ, ಗೀ ಗೀ, ಕಾವ್ಯಗಳು, ಸಂಪ್ರದಾಯ ಹಾಡುಗಳು, ಕಲೆಗಳು ಒಂದೇ ಎರಡೇ ಇದರ ಜೊತೆ ಸಣ್ಣಾಟಗಳು ಎಲ್ಲವುಗಳನ್ನು ಸಂಶೋಧನಾ ಮೂಲಕ ಹೊರಹಾಕಿದ್ದಾರೆ.

ಡಾ. ಪಾಟೀಲರು ಜನಪದ ಕ್ಷೇತ್ರದಲ್ಲಿ ಅಷ್ಟೆ ಕೆಲಸ ಮಾಡಿರದೆ, ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ಅಧ್ಯಯನ ಮಾಡಿರುವುದುಂಟು. ಅಂತೆಯೇ ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಸಂವೇದನ' ಎಂಬ ಹೆಸರಿನ ಕೃತಿಯನ್ನು ೧೯೯೩ ರಲ್ಲಿ ಪ್ರಕಟಿಸಿದ್ದಾರೆ.

ಒಂದು ಪ್ರದೇಶದಲ್ಲಿಯೇ ಇಷ್ಟೊಂದು ಜನಪದ ಸಾಹಿತ್ಯದ ಖಣಿ ಇರುವುದನ್ನು ಡಾ. ಪಾಟೀಲರು ಸಂಶೋಧನೆ ಮೂಲಕ ಹೊರಹಾಕಿದ್ದಾರೆ.

ಕಥೆ, ಕಾವ್ಯ, ಜನಪದ ವೈದ್ಯ, ಜ್ಯೋತಿಷ್ಯ, ವೀರಶೈವ, ಸಾಹಿತ್ಯ, ಹಸ್ತಪ್ರತಿ ಶಾಸ್ತ್ರವಚನ ಸಾಹಿತ್ಯ ಇವರ ಆಸಕ್ತಿಯ ಕ್ಷೇತ್ರವಾಗಿವೆ. ವಚನ ಮತ್ತು ಜಾನಪದ ಸಾಹಿತ್ಯವನ್ನೇ ಸೃಜನವನ್ನಾಗಿ ಮಾಡಿಕೊಂಡು ಅನೇಕ ತಂಡಗಳನ್ನು ತರಬೇತಿಗೊಳಿಸಿ ವಿಶ್ವಸಾಹಿತ್ಯ ಸಮ್ಮೇಳನ ಮೈಸೂರು ಕಾರ್ಯಕ್ರಮದಲ್ಲಿ ಪ್ರದರ್ಶಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ೧೯೮೫ ರಲ್ಲಿ

ಅಮರಪ್ರಕಾಶನ ಸ್ಥಾಪಿಸುವ ಮೂಲಕ ಅನೇಕ ಯುವ ಬರಹಗಾರರ, ಸಾಹಿತಿಗಳ, ವಿದ್ವಾಂಸರ ಮೌಲಿಕ ಕೃತಿಗಳನ್ನು ಪ್ರಕಟಿಸಿ ಈ ಭಾಗದಲ್ಲಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಅನೇಕ ರಾಜ್ಯ ವಿಭಾಗ ಜಿಲ್ಲಾ ತಾಲೂಕಾ ಸಮ್ಮೇಳನ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

ಡಾ. ಶಿವಶರಣ ಪಾಟೀಲ ಜಾವಳಿ ಪ್ರಾಂಶುಪಾಲರು ಹೇಳುವಂತೆ ಡಾ. ಬಸವರಾಜ ಪೋಲಿಸ್ ಪಾಟೀಲರು ತಮ್ಮ ಬಗ್ಗೆ ಎಂದೂ ಯಾರ ಮುಂದೆಯೂ ತುಟಿಬಿಚ್ಚಿ ಏನನ್ನು ಹೇಳಿಕೊಳ್ಳದ, ಸಜ್ಜನಿಕೆಯ ಸಾಕಾರ ಮೂರ್ತಿಯಾಗಿದ್ದಾರೆ. ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳು ಹೊರಹಾಕಿದ್ದಾರೆ. ಆದರೂ ಪ್ರಚಾರ ಬಯಸದ ಅವರು ಮೌನದಲ್ಲಿಯೇ ಮಾಣಿಕ್ಯದ ದೀಪ್ತಿಯನ್ನು ತಮ್ಮ ಕುಂಚದಿಂದ ಗೀಚಿದ್ದಾರೆ.

ಪ್ರಸ್ತುತ ನಿಬಂಧದಲ್ಲಿ ಡಾ. ಪಾಟೀಲರ ಇಲ್ಲಿಯವರೆಗಿನ ಜೀವನ ಮತ್ತು ಸಾಹಿತ್ಯ ಕೃತಿಗಳ ಬಗ್ಗೆ ಮಹತ್ವದ ಅಂಶಗಳನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ಆದರೆ ಇದೇ ಕೊನೆಯ ಪ್ರಯತ್ನವಲ್ಲ ಎಂದೂ ಹೇಳಬಯಸುತ್ತೇನೆ.

ಅನುಬಂಧ

- ಭಾವಚಿತ್ರಗಳು
- ಜೀವನ ವಿವರಗಳು
- ಸಾಧನೆ ಗೌರವ ಪ್ರಶಸ್ತಿಗಳು
- ಅಭಿಪ್ರಾಯಗಳು.
- ಗ್ರಂಥಋಣ

ಭಾವಚಿತ್ರಗಳು



ಮಡದಿ ಮಕ್ಕಳೊಂದಿಗೆ



ಗುಲಬರ್ಗಾ ಜಿಲ್ಲಾ ಪ್ರಥಮ ಜನಪದ ಸಾಹಿತ್ಯ ಮತ್ತು ಕಲಾ ಸಮ್ಮೇಳನದಂದು
'ಎತ್ತಿನ ಬಂಡಿ'ಯಲ್ಲಿ ಸಮ್ಮೇಳನಾಧ್ಯಕ್ಷರ ಮೇರವಣಿಗೆ, ೧೦,೧೧-೦೫-೨೦೦೩



ಸಮ್ಮೇಳನಾಧ್ಯಕ್ಷರ ಭಾಷಣ



ಮಾಜಿ ಸಚಿವರಾದ ಶ್ರೀ ಮಾಲೀಕಯ್ಯಾ ಗುತ್ತೇದಾರ ಅವರಿಂದ ಸಮ್ಮೇಳನಾಧ್ಯಕ್ಷರಿಗೆ
'ಬೆಳ್ಳಿ ಕಿರೀಟ' ಧಾರಣೆ, ಪಕ್ಕದಲ್ಲಿ ಚಿತ್ರನಟಿ ಉಮಾಶ್ರೀ



ಜನಪದ ಕಲಾವಿದರೊಂದಿಗೆ ಸಮ್ಮೇಳನಾಧ್ಯಕ್ಷರು



ಗುಲಬರ್ಗಾ ವಿಶ್ವವಿದ್ಯಾಲಯ,ರಾಜ್ಯೋತ್ಸವ ಪ್ರಶಸ್ತಿ ೨೦೦೪ ರ
'ಅಮರ ಜಾನಪದ' ಕೃತಿಗೆ ಸನ್ಮಾನಿಸುತ್ತಿರುವವರು ಗುಲಬರ್ಗಾ ವಿಶ್ವವಿದ್ಯಾಲಯ
ಕುಲಪತಿ ಪ್ರೊ.ವಿ.ಬಿ.ಕುಟಿನೊ, ಖ್ಯಾತ ಸಾಹಿತಿ ಪ್ರೊ. ಬರಗೂರ ರಾಮಚಂದ್ರಪ್ಪ
ಕುಲಸಚಿವ ರಾಜಣ್ಣ, ಪ್ರಸಾರಾಂಗ ನಿರ್ದೇಶಕ ಡಾ.ಡಿ.ಬಿ ನಾಯಕ



'ಜಾನಪದ ಸಿರಿ', ಗುಲಬರ್ಗಾ ಜಿಲ್ಲಾ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ ಬಿಡುಗಡೆ,೧೦-೦೩-೨೦೦೭ ಸನ್ಮಾನಿಸುತ್ತಿರುವವರು: ಮಾಜಿ ಸಚಿವರು ರೇವುನಾಯಕ ಬೆಳಮಗಿ ಪಕ್ಕದಲ್ಲಿ ಸಾಹಿತಿ ಶ್ರೀಕಂಠ ಕೊಡಿಗೆ, ಸಮ್ಮೇಳನಾಧ್ಯಕ್ಷ ಡಾ.ಡಿ.ಬಿ.ನಾಯಕ



ಡಾ.ಬಸವರಾಜ ಪೋಲಿಸ ಪಾಟೀಲರೊಂದಿಗೆ ಸಂದರ್ಶನ

ಜೀವನ ವಿವರಗಳು

ಹೆಸರು : ಡಾ. ಬಸವರಾಜ ಪೋಲಿಸ್ ಪಾಟೀಲ

ವಿಳಾಸ : ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ-೫೮೫ ೧೦೬.

ಮನೆ ವಿಳಾಸ : ಎಲ್.ಆಯ್.ಜಿ. ೧೭೫, ೩ನೇ ಹಂತ,
ಬಡೇಪುರ ಕಾಲೋನಿ, ವಿಶ್ವವಿದ್ಯಲಯ
ಮಾರ್ಗ, ಗುಲಬರ್ಗಾ-೫೮೫ ೧೦೫.

ಜನ್ಮ ದಿನಾಂಕ : ೦೧-೦೮-೧೯೫೪, ೫೩ ವರ್ಷ.

ಜನ್ಮಸ್ಥಳ : ದಿಕ್ಸಂಗಾ (ಬಿ), ತಾ. ಅಫಜಲಪುರ
ಜಿ. ಗುಲಬರ್ಗಾ.

ಶಿಕ್ಷಣ : ಬಿ.ಎ. ೧೯೭೪, ಶ್ರೀ ಶರಣಬಸವೇಶ್ವರ ಕಲಾ
ಮಹಾವಿದ್ಯಾಲಯ, ಗುಲಬರ್ಗಾ.

: ಎಂ.ಎ. ೧೯೭೬, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ಸ್ನಾತಕೋತ್ತರ ಕೇಂದ್ರ, ಗುಲಬರ್ಗಾ.

ಮಹಾಪ್ರಬಂಧದ ವಿಷಯ: "ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ"
ಒಂದು ಸಾಂಸ್ಕೃತಿಕ ಅಧ್ಯಯನ.

ವಿಶೇಷ ಪರಿಣಿತ ಕ್ಷೇತ್ರ: ಜನಪದ ಸಾಹಿತ್ಯ.

ಆಸಕ್ತಿಯ ಕ್ಷೇತ್ರ : ವಚನ ಸಾಹಿತ್ಯ, ವೀರಶೈವ ಸಾಹಿತ್ಯ.

ಹವ್ಯಾಸ : ಜನಪದ ವೈದ್ಯ, ಜನಪದ ಜ್ಯೋತಿಷ್ಯ,
ಕಥೆ-ಕವನ ರಚಿಸುವ ಗೀಳು ಬಾಲ್ಯದಿಂದ.

ಬೋಧನಾನುಭವ : ಸುಮಾರು ೨೬ ವರ್ಷಗಳಿಂದ ಸ್ನಾತಕ
ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ
ಬೋಧನೆ.

ಸಾಧನೆ–ಗೌರವ, ಪ್ರಶಸ್ತಿಗಳು

ಜನಪದ ಸಂಶೋಧನಾ ಯೋಜನೆ.	:	೧೯೭೭ ರಿಂದ ೧೯೭೯ ರ ವರೆಗೆ ಕರ್ನಾಟಕ ವಿವಿ. ಧಾರವಾಡ ಸ್ನಾತಕೋತ್ತರ ಕೇಂದ್ರ ಗುಲಬರ್ಗಾ ಕನ್ನಡ ವಿಭಾಗದಲ್ಲಿ ಜನಪದ ಸಂಶೋಧನಾ ಯೋಜನೆಯಲ್ಲಿ 'ಸಹಾಯಕ ಸಂಶೋಧಕ' ನೆಂದು ಕೆಲಸ.
ಶೈಕ್ಷಣಿಕ ಕಾರ್ಯಗಳು	:	ಕೊಲ್ಹಾಪುರ ಶಿವಾಜಿ ವಿಶ್ವವಿದ್ಯಾಲಯ, ಬಿ.ಓ.ಎಸ್. ಮತ್ತು ಬಿ.ಓ.ಈ. ಮಂಡಳಿ ಸದಸ್ಯ.
	:	ಸೊಲ್ಲಾಪುರ ವಿಶ್ವವಿದ್ಯಾಲಯ ಬಿ.ಓ.ಈ. ಮಂಡಳಿ ಸದಸ್ಯ.
	:	ಹಂಪಿ ಕನ್ನಡ ವಿಶ್ವವಿದ್ಯಾಲಯ, ಬಿ.ಓ.ಈ. ಮಂಡಳಿ ಸದಸ್ಯ.
	:	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಬಿ.ಓ.ಈ. ಮಂಡಳಿ ಸದಸ್ಯ.
	:	ಗುಲಬರ್ಗಾ ವಿಶ್ವವಿದ್ಯಾಲಯ, ಬಿ.ಓ.ಈ. ಅಧ್ಯಕ್ಷ ಮತ್ತು ವಿಭಾಗೀಯ ಮಂಡಳಿ ಸದಸ್ಯ.
	:	ಗುಲಬರ್ಗಾ ವಿಶ್ವವಿದ್ಯಾಲಯ, ಬಿ.ಓ.ಎಸ್. ಸದಸ್ಯ.
	:	ಪರಿಪಾಲಕರು, ಕೃಷ್ಣಾ ವಸತಿ ನಿಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಮಾರ್ಗದರ್ಶನ	:	ನಾಲ್ಕು ಜನ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ ಒಂಭತ್ತು ಜನ ಎಂ.ಫಿಲ್. ಪದವಿ ಪಡೆದಿದ್ದಾರೆ.
ಪಠ್ಯಗ್ರಂಥ	:	ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಎ. ದ್ವಿತೀಯ ತರಗತಿಗೆ ಮಹಾದೇವಪ್ಪ ರಾಂಪುರೆ ಪುಸ್ತಕ ೨೦೦೦ ರಿಂದ ೨೦೦೭ ರ ವರೆಗೆ ಅಂದರೆ ಎರಡು ಅವಧಿಗೆ ಪಠ್ಯ ಪುಸ್ತಕವಾಗಿತ್ತು.
	:	ಗುಲಬರ್ಗಾ ವಿಶ್ವವಿದ್ಯಾಲಯದ ಎಂ.ಎ. ತರಗತಿಗೆ ಜಾನಪದ ಸಿರಿ, ಜಾನಪದ ಚಿಂತನ, ಹೈದ್ರಾಬಾದ ಕರ್ನಾಟಕ ಜನಪದ ಸಿರಿ, ಜಾನಪದ ಚಿಂತನ, ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ ಪುಸ್ತಕಗಳು ಪರಾಮರ್ಶನ ಗ್ರಂಥಗಳಾಗಿವೆ.
ಪ್ರಶಸ್ತಿಗಳು	:೧.	‘ಜಾನಪದ ಸಿರಿ’ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರಿನ ಗ್ರಂಥ ಪುಸ್ಕಾರ–೧೯೯೦.
	:೨.	ಸಂವೇದನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರಿನ ಗ್ರಂಥ ಪುರಸ್ಕಾರ–೧೯೯೩.
	:೩.	‘ಶಿಕ್ಷಣ ಶಿಲ್ಪಿ’ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರಿನ ಗ್ರಂಥ ಪುರಸ್ಕಾರ–೧೯೯೭.
	:೪.	‘ಜಾನಪದ ಚಿಂತನ’ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರಿನ ಗ್ರಂಥ ಪುರಸ್ಕಾರ–೨೦೦೧.

೫. 'ಅಮರ ಜಾನಪದ' ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತಿ ಪ್ರಶಸ್ತಿ–೨೦೦೪.

೬. 'ಅಮರ ಜಾನಪದ' ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ–೨೦೦೪.

೭. 'ಅಮರ ಜಾನಪದ' ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಗ್ರಂಥ ಪುರಸ್ಕಾರ–೨೦೦೪.

೮. 'ಅಮರ ಜಾನಪದ' ಕೃತಿಗೆ ಕೇರಳ ರಾಜ್ಯದ ಕಾಸರಗೋಡಿನ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿ–೨೦೦೬.

೯. 'ಬಿಡುಗಡೆ' ಕೃತಿಗೆ ಅಪ್ಪ ಪ್ರಶಸ್ತಿ–೨೦೦೬.

೧೦. 'ಜಾನಪದ ತಜ್ಞ' ಸುವರ್ಣ ಕರ್ನಾಟಕ ಪ್ರಶಸ್ತಿ ವಾರದ ಸ್ಫೋಟ ಕನ್ನಡ ವಾರಪತ್ರಿಕೆ, ಗುಲಬರ್ಗಾ–೨೦೦೬.

೧೧. ಜಿಲ್ಲಾ ಕಲಾ ವಿಕಾಸ ಪರಿಷತ್ (ರಿ), ಕೊಪ್ಪಳ, ಸುವರ್ಣ ಕರ್ನಾಟಕ.

೧೨. 'ಸಂಸ್ಕೃತಿ ಶೀಲರು' ಕೃತಿಗೆ 'ಸಾಹಿತ್ಯ ಪ್ರಶಸ್ತಿ' ವಾರದ ಸ್ಫೋಟ ಕನ್ನಡ ವಾರ ಪತ್ರಿಕೆ, ಬೆಂಗಳೂರು–೨೦೦೭.

:೧೩. ತಾ: ೨೭-೦೨-೨೦೦೮ ರಂದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ೨೫ ವರ್ಷ 'ಬೆಳ್ಳಿಹಬ್ಬ' ದಂದು ಜಾನಪದ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಸನ್ಮಾನ ಹಾಗೂ ಪ್ರಶಸ್ತಿ ಪತ್ರ.

ಸಮ್ಮೇಳನಾಧ್ಯಕ್ಷತೆ: ಕಲಬುರ್ಗಿ ಜಿಲ್ಲಾ ಪ್ರಥಮ ಜನಪದ ಸಾಹಿತ್ಯ ಮತ್ತು ಕಲಾ ಸಮ್ಮೇಳನ ಅಫಜಲಪುರ, ಮೇ ೧೦, ೧೧-೨೦೦೩.

ಗೌರವ ಮಾನ-ಸಮ್ಮಾನ :

- ಗೋಷ್ಠಿಯ ಅಧ್ಯಕ್ಷತೆ ಆನೆಗೊಂದಿ ಉತ್ಸವ ೧೯೯೯.
- : ಗೋಷ್ಠಿಯ ಅಧ್ಯಕ್ಷತೆ ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ, ಬೀದರ-೧೯೯೯.
- : ಗೋಷ್ಠಿಯ ಅಧ್ಯಕ್ಷತೆ ಅಫಜಲಪುರ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ-೨೦೦೩.
- : ಉದ್ಘಾಟನೆ ಗೋಷ್ಠಿ ಅಧ್ಯಕ್ಷತೆ ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ ವಿಚಾರ ಸಂಕಿರಣ-೨೦೦೪.
- : ಗೋಷ್ಠಿಯ ಉದ್ಘಾಟನೆ ಕಲಬುರಗಿ ಜಿಲ್ಲಾ ೧೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮಾರ್ಚ ೧೦,೧೧-೨೦೦೭

: ೨೦೦೩ ರಲ್ಲಿ ಅಫಜಲಪುರದಲ್ಲಿ ನಡೆದ ಕಲಬುರಗಿ ಜಿಲ್ಲ ಪ್ರಥಮ ಜನಪದ ಸಾಹಿತ್ಯ ಮತ್ತು ಕಲಾ ಸಮ್ಮೇಳನ ಸ್ಮರಣ ಸಂಚಿಕೆ 'ಜಾನಪದ ಸಿರಿ' ಪುಸ್ತಕ ಬಿಡುಗಡೆಯ ಸಮಾರಂಭದ ಅಧ್ಯಕ್ಷತೆ–೨೦೦೭.

ಸದಸ್ಯತ್ವ : ಪುಸ್ತಕ ಅಕಾಡೆಮಿ ಸಂಸ್ಥಾಪಕ ಸದಸ್ಯ.

: ಅಧ್ಯಕ್ಷರು, ಗುಲಬರ್ಗಾ ವಿಶ್ವವಿದ್ಯಾಲಯ, ಸ್ನಾತಕೋತ್ತರ ವಿದ್ಯಾರ್ಥಿ ಬಳಕೆದಾರರ ಸಹಕಾರ ಸಂಘ, ಗುಲಬರ್ಗಾ.

: ಆಜೀವ ಸದಸ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

: ಸಂಸ್ಥಾಪಕ ಕಾರ್ಯದರ್ಶಿ, ಬಸವ ತತ್ವ ಪ್ರಸಾರ ಸಂಸ್ಥೆ, ಗುಲಬರ್ಗಾ.

: ಆಜೀವ ಸದಸ್ಯ, ಸಂಶೋಧನಾ ವ್ಯಾಸಂಗ ಪತ್ರಿಕೆ.

: ನಿರ್ದೇಶಕರು, ಗುಲಬರ್ಗಾ ವಿಶ್ವವಿದ್ಯಾಲಯ ಸ್ನಾತಕೋತ್ತರ ಶಿಕ್ಷಕರ ಪತ್ತಿನ ಸಹಕಾರ ಸಂಘ, ಗುಲಬರ್ಗಾ.

: ಸಂಪಾದಕರು, ಭಾಷಾ ಸಂಗ, ಡಾ. ಸಂಗಮೇಶ ಸವದತ್ತಿ ಮಠ ಅಭಿನದನ ಸಮಿತಿ, ಗುಲಬರ್ಗಾ.

: ಅಧ್ಯಕ್ಷರು ಮತ್ತು ಸಂಪಾದಕರು,
ಡಾ. ಡಿ.ಬಿ. ನಾಯಕ ಅಭಿನಂದನ
ಸಮಿತಿ, ಗುಲಬರ್ಗಾ.

: ಪುಸ್ತಕ ಚಲುವೆಯ
ಸಲಹೆಗಾರರು.

: ಸದಸ್ಯರು, ಗುಲಬರ್ಗಾ ಜಿಲ್ಲಾ
ಪದವೀಧರ ಮತ್ತು ಸಹಕಾರ ಸಂಘ
ಗುಲಬರ್ಗಾ.

: ಸದಸ್ಯರು, ಕರ್ನಾಟಕ ಜಾನಪದ
ಅಕಾಡೆಮಿ, ಬೆಂಗಳೂರು.
ಸದಸ್ಯರು, ಕರ್ನಾಟಕ ಜಾನಪದ
ಪರಿಷತ್ತು, ಬೆಂಗಳೂರು.

ಪ್ರಕಟಿತ ಕೃತಿಗಳು

:೧. ಕಲಬುರ್ಗಿಯ ಶ್ರೀ ಶರಣಬಸವೇಶ್ವರ
೧೯೮೦.

:೨. ಜಾನಪದ ಭಾರತಿ ೧೯೮೫

:೩. ಜಾನಪದ ಸಿರಿ–೧೯೯೦.

:೪. ಸಂವೇದನ – ೧೯೯೩.

:೫. ಜಾನಪದ ಸೌರಭ–೧೯೯೪.

:೬. ಶಿಕ್ಷಣ ಶಿಲ್ಪಿ–೧೯೯೭

:೭. ಜಾನಪದ ವ್ಯಾಸಂಗ–೧೯೯೮

:೮. ಮಹಾದೇವಪ್ಪಾ ರಾಂಪುರೆ–೨೦೦೦

:೯. ಹೈದ್ರಾಬಾದ ಕರ್ನಾಟಕದ
ಸಣ್ಣಾಟಗಳು–೨೦೦೦.

:೧೦. ಹೈದ್ರಾಬಾದ ಕರ್ನಾಟಕ ಜನಪದ
ಸಾಹಿತ್ಯ–೨೦೦೧.

:೧೧. ಜಾನಪದ ಚಿಂತನ–೨೦೦೧.

:೧೨. ಬಿಡುಗಡೆ–೨೦೦೨

:೧೩. ಭಾಷಾ ಸಂಗಮ–೨೦೦೩.

:೧೪. ಜನಪದ ಕಥೆಗಳ ಸಂಗ್ರಹ-೨೦೦೩

:೧೫. ಅಮರ ಜಾನಪದ-೨೦೦೪.

:೧೬. ಡಾ. ಎಸ್. ರಾಧಾಕೃಷ್ಣನ್-೨೦೦೪

:೧೭. ಜ್ಞಾನಗಂಗಾ-೨೦೦೪

:೧೮. ಡಾ. ಮಾಸ್ತಿ ವೇಂಕಟೇಶ
ಅಯ್ಯಂಗಾರ-೨೦೦೫.

:೧೯. ಜನಪದದಲ್ಲಿ ವೀರಶೈವ ಸಂಸ್ಕೃತಿ-
೨೦೦೫.

:೨೦. ಹರಡೇಕರ ಮಂಜಪ್ಪ-೨೦೦೬.

:೨೧. ಅಮೂಲ್ಯ ಜಾನಪದ-೨೦೦೬.

:೨೨. ಸಂಸ್ಕೃತಿ ಶೀಲರು-೨೦೦೬.

:೨೩. ನಾಗತಿಹಳ್ಳಿ ಚಂದ್ರಶೇಖರ
ಸಾಹಿತ್ಯ-೨೦೦೬.

:೨೪. ಹರದೇಶಿ-ನಾಗೇಶಿ-೨೦೦೭.

:೨೫. ಸಮದರ್ಶಿ-೨೦೦೮.

:೨೬. ಶರಣರು ಮತ್ತು ಜನಪದ-೨೦೦೮.

:೨೮. ನಡುಗನ್ನಡ ಸಾಹಿತ್ಯ ಸಂಗ್ರಹ-೨೦೦೮

:೨೯. ಹೇಮು ಸಂಗಮ (ಅಚ್ಚಿನಲ್ಲಿ)

:೩೦. ಹೈದ್ರಾಬಾದ ಕರ್ನಾಟಕದ ಬೆಳ್ಳಿ
ಸಾಧಕರು (ಅಚ್ಚಿನಲ್ಲಿದೆ).

:೩೧. ಜನಪದ ಗೀತ ಸಾಹಿತ್ಯ ಸಂಗ್ರಹ
(ಅಚ್ಚಿನಲ್ಲ).

ಅಭಿಪ್ರಾಯಗಳು

ತಮ್ಮ ಬಗ್ಗೆ ತುಟಿಬಿಚ್ಚಿ ಏನನ್ನೂ ಹೇಳಿಕೊಳ್ಳದ ಸಜ್ಜನಿಕೆಯ ಡಾ. ಬಸವರಾಜ ಪೋಲಿಸ ಪಾಟೀಲರು ಸಧ್ಯ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಹಂಗಾಮಿ ಅಧ್ಯಾಪಕರೆಂದು ಸೇವೆ ಸಲ್ಲಿಸುತ್ತಿದ್ದಾರೆ. ಈಗಾಗಲೇ "ಕಲಬುರಗಿಯ ಶ್ರೀ ಶರಣಬಸವೇಶ್ವರ" ಕೃತಿಯನ್ನು ನೀಡಿದ ಇವರು ಇದೀಗ 'ಜಾನಪದ ಭಾರತಿ' ಕೃತಿಯನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ಅರ್ಪಿಸುತ್ತಿದ್ದಾರೆ. ಅವರ ಲೆಕ್ಕಣಿಕೆಯಿಂದ ಅನೇಕಾನೇಕ ಕೃತಿಗಳು ಮೂಡಿಬರಬೇಕಾಗಿದೆ.

ಪ್ರೋ. ಶಿವಶರಣ ಪಾಟೀಲ ಜವಾಳಿ
(ಜಾನಪದ ಭಾರತಿ ಬೆನ್ನುಡಿಯಿಂದ) ೧೯೮೫.

ಡಾ. ಬಸವರಾಜ ಪೋಲಿಸ್ ಪಾಟೀಲರು ಒಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ಜಾನಪದದ ಬಗೆಗೆ ಸಮೀಕ್ಷೆ - ವಿಶ್ಲೇಷಣೆ ಮಾಡಿರುವುದು ನೋಡಿದರೆ ಜಾನಪದ ಲೋಕ ಬೆರಗುಗೊಳಿಸುವಂತದ್ದು, ಗ್ರಾಮೀಣ ಪ್ರದೇಶಗಳ ನೇರ ಸಂಪರ್ಕ, ಆ ನೆಲದ ಸಂಸ್ಕೃತಿಯ ಪರಿಚಯವಿಲ್ಲದೆ ಇಂತಹ ತರಲ್ಪರ್ಶಿ ಶೋಧ ಸಾಧ್ಯವಿಲ್ಲ.

ಡಾ. ಎಸ್. ವಿದ್ಯಾಶಂಕರ, ಬೆಂಗಳೂರು
(ಜಾನಪದ ಚಿಂತನ ಬೆನ್ನುಡಿ ೨೦೦೧)

ಉದಯೋನ್ಮುಖ ಬರಹಗಾರರ ಬಳಗವು ಕಲಬುರ್ಗಿ ಜಿಲ್ಲಾ ಜಾನಪದ ಸಾಹಿತ್ಯ ಮತ್ತು ಕಲಾ ಸಮ್ಮೇಳನವನ್ನು ಪ್ರಪ್ರಥಮವಾಗಿ ಏರ್ಪಡಿಸಿದುದು ಕಲಬುರ್ಗಿಯ ಇತಿಹಾಸದಲ್ಲಿ ದಾಖಲಾಗುವ ಸಂಗತಿಯಾಗಿದೆ. ಮತ್ತು ಈ ಸಮ್ಮೇಳನಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯುದ ಕನ್ನಡ ಅಧ್ಯಯನ ಸಂಸ್ಥೆಯ ಪ್ರವಾಚಕರಾದ ಡಾ. ಬಸವರಾಜ ಪೋಲಿಸ್ ಪಾಟೀಲ ಅವರನ್ನು ಸಮ್ಮೇಳನಾಧ್ಯಕ್ಷರಾಗಿ ನೇಮಕ ಮಾಡಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಸಮ್ಮೇಳನಾಧ್ಯಕ್ಷರಾದ ಡಾ. ಬಸವರಾಜ ಪೋಲಿಸ ಪಾಟೀಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಡಾ. ಸಂಗಮೇಶ ಸವದತ್ತಿಮಠ(ದಿ: ೧೦-೦೫-೨೦೦೩)
ನಿವೃತ್ತ ಪ್ರಾಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

ಡಾ. ಬಸವರಾಜ ಪೋಲಿಸ್ ಪಾಟೀಲರು ಮಿತ ಭಾಷಿಗಳು, ಸೂಕ್ಷ್ಮ ಗ್ರಾಹಿಗಳು, ಗುಲಬರ್ಗಾ ವಿಶ್ವವಿದ್ಯಾಲಯುದಲ್ಲಿ ಕನ್ನಡ ಪ್ರವಾಚಕರಾಗಿದ್ದಾರೆ. ಇವರ ಪ್ರೀಯವಾದ ಕ್ಷೇತ್ರ ಜಾನಪದ ಅಧ್ಯಯನ. 'ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ' ಇವರ ಸಂಶೋಧನಾ ಮಹಾಪ್ರಬಂಧವಾಗಿದೆ. ಜಾನಪದವನ್ನು ಕುರಿತು ಹತ್ತಾರು ಕೃತಿಗಳನ್ನು ಹೊರತಂದಿದ್ದಾರೆ.

ಪ್ರೋ. ಬಾಲಚಂದ್ರ ಜಯಶೆಟ್ಟಿ

ಕರ್ನಾಟಕದ ಪ್ರಮುಖ ಜಾನಪದ ವಿದ್ವಾಂಸರಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರದು ಎದ್ದು ಕಾಣುವ ಹೆಸರು. ಜೀವನವಿಡಿ ಈ ಕ್ಷೇತ್ರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಕೆಲವೇ ವಿದ್ವಾಂಸರಲ್ಲಿ ಇವರೂ ಒಬ್ಬರು. "ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ" ಇದುಇವರ ಸಂಶೋಧನಾ ಮಹಾಪ್ರಬಂಧ. ಸಾಹಿತ್ಯ ಮುಖೇನ ಜಾನಪದ ಭೌತಿಕ ಹಾಗೂ ವೈಜ್ಞಾನಿಕ ಬಗೆಗಳನ್ನು ಅಭಿವ್ಯಕ್ತಿಸುವ ವಿಶಿಷ್ಟ ದೃಷ್ಟಿ ಇಲ್ಲಿದೆ.

ಜಾನಪದ ಸಿರಿ, ಜಾನಪದ ಸೌರಭ, ಅಮರ ಜಾನಪದ ಹೀಗೆ ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಪ್ರಕಟಿಸಿರುವುದು ಇವರ ಜಾನಪದ ಕ್ಷೇತ್ರದ ಅಧ್ಯಯನದ ವಿಸ್ತಾರ ಮತ್ತು ಆಳಗಳಿಗೆ ಸಾಕ್ಷಿಯಾಗಿದೆ.

ವ್ಯಾಪಕವಾದ ವಿಷಯ ಸಂಗ್ರಹ, ವೈಜ್ಞಾನಿಕ ವಿಶ್ಲೇಷಣೆ, ದೇಶೀಯ ಸಿದ್ಧಾಂತದ ದೃಷ್ಟಿಕೋನಗಳು ಇವರ ಕೃತಿಗಳಲ್ಲಿ ಎದ್ದು-ಕಾಣುವ ಅಂಶಗಳು. ಆಧುನಿಕತೆಯ ಪ್ರಭಾವದಿಂದಾಗಿ ಸೊರಗುತ್ತಿರುವ ಜಾನಪದ ಪ್ರಪಂಚವನ್ನು ಆದಷ್ಟು ಪ್ರಮಾಣದಲ್ಲಿ ದಾಖಲಿಸುವ, ದೇಸಿ ನೆಲೆಯಲ್ಲಿ ಅದನ್ನು ಪರಿಭಾವಿಸುವ, ಆ ಮೂಲಕ ಸಂಸ್ಕೃತಿಯ ಅನನ್ಯತೆಯನ್ನು ಕಂಡುಕೊಳ್ಳುವ ಬಗೆ ಇಂದಿನ ಜರೂರಿಯಾಗಿದೆ. ಇದನ್ನು ಡಾ. ಬಸವರಾಜ ಪೋಲಿಸ ಪಾಟೀಲರು ಹಲವಾರು ವರ್ಷಗಳಿಂದಲೂ ಮಾಡುತ್ತಿರುವುದು ಇಂದಿನ ಅಧ್ಯಯನಕಾರಿಗಾಗಿ ದಿಕ್ಸೂಚಿಯಾಗಿದೆ.

ಡಾ. ಡಿ.ಬಿ. ನಾಯಕ

(ಅಮೂಲ್ಯ ಜಾನಪದ ಬೆನ್ನುಡಿಯಿಂದ ೨೦೦೬)

ಹೈದ್ರಾಬಾದ ಕರ್ನಾಟಕ ಪ್ರದೇಶದ ಜಾನಪದ ತಜ್ಞರಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲ ಅವರ ಹೆಸರು ಎದ್ದು ಕಾಣುವಂಥದ್ದು. ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ ಹಾಗೂ ಸಂಶೋಧನೆಯಲ್ಲಿ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡವರು.

'ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ' ಅವರ ಪಿಎಚ್.ಡಿ. ಮಹಾಪ್ರಬಂಧ. 'ಅಮರ ಜಾನಪದ' 'ಬಿಡುಗಡೆ', 'ಜಾನಪದ ಭಾರತಿ', 'ಮಹಾದೇವಪ್ಪ ರಾಂಪುರೆ' ಇವು ಅವರ ಇನ್ನಿತರ ಕೃತಿಗಳು. ಸಧ್ಯ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವಾಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ಪಾಟೀಲರು ಹೈದ್ರಾಬಾದ ಕರ್ನಾಟಕದ ವಿವಿಧ ಜನಪದ ಸಾಹಿತ್ಯ ಪ್ರಕಾರಗಳನ್ನು, ಜನಪದ ಕಲೆಗಳನ್ನು ಸಾಂಸ್ಕೃತಿಕವಾಗಿ ಇಟ್ಟುಕೊಂಡು ಅಧ್ಯಯನ ನಡೆಸಿದ್ದಾರೆ. ವಿಶೇಷವಾಗಿ ಇವರು ಈ ಭಾಗದ ಸಣ್ಣಾಟ, ದೊಡ್ಡಾಟಗಳನ್ನು ಸಂಗ್ರಹಿಸಿ ಅವುಗಳ ಮೇಲೆ ಹೊಸ ಬೆಳಕು ಬೀರುವ ಲೇಖನಗಳನ್ನು ಬರೆದಿದ್ದಾರೆ.

ಜನಪದ ಸಾಹಿತ್ಯ, ಸಂಸ್ಕೃತಿಯಲ್ಲಿ ಇವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ೨೦೦೩ ರಲ್ಲಿ ಇವರಿಗೆ ಅಫಜಲಪುರದಲ್ಲಿ ನಡೆದ ಗುಲಬರ್ಗಾ ಜಿಲ್ಲಾ ಜನಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಲಭಿಸಿತ್ತು. ಇವರ 'ಅಮರ ಜಾನಪದ' ಕೃತಿಗೆ ಹಲವು ಪ್ರಶಸ್ತಿ ಲಭಿಸಿದುದು ಹೆಮ್ಮೆಯ ಸಂಗತಿ.

ಶಿಸ್ತು, ಸರಳತೆ, ಸೌಜನ್ಯ, ಅಧ್ಯಯನ ಶೀಲತೆಗೆ ಡಾ. ಬಸವರಾಜ ಪೋಲಿಸ್ ಪಾಟೀಲರು ಹೆಸರಾಗಿದ್ದಾರೆ.

ಡಾ. ವ್ಹಿ.ಜಿ. ಪೂಜಾರ
(ಸಂಸ್ಕೃತಿ ಶೀಲರು ಬೆನ್ನುಡಿಯಿಂದ ೨೦೦೬)

ಎಲೆಮರೆಯ ಕಾಯಿಯಂತೆ ಕಳೆದ ಎರಡುದಶಕಗಳ ಕಾಲ ಜಾನಪದದಲ್ಲಿ ಕ್ಷೇತ್ರ ಕಾರ್ಯ ಮಾಡುತ್ತಾ ಜಾನಪದವನ್ನೇ ನಿಮ್ಮ ಉಸಿರಾಗಿಸಿಕೊಂಡಿರುವ ನೀವು ಅನೇಕ ಮಹತ್ತರವಾದ ಕೃತಿಗಳನ್ನು ನೀಡುತ್ತಾ ಬಂದಿರುವುದು, ಸಾರಸ್ವರ ಲೋಕಕ್ಕೆ ಗೊತ್ತಿರುವ ಸಂಗತಿ... ಜನ ಜಂಗುಳಿಯಲ್ಲಿರುವುದಕ್ಕಿಂತ ಏಕಾಂತ ಬಯಸುವ, ಸಾರ್ವಜನಿಕವಾಗಿ ಪ್ರದರ್ಶನಗೊಳ್ಳುವುದಕ್ಕಿಂತ ಪ್ರಚಾರದಿಂದ ದೂರ ಇರುವವರು ನೀವು.

ಎಚ್.ಎಸ್. ಪಾಟೀಲ, ಕೊಪ್ಪಳ

ಡಾ. ಪೋಲಿಸ್ ಪಾಟೀಲರು ಹೈದ್ರಾಬಾದ ಕರ್ನಾಟಕದಲ್ಲಿ ಜಾನಪದ ಎಂದರೇನು? ಎಂದುಕೇಳುತ್ತಿದ್ದ ಸಂದರ್ಭದಲ್ಲಿ ಅಪಾರ ಜಾನಪದ ಕ್ಷೇತ್ರ ಕಾರ್ಯ ಕೈಗೊಂಡು ಮೂಲ ಜನಪದ ಸಾಹಿತ್ಯದಸೊಗಸು, ಸಂಪತ್ತನ್ನು ಉಳಿಸಿಕೊಂಡು ಬಂದ ಅಪರೂಪದ ಜಾನಪದ ವಿದ್ವಾಂಸರು.

ಗವಿ ಸಿದ್ದಪ್ಪಾ ಎಚ್. ಪಾಟೀಲ, ಕಲಬುರ್ಗಿ

ಡಾ. ಬಸವರಾಜ ಪೋಲಿಸ್ ಪಾಟೀಲರು ಈ ಭಾಗದ ಜನಫದ ಸಾಹಿತ್ಯವನ್ನು ಸಂಗ್ರಹಿಸಿ-ಸಂಪಾದಿಸಿ ಪ್ರಕಟಿಸುವ ಕಾರ್ಯದಲ್ಲಿ ನಿರತರಾದ ವಿರಳ ಜಾನಪದ ತಜ್ಞರಲ್ಲಿ ಒಬ್ಬರಾಗಿದ್ದಾರೆ.

ಜಯದೇವಿ ಎಂ. ಗಾಯಕವಾಡ, ಹುಮನಾಬಾದ

ಡಾ. ಬಸವರಜರು ಸಂಶೋಧನೆ, ಬರವಣಿಗೆ, ಅಧ್ಯಯನ, ಅಧ್ಯಾಪನಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಜನಪದ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಇವರು ತಮ್ಮ ಬೆಂಗಳೂರಿನ ಸೇವಾವಧಿಯಲ್ಲಿದ್ದು ರಚಿಸಿದ ಕೃತಿಗಳು ಓದುಗರನ್ನು ತೀವ್ರ ಆಕರ್ಷಿಸಿದ್ದವು.

ಪ್ರೋ. ಎಸ್.ಕೆ. ಸೀರೆ, ಬೆಂಗಳೂರು

ಕರ್ನಾಟಕದ ಜಾನಪದ ವಿದ್ವಾಂಸರಲ್ಲಿ ಡಾ. ಬಸವರಾಜ ಪೋಲಿಸ್ ಪಾಟೀಲರು ಒಬ್ಬರು. ಇವರು ವಿಶೇಷವಾಗಿ ಹೈದ್ರಾಬಾದ ಕರ್ನಾಟಕ ಭಾಗದ ಜನಪದ ಕ್ಷೇತ್ರದಲ್ಲಿ ಕೃಷಿಗಯದಿದ್ದಾರೆ... ಸುಧೀರ್ಘವಾದ ಕ್ಷೇತ್ರಕಾರ್ಯ, ತೌಲನಿಕ ದೃಷ್ಟಿಕೋನ, ದೇಶಿಯತೆಯ ಸಂಪೂರ್ಣ ಜ್ಞಾನವನ್ನು ಸಮಕಾಲೀನ ಸಂದರ್ಭದಲ್ಲಿಟ್ಟು ಚರ್ಚೆ ಮಾಡಿದ ಮಹತ್ವದ ಪ್ರಾದೇಶಿಕ ಕೃತಿ ಇದಾಗಿದೆ.

ಡಾ. ಹರಿಶ್ಚಂದ್ರ ದಿಗ್ಸಂಗಿಕರ್, ಹಂಪಿ

ಗ್ರಂಥಋಣ

ಕ್ರ. ಸಂ.	ಲೇಖಕರ ಹೆಸರು	ಗ್ರಂಥದ ಹೆಸರು	ಪ್ರಕಾಶನ / ಪ್ರಕಟಿತ ವರ್ಷ
೧	ಡಾ. ಬಸವರಾಜ ಪೋಲಿಸ ಪಾಟೀಲ	ಬಿಡುಗಡೆ	ಅಮರ ಪ್ರಕಾಶನ ಗುಲಬರ್ಗಾ-೨೦೦೨
೨	ಡಾ. ಗವಿಸಿದ್ದಪ್ಪ ಎಚ್. ಪಾಟೀಲ	ಬೆಳ್ಳಿ ದಾಂಪತ್ಯ	ಅಮರ ಪ್ರಕಾಶನ ಗುಲಬರ್ಗಾ-೨೦೦೮
೩	ಡಾ. ಬಸವರಾಜ. ಪೋಲಿಸ ಪಾಟೀಲ	ಮಹಾದೇವಪ್ಪ ರಾಂಪೂರೆ	ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೨೦೦೫
೪	ಡಾ. ಬಸವರಾಜ ಪೋಲಿಸ ಪಾಟೀಲ	ಜನಪದದಲ್ಲಿ ವೀರಶೈವ ಸಂಸ್ಕೃತಿ	ಶ್ರೀ ಮದ್ವಿರಶೈವ ಸದ್ಬೋಧನಾ ಹುಬ್ಬಳ್ಳಿ-೨೦೦೬
೫	ಡಾ. ಬಸವರಾಜ ಪೋಲಿಸ ಪಾಟೀಲ	ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು	ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೧೯೯೯
೬	ಡಾ. ಬಸವರಾಜ ಪೋಲಿಸ ಪಾಟೀಲ	ಹರಡೇಕರ ಮಂಜಪ್ಪ	ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ ಗುಲಬರ್ಗಾ-೨೦೦೬
೭	ಡಾ. ಬಸವರಾಜ. ಪೋಲಿಸ ಪಾಟೀಲ	ಜಾನಪದ ಸೌರಭ	ಅಮರ ಪ್ರಕಾಶನ ಗುಲಗರ್ಬಾ-೧೯೯೪
೮	ಡಾ. ಬಸವರಾಜ ಪೋಲಿಸ ಪಾಟೀಲ	ಜಾನಪದ ಭಾರತಿ	ವಿದ್ಯಾಸಾಗರ ಪ್ರಕಾಶನ ಗುಲಬರ್ಗಾ-೧೯೮೫
೯	ಡಾ. ಬಸವರಾಜ ಪೋಲಿಸ ಪಾಟೀಲ	ಮಹಾದೇವಪ್ಪ ರಾಂಪುರೆ	ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ-೨೦೦೬

೧೦	ಡಾ. ಬಸವರಾಜ ಪೋಲಿಸ ಪಾಟೀಲ	ಮಾಸ್ತಿ ವೇಂಕಟೇಶ ಅಯ್ಯಂಗಾರ	ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮು, ಗುಲಬರ್ಗಾ-೨೦೦೫
೧೧	ಡಾ. ಬಸವರಾಜ ಪೋಲಿಸ ಪಾಟೀಲ	ಜಾನಪದ ಸಿರಿ	ವಿದ್ಯಾಸಾಗರ ಪ್ರಕಾಶನ ಗುಲಬರ್ಗಾ-೧೯೯೧
೧೨	ಡಾ. ಬಸವರಾಜ ಪೋಲಿಸ ಪಾಟೀಲ	ಅಮರ ಜಾನಪದ	ಅಮರ ಪ್ರಕಾಶನ ಗುಲಬರ್ಗಾ-೨೦೦೪
೧೩	ಡಾ. ಬಸವರಾಜ ಪೋಲಿಸ ಪಾಟೀಲ	ಸಂಸ್ಕೃತಿಶೀಲರು	ಅಮರ ಪ್ರಕಾಶನ ಗುಲಬರ್ಗಾ-೨೦೦೬
೧೪	ಡಾ. ಬಸವರಾಜ ಪೋಲಿಸ ಪಾಟೀಲ	ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪುರೆ	ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ, ಗುಲಬರ್ಗಾ-೧೯೯೭
೧೫	ಪ್ರೋ. ಡಿ. ಲಿಂಗಯ್ಯ ಮತ್ತು ಡಾ. ಕೆ.ಆರ್. ಸಂಧ್ಯಾರೆಡ್ಡಿ	ಜಾನಪದ ಸ್ವರೂಪ ಮತ್ತು ಸಾಹಿತ್ಯ	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೨೦೦೬
೧೬	ರಾಜಪ್ಪಾ ದಳವಾಯಿ	ಕನ್ನಡ ಸಾಹಿತ್ಯ ಕೋಶ	ಕದಿರು ಪ್ರಕಾಶನ ಮೈಸೂರು-೧೯೯೬
೧೭	ವೀರಭದ್ರ ಶಿಲ್ಪಿ ನೇಲೋಗಿ	ಜಾನಪದ ಸಿರಿ (ಸ್ಮರಣ ಸಂಚಿಕೆ)	ಉದಯೋನ್ಮುಖ ಯುವ ಬರಹಗಾರರ ಬಳಗ, ಗುಲಬರ್ಗಾ-೨೦೦೭
೧೮	ಡಾ. ಬಸವರಾಜ ಪೋಲಿಸ ಪಾಟೀಲ	ನಡುಗನ್ನಡ ಸಾಹಿತ್ಯ ಸಂಗ್ರಹ	ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ-೨೦೦೭
೧೯	ಡಾ. ಬಸವರಾಜ ಪೋಲಿಸ ಪಾಟೀಲ	ಭಾಷಾ ಸಂಗಮ	ಡಾ. ಸಂಗಮೇಶ ಸವದತ್ತಿಮಠ ಅಭಿನಂದನಾ ಸಮಿತಿ ಗುಲಬರ್ಗಾ

೨೦	ಡಾ. ಡಿ.ಬಿ. ನಾಯಕ	ಜ್ಞಾನಗಂಗಾ	ಕನ್ನಡ ಸಾಹಿತ್ಯ ಸಂಘ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ–೨೦೦೪
೨೧	ಡಾ. ಬಸವರಾಜ ಪೋಲಿಸ ಪಾಟೀಲ	ಜನಪದ ಸಾಹಿತ್ಯ: ಶರಣರು	ಅಮರಪ್ರಕಾಶನ ಗುಲಬರ್ಗಾ–೨೦೦೮
೨೨	ಡಾ. ಬಸವರಾಜ ಪೋಲಿಸ ಪಾಟೀಲ	ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ	ಅಮರಪ್ರಕಾಶನ ಗುಲಬರ್ಗಾ–೨೦೦೬
೨೩	ಡಾ. ಬಸವರಾಜ ಪೋಲಿಸ ಪಾಟೀಲ	ಅಮೂಲ್ಯ ಜಾನಪದ	ಅಮರಪ್ರಕಾಶನ ಗುಲಬರ್ಗಾ–೨೦೦೬